ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 8 ಭಾನುವಾರ 2025

ಸಂಪುಟ: 46 | ಸಂಚಿಕೆ: 53 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಮೈಸೂರಲ್ಲಿ ಮುಸ್ಲಿಂ ಬಾಂಧವರ ಬಕ್ರೀದ್ ಸಾಮೂಹಿಕ ಪ್ರಾರ್ಥನೆ





ಮೈಸೂರು ತಿಲಕ್‌ನಗರದಲ್ಲಿರುವ ಈದ್ಗಾ ಮೈದಾನದಲ್ಲಿ ಶನಿವಾರ ನಡೆದ ಬಕ್ರೀದ್ ಸಾಮೂಹಿಕ ವಿಶೇಷ ಪ್ರಾರ್ಥನೆಯಲ್ಲಿ ಮೈಸೂರು ಸರ್ ಖಾಜಿ ಮೌಲಾನ ಮೊಹಮದ್ ಉಸ್ಮಾನ ಪರೀಫ್ ಅವರು ಸಂದೇಶ ನೀಡಿದರು. ಈ ವೇಳೆ ಸಾವಿರಾರು ಮುಸ್ಲಿಂ ಬಾಂಧವರು ಪಾಲ್ಗೊಂಡಿದ್ದರು.

ಮೈಸೂರು, ಜೂ.7 (ಆರ್‌ಕೆ)– ಮೈಸೂರಿನಲ್ಲಿ ಮುಸ್ಲಿಂ ಬಾಂಧವರು ಶನಿವಾರ ಬಕ್ರೀದ್ ಹಬ್ಬವನ್ನು ಆಚರಿಸಿದರು. ಮೈಸೂರು ತಿಲಕ್‌ನಗರದ ಹಳೇ ಈದ್ಗಾ ಮೈದಾನದಲ್ಲಿ ಆಯೋಜಿಸಿದ್ದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದ ಮೈಸೂರು ಸರ್‌ಖಾಜಿ ಹಜರತ್ ಮೌಲಾನ ಮೊಹಮದ್ ಉಸ್ಮಾನ ಷರೀಫ್ ಅವರು ಬಕ್ರೀದ್ ಸಂದೇಶ ನೀಡಿದರು.

ಈ ಸಂದರ್ಭ ಮಾತನಾಡಿದ ಅವರು, ಪ್ರವಾಸಿ ಇಬ್ರಾಹಿಂ ಖಲೀಲುಲ್ಲಾ ಅವರು ತಮ್ಮ ಮಗನನ್ನು ತ್ಯಾಗ ಮಾಡಿದ ಸ್ಮರಣಾರ್ಥ ಆಚರಿಸುತ್ತಿರುವ ಈ ಹಬ್ಬದ ಹಿನ್ನೆಲೆಯಲ್ಲಿ ತ್ಯಾಗದ ಸಂಕೇತವಾಗಿ ಪ್ರಾಣಿಗಳನ್ನು ಬಲಿ ಕೊಡಲಾಗುತ್ತಿದೆ ಎಂದರು.

ನಿಮ್ಮ ಮನೆ ಸುತ್ತ ಹಾಗೂ ನಗರವನ್ನು ಸ್ವಚ್ಛವಾಗಿರಿಸಿ. ಪ್ರಾಣಿ ಬಲಿ ನೀಡಿದ ನಂತರ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬಿಸಾಡಬೇಡಿ ಎಂದ ಅವರು, ಎಲ್ಲರೊಂದಿಗೆ ಸೋದರತ್ವದಿಂದ ಸಹಬಾಳ್ವೆ ನಡೆಸಿ ಶಾಂತಿ, ನೆಮ್ಮದಿ ಹಾಗೂ ಜನರ ಯೋಗಕ್ಷೇಮ ಕಾಪಾಡಲು ಪ್ರತಿಯೊಬ್ಬರೂ ಕಟಿಬದ್ಧರಾಗಿರಬೇಕು ಎಂದು ಸಲಹೆ ನೀಡಿದರು.

ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್, ಜಮೀಲ್ ಅಹಮದ್ ಅಶ್ರಫ್, ಜಿಲ್ಲಾ ವಕ್ಫ್ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಆರಿಫ್ ಎ.ಮೇಕ್ರಿ, ಮುಮ್ತಾಜ್, ಕಾಂಗ್ರೆಸ್ ಮುಖಂಡರಾದ ಫಯಾಜ್ ಪಾಷಾ, ಖ್ಯಾತ ಅಂಕಣಕಾರ ಡಾ.ಜಾವೇದ್ ನಯೀಮ್, ಹಿರಿಯ ಪತ್ರಕರ್ತ ಅಪ್ಸರ್ ಪಾಷಾ ಸೇರಿದಂತೆ ಹಲವರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

ಇದೇ ವೇಳೆ ಮುಸ್ಲಿಂ ಬಾಂಧವರು ಪರಸ್ಪರ ಬಕ್ರೀದ್ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಡಿಸಿಪಿ ಎಂ.ಮುತ್ತುರಾಜ್ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆಗೆ ಭಾರಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ಮಹಾನಗರಪಾಲಿಕೆಯಿಂದ ಸ್ಥಳದಲ್ಲಿ ಸ್ವಚ್ಛತಾ ವ್ಯವಸ್ಥೆ ಮಾಡಲಾಗಿತ್ತು. ಶಾಸಕ ತನ್ವೀರ್ ಸೇಠ್ ಅವರು ಅಶೋಕ ರಸ್ತೆಯ ಮಸ್ಜಿದ್ ಇ ಕುಚಿ ಮೆಮನ್‌ನಲ್ಲಿ ಪ್ರಾರ್ಥನೆ ಸಲ್ಲಿಸಿದರು. ರಾಜೀವನಗರದ ಈದ್ಗಾ ಮೈದಾನ, ಗೌಸಿಯಾನಗರ, ಬನ್ನಿಮಂಟಪದ ದರುಲ್ ಉಲೂಮ್ ಸಿದ್ದಿಖಿಯಾ ಹಾಗೂ ಇತರ ಸ್ಥಳಗಳಲ್ಲಿಯೂ ಬಕ್ರೀದ್ ಸಾಮೂಹಿಕ ವಿಶೇಷ ಪ್ರಾರ್ಥನೆ ನಡೆಯಿತು.

ಪ್ರಧಾನಿ ಮೋದಿ ಬಕ್ರೀದ್ ಶುಭಾಶಯ

ನವದೆಹಲಿ: ದೇಶಾದ್ಯಂತ ಮುಸ್ಲಿಂ ಬಾಂಧವರು ಈದ್ ಉಲ್ ಅದಾ(ಬಕ್ರೀದ್) ಹಬ್ಬವನ್ನು ಸಡಗರ, ಸಂಭ್ರಮದಿಂದ ಆಚರಿಸಿದರು. ಶನಿವಾರ ಬೆಳಗ್ಗೆಯೇ ಸಾಂಪ್ರದಾಯಿಕ ಉಡುಪು ಧರಿಸಿ ಮಸೀದಿಗಳಿಗೆ ತೆರಳಿದ ಹಿರಿಯರು, ಕಿರಿಯರು, ಮಕ್ಕಳು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ, ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಬಕ್ರೀದ್ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ, ಮುಸ್ಲಿಂ ಬಾಂಧವರಿಗೆ ಶುಭಾಶಯ ತಿಳಿಸಿದ್ದಾರೆ. ಈ ಹಬ್ಬವು ಸಮಾಜದಲ್ಲಿ ಸಾಮರಸ್ಯವನ್ನು ಪ್ರೇರೇಪಿಸಿ, ಶಾಂತಿಯನ್ನು ಬಲಪಡಿಸಲಿ. ಎಲ್ಲರಿಗೂ ಉತ್ತಮ ಆರೋಗ್ಯ ಮತ್ತು ಸಮೃದ್ಧಿ ತರಲಿ ಎಂದು ಹಾರೈಸುವುದಾಗಿ ತಿಳಿಸಿದ್ದಾರೆ. ತ್ಯಾಗ–ಬಲಿದಾನದ ಸಂಕೇತವಾದ ಬಕ್ರೀದ್ ಸಮಾಜದಲ್ಲಿ ಶಾಂತಿ–ಸೌಹಾರ್ದತೆ ಬೆಳೆಯಲು ಪ್ರೇರಕ ಶಕ್ತಿಯಾಗಲಿ ಎಂದು ಹಾರೈಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್ ಸಂದೇಶದಲ್ಲಿ ತಿಳಿಸಿದ್ದಾರೆ.



ನಾಳೆಯಿಂದ ಮಳೆ ಸಾಧ್ಯತೆ


ಬೆಂಗಳೂರು: ರಾಜ್ಯದ ಹಲವೆಡೆ ಸೋಮವಾರದಿಂದ (ಜೂ.9) ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ತಗ್ಗಿದ ಮಳೆ ಮತ್ತೆ ಬಿರುಸು ಪಡೆಯುವ ಸಾಧ್ಯತೆಯಿದ್ದು, ಸೋಮವಾರದಿಂದ ಮೂರು ದಿನಗಳು ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಹೊರತುಪಡಿಸಿ, ರಾಜ್ಯದ ಉಳಿದ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ದಕ್ಷಿಣ ಒಳನಾಡಿನ ಚಾಮರಾಜನಗರ, ರಾಮನಗರ, ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಹಲವೆಡೆ ಭಾರಿ ಗಾಳಿಯೊಂದಿಗೆ ಮಳೆಯಾಗುವ ಸಂಭವವಿದೆ ಎಂದು ಹೇಳಿದೆ.

ಒಳಪುಟಗಳಲ್ಲಿ

ಗೃಹ ಸಚಿವ ಡಾ.ಪರಮೇಶ್ವರ್ ಸಚಿವ ಸ್ಥಾನಕ್ಕೆ ರಾಜೀನಾಮೆ ಇಂಗಿತ

- ಬೆಂಗಳೂರು ಕಾಲ್ತುಳಿತ ಪ್ರಕರಣದ ನೈತಿಕ ಹೊಣೆ ಹೊತ್ತು ಸ್ಥಾನ ತೊರೆಯುವ ಬಗ್ಗೆ ಆಪ್ತರಲ್ಲಿ ಪ್ರಸ್ತಾಪ
- ತಮ್ಮ ಹೆಸರು ಮುಖ್ಯಮಂತ್ರಿ ಸ್ಥಾನಕ್ಕೆ ಪ್ರಸ್ತಾಪವಾದಾಗಲೆಲ್ಲಾ ಗೂಬೆ ಕೂರಿಸುವ ಪ್ರಯತ್ನಕ್ಕೆ ಬೇಸರ

ಬೆಂಗಳೂರು, ಜೂ. 7(ಕೆಎಂಶಿ)– ಆರ್‌ಸಿಬಿ ವಿಜಯೋತ್ಸವ ಸಂದರ್ಭದಲ್ಲಿ ಕಾಲ್ತುಳಿತ ಘಟನೆಯ ನೈತಿಕ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವ ಇಂಗಿತವನ್ನು ಡಾ.ಜಿ.ಪರಮೇಶ್ವರ್ ವ್ಯಕ್ತಪಡಿಸಿದ್ದಾರೆ.



ಡಾ.ಜಿ.ಪರಮೇಶ್ವರ್

ತಾವು ಮಾಡದ ತಪ್ಪಿಗೆ ವಿರೋಧ ಪಕ್ಷ ಮತ್ತು ಸಾರ್ವಜನಿಕವಾಗಿ ತಮ್ಮ ಮೇಲೆ ಬಂದಿರುವ ಆರೋಪದಿಂದ ಡಾ.ಪರಮೇಶ್ವರ್ ತೀವ್ರ ನೊಂದಿದ್ದಾರೆ. ಕಳೆದ ಎರಡು ದಿನಗಳಿಂದ ತಮ್ಮ ಆಪ್ತ ಸ್ನೇಹಿತರು ಮತ್ತು ಹಿತೈಷಿಗಳ ಜೊತೆ ಘಟನೆಯ ನೈತಿಕ ಹೊಣೆ ಹೊತ್ತು ಸಚಿವ ಸ್ಥಾನ ತೊರೆಯುವ ಮಾತನ್ನಾಡಿದ್ದಾರೆ. ಗೃಹ ಸಚಿವನಾಗಿ ತಮಗೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಎಲ್ಲೋ ಒಂದೆಡೆ ಅಡ್ಡಿ ಎದುರಾಗುತ್ತಿದೆ ಎಂಬ ಸುಳಿವನ್ನು ತಮ್ಮ ಹಿತೈಷಿಗಳ ಮುಂದಿಟ್ಟಿದ್ದಾರೆ.

ಸಂಭ್ರಮಾಚರಣೆ ಬಗ್ಗೆ ನನಗೆ ಪೂರ್ಣ ಮಾಹಿತಿ ಇರಲಿಲ್ಲ. ಕಡೇ ಗಳಿಗೆಯಲ್ಲಿ ಮಾಹಿತಿ ಲಭ್ಯವಾದ ತಕ್ಷಣ ನಾನೇ ಖುದ್ದು ವಿಧಾನಸೌಧದ ಮೆಟ್ಟಿಲುಗಳ ಸ್ಥಳ ಪರಿಶೀಲನೆ ಮಾಡಿದೆ. ಈ ವೇಳೆ ಅಭಿಮಾನಿಗಳು ಸಂತಸದಿಂದ ಕ್ರೀಡಾಂಗಣ ಹಾಗೂ ಶಕ್ತಿಸೌಧದ ಸುತ್ತಮುತ್ತ ಭಾರಿ ಸಂಖ್ಯೆಯಲ್ಲಿ ಜಮಾಯಿಸಿರುವುದನ್ನು ಗಮನಿಸಿದೆ. ನಾನು ಕಣ್ಣಾರೆ ನೋಡಿದ ಹಾಗೂ ಅಧಿಕಾರಿಗಳು ನನಗೆ ನೀಡಿದ ಮಾಹಿತಿ ಆಧಾರದ ಮೇಲೆ ವಿಧಾನಸೌಧದಿಂದ ಕೆಎಸ್‌ಸಿಎ ವರೆಗೆ ನಡೆಯಬೇಕಿದ್ದ ವಿಜಯೋತ್ಸವ ಯಾತ್ರೆಯನ್ನು ಬೇಡವೆಂದಿದ್ದೇ ನಾನು. ▸ 6ನೇ ಪುಟಕ್ಕೆ

ಸಿದ್ದರಾಮಯ್ಯ ಮನವೊಲಿಕೆ ಯತ್ನ!

ಬೆಂಗಳೂರು, ಜೂ. 7(ಕೆಎಂಶಿ)– ಕಾಲ್ತುಳಿತ ಘಟನೆಯ ನೈತಿಕ ಹೊಣೆ ಹೊತ್ತು ಡಾ.ಜಿ.ಪರಮೇಶ್ವರ್ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎಂಬ ಸುಳಿವು ದೊರೆಯುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಧ್ಯೆ ಪ್ರವೇಶಿಸಿದ್ದಾರೆ. ನೀವು ರಾಜೀನಾಮೆ ಕೊಡುವ ಅಗತ್ಯವಿಲ್ಲ, ದುಡುಕಬೇಡಿ. ಈ ಸಮಯದಲ್ಲಿ ರಾಜೀನಾಮೆ ನೀಡಿದರೆ ತಪ್ಪು ಸಂದೇಶ ರವಾನೆ ಆಗುತ್ತದೆ ಎಂದು ಕಿವಿಮಾತು ಹೇಳಿದ್ದಾರೆ. ಮುಖ್ಯಮಂತ್ರಿ ಸಲಹೆಗೆ ಡಾ.ಪರಮೇಶ್ವರ್, ಮತ್ತೊಂದು ವಿಕೆಟ್ ಬಿತ್ತು ಎನ್ನುತ್ತಾರೆ ಅಷ್ಟೇ ತಾನೆ, ಅಂದುಕೊಳ್ಳಲಿ. ರಾಜೀನಾಮೆ ನೀಡುವುದರಿಂದ ನಿಮಗೂ ಮತ್ತು ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ ಎಂದು ಮನವೊಲಿಸುವ ಪ್ರಯತ್ನ ಮಾಡಿದ್ದಾರೆ. ಆಗ ಮುಖ್ಯಮಂತ್ರಿ, ಈಗ ಅದೆಲ್ಲಾ ಬೇಡಪ್ಪಾ. ಇದು ರಾಜೀನಾಮೆ ಸಮಯವಲ್ಲ, ರಾಜಕಾರಣಿಗಳು ಸಾರ್ವಜನಿಕ ಬದುಕಿನಲ್ಲಿ ಇರುವುದು ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸಲು, ನೀವು ಧೈರ್ಯವಾಗಿರಿ ಎಂದಿದ್ದಾರೆ. ಇಷ್ಟಾದರೂ ಡಾ.ಪರಮೇಶ್ವರ್ ತಮ್ಮ ನಿಲುವಿನಿಂದ ಇನ್ನು ಹಿಂದೆ ಸರಿದಿಲ್ಲ ಎನ್ನಲಾಗಿದೆ.



ಕಾಲ್ತುಳಿತ: ಪರಿಹಾರ ಮೊತ್ತ 25 ಲಕ್ಷಕ್ಕೆ ಹೆಚ್ಚಳ

ಬೆಂಗಳೂರು: ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕಾಲ್ತುಳಿತ ಉಂಟಾಗಿ 11 ಮಂದಿ ಸಾವನ್ನಪ್ಪಿದವರ ಕುಟುಂಬಗಳಿಗೆ ಪರಿಹಾರ ಮೊತ್ತವನ್ನು 25 ಲಕ್ಷಕ್ಕೆ ಹೆಚ್ಚಿಸಿ ಸಿಎಂ ಸಿದ್ದರಾಮಯ್ಯ ಆದೇಶ ಹೊರಡಿಸಿದ್ದಾರೆ. ಈ ಮೊದಲು ಮೃತರ ಕುಟುಂಬಗಳಿಗೆ ಸರ್ಕಾರ ತಲಾ 10 ಲಕ್ಷ ಪರಿಹಾರ ಘೋಷಿಸಿತ್ತು. ಅಲ್ಲದೇ ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನೂ ಭರಿಸುವುದಾಗಿ ಸಿಎಂ ಸಿದ್ದರಾಮಯ್ಯ ತಿಳಿಸಿದ್ದರು. ಇದರೊಂದಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯ ಆಡಳಿತ ಮಂಡಳಿ ತಲಾ 10 ಲಕ್ಷ ರೂ. ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದೆ.

ನೈತಿಕ ಹೊಣೆ ಹೊತ್ತು ಕೆಎಸ್‌ಸಿಎ ಕಾರ್ಯದರ್ಶಿ ಶಂಕರ್, ಖಜಾಂಚಿ ಜೈರಾಂ ರಾಜೀನಾಮೆ

ಬೆಂಗಳೂರು, ಜೂ.7– ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಜೂ. 4ರಂದು ಸಂಭವಿಸಿದ್ದ ಕಾಲ್ತುಳಿತ ಘಟನೆಯ ಸಿಐಡಿ ತನಿಖೆ ಆರಂಭವಾಗುತ್ತಿದ್ದಂತೆ, ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಆಡಳಿತ ಮಂಡಳಿ ಕಾರ್ಯದರ್ಶಿ ಎ.ಶಂಕರ್ ಹಾಗೂ ಖಜಾಂಚಿ ಜೆ.ಇ.ಜೈರಾಂ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ.



ಶಂಕರ್



ಜೈರಾಂ

ಶುಕ್ರವಾರ (ಜೂ.6) ರಾತ್ರಿಯೇ ರಾಜೀನಾಮೆಗಳು ಸಲ್ಲಿಕೆಯಾಗಿದ್ದು, ಶನಿವಾರ (ಜೂ.7) ಇಬ್ಬರೂ ಜಂಟಿ ಸುದ್ದಿಗೋಷ್ಠಿ ನಡೆಸಿ ಅಧಿಕೃತವಾಗಿ ಪ್ರಕಟಿಸಿದ್ದಾರೆ. ಜೂ.4ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಆವರಣದಲ್ಲಿ ಸಂಭವಿಸಿದ ▸ 6ನೇ ಪುಟಕ್ಕೆ

ತನಿಖಾ ವರದಿ ತಿಂಗಳಲ್ಲಿ ಸಲ್ಲಿಸಲು ನ್ಯಾ.ಕುನ್ಹಾ ಆಯೋಗಕ್ಕೆ ಸೂಚನೆ

ಬೆಂಗಳೂರು,ಜೂ.7(ಕೆಎಂಶಿ)–ಚಿನ್ನಸ್ವಾಮಿ ಕ್ರೀಡಾಂಗಣದ ಕಾಲ್ತುಳಿತ ಪ್ರಕರಣ ತನಿಖೆಗೆ ನೇಮಕಗೊಂಡಿರುವ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶ ಜಾನ್ ಮೈಕೆಲ್ ಡಿ.ಕುನ್ಹಾ ವಿಚಾರಣಾ ಆಯೋಗಕ್ಕೆ ವರದಿ ಸಲ್ಲಿಸಲು ಸರ್ಕಾರ 1 ತಿಂಗಳ ಕಾಲಾವಕಾಶ ನೀಡಿದೆ. ಕೋವಿಡ್–19 ಸಾಂಕ್ರಾಮಿಕ ರೋಗ ನಿವಾರಣೆಗೆ ಔಷಧ, ಉಪಕರಣ ಮತ್ತು ಸಾಮಗ್ರಿಗಳ ಖರೀದಿಯಲ್ಲಿನ ಅವ್ಯವಹಾರ ಆರೋಪಗಳು ಹಾಗೂ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಉಂಟಾದ ಸಾವು ಪ್ರಕರಣಗಳಿಗೆ ಸಂಬಂಧಿಸಿದಂತೆಯೂ ನ್ಯಾಯಮೂರ್ತಿ ಕುನ್ಹಾ ತನಿಖೆ ನಡೆಸುತ್ತಿದ್ದಾರೆ. ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ತ್ವರಿತ ತನಿಖೆ ನಡೆಸಿ ವರದಿ ನೀಡಬೇಕಿರುವುದರಿಂದ ಇದಕ್ಕೂ ಮುನ್ನ ನಿಯೋಜಿಸಲಾದ ಎರಡು ಪ್ರಕರಣಗಳ ತನಿಖಾ ಕಾರ್ಯಗಳಿಗೆ ಸಮಯಾವಕಾಶ ಬೇಕಿರುವುದರಿಂದ ಆಯೋಗದ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.



ನ್ಯಾ.ಕುನ್ಹಾ

ಕಾಲ್ತುಳಿತ ದುರಂತಕ್ಕೂ ನನಗೂ ಸಂಬಂಧವಿಲ್ಲ

ಬೆಂಗಳೂರು, ಜೂ. 7(ಕೆಎಂಶಿ)– ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸಂಭವಿಸಿದ ಕಾಲ್ತುಳಿತಕ್ಕೂ ತಮಗೂ ಯಾವುದೇ ಸಂಬಂಧ ಇಲ್ಲ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮಾರ್ಕೆಟಿಂಗ್ ಮುಖ್ಯಸ್ಥ ನಿಖಿಲ್ ಸೋಸಲೆ ವಿಚಾರಣೆ ವೇಳೆ ತಿಳಿಸಿದ್ದಾರೆ.



ನಿಖಿಲ್

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರು ತನಿಖೆ ನಡೆಸುತ್ತಿದ್ದು, ನ್ಯಾಯಾಂಗ ವಶದಲ್ಲಿರುವ ಸೋಸಲೆ ಅವರ ವಿಚಾರಣೆ ನಡೆಸಿದಾಗ, ಸಾವು ಸಂಭವಿಸಿದ ಕುರಿತು ಸಾಮಾಜಿಕ ಜಾಲತಾಣದಲ್ಲಿ ಯಾವುದೇ ಪೋಸ್ಟ್ ಹಾಕಿಲ್ಲ.

ವಿಜಯೋತ್ಸವ ಮೆರವಣಿಗೆ ಹಾಗೂ ಉಚಿತ ಪಾಸ್ ಸಂಬಂಧ ಟ್ವೀಟ್ ಸಹಾ ಮಾಡಿಲ್ಲ ಎಂದು ಅಧಿಕಾರಿಗಳ ಮುಂದೆ ಹೇಳಿದ್ದಾರೆ.

ಘಟನೆ ಸಂಭವಿಸಿದ ದಿನದಂದು ನಾನು ಅಹಮದಾಬಾದ್‌ನಲ್ಲೇ ಇದ್ದೆ, ಆಟಗಾರರ ಜೊತೆ ಅದೇ ವಿಮಾನದಲ್ಲೇ ಆಗಮಿಸಿದೆ. ವಿಜಯೋತ್ಸವ ಆಚರಣೆ ಕಾರ್ಯಕ್ರಮ ಆಯೋಜನೆಯಲ್ಲಿ ನನ್ನ ಪಾತ್ರ ಇಲ್ಲ ಹಾಗೂ ಈ ಸಂಬಂಧ ಯಾವುದೇ ಟ್ವೀಟ್ ಸಹ ಮಾಡಿಲ್ಲ ಎಂದಿದ್ದಾರೆ.

ನನ್ನ ಹೆಸರಿನಲ್ಲಿ ಯಾರು ಟ್ವೀಟ್ ಮಾಡಿದ್ದಾರೋ ತಿಳಿಯದು, ಮೊದಲು ಟ್ವೀಟ್ ಮಾಡಿ ನಂತರ ಡಿಲೀಟ್ ಮಾಡಿದ್ದಾರೆ. ಇಲ್ಲಿ ನನ್ನ ಹೆಸರು ದುರ್ಬಳಕೆ ಆಗಿದೆ. ವಿಜಯೋತ್ಸವ ಆಚರಣೆ ವಿಚಾರದಲ್ಲಿ ನನ್ನ ಪಾತ್ರ ಇಲ್ಲ, ನನಗೆ ಈ ಬಗ್ಗೆ ಹೆಚ್ಚಿನ ಮಾಹಿತಿಯೇ ಇಲ್ಲ ಎಂದಿದ್ದಾರೆ. ನಿಖಿಲ್ ಸೋಸಲೆ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಿರುವ ಹಿನ್ನೆಲೆಯಲ್ಲಿ, ▸ 6ನೇ ಪುಟಕ್ಕೆ

ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆಗೆ ಉತ್ಸುಕನಾಗಿದ್ದೇನೆ; ರಾಜ್ಯ ಸರ್ಕಾರ ಸಹಕರಿಸಬೇಕಷ್ಟೆ

- ಕೇಂದ್ರದ ಉಕ್ಕು ಹಾಗೂ ಭಾರಿ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯೆ
- ಪಕ್ಷಭೇದ ಮರೆತು ಕೆಲಸ ಮಾಡಿದರೆ ಎಲ್ಲರಿಗೂ ಒಳ್ಳೆದಾಗುತ್ತೆ

ಮಂಡ್ಯ, ಜೂ.7–ಮಂಡ್ಯ ಲೋಕಸಭಾ ಕ್ಷೇತ್ರದ ಅಭಿವೃದ್ಧಿ ಹಾಗೂ ಇಲ್ಲಿಗೆ ದೊಡ್ಡ ಕೈಗಾರಿಕೆ ತರಲು ನಾನು ಉತ್ಸುಕನಾಗಿದ್ದು, ಇದಕ್ಕಾಗಿ ರಾಜ್ಯ ಸರ್ಕಾರದ ಸಹಕಾರ ಕೋರುತ್ತೇನೆ ಎಂದು ಕೇಂದ್ರದ ಉಕ್ಕು ಹಾಗೂ ಭಾರಿ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಶನಿವಾರ ನಗರದ ಮೈಷುಗರ್ ಪ್ರೌಢ ಶಾಲೆಯ ಅಮೃತ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯ ಜನರ ಕನಸು ನನಸು ಮಾಡುವುದು ನಮ್ಮೆಲ್ಲರ ಹೊಣೆ. ರಾಜಕೀಯ ಬದಿಗಿಟ್ಟು ಕೆಲಸ ಮಾಡಿದರೆ ಜನರಿಗೆ ಒಳ್ಳೆಯದಾಗುತ್ತದೆ. ನಾನಂತೂ ಆ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಮಂಡ್ಯ ಜನರ ಆಶೀರ್ವಾದದಿಂದ ನಾನು ಸಂಸದನಾಗಿದ್ದೇನೆ. ಕಳೆದ ಚುನಾವಣೆಯಲ್ಲಿ ಪಕ್ಷಭೇದವಿಲ್ಲದೆ ನನ್ನನ್ನು ಆಯ್ಕೆ ಮಾಡಿದ್ದೀರಿ. ನರೇಂದ್ರ ಮೋದಿ ಅವರು ನನಗೆ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆಗಳನ್ನು ನೀಡಿದ್ದಾರೆ. ನನ್ನಿಂದ ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಪ್ರಯತ್ನ ಮಾಡುತ್ತಿದ್ದೇನೆ. ಹೀಗಾಗಿ ಜಿಲ್ಲೆಗೆ ಒಂದು ಕೈಗಾರಿಕೆ ತರಬೇಕು ಎನ್ನುವ ಉದ್ದೇಶ ನನ್ನದಾಗಿದೆ. ಇದಕ್ಕೆ ರಾಜ್ಯ ಸರ್ಕಾರದ ಸಹಕಾರ ಅಗತ್ಯ ಇದೆ ಎಂದು ತಿಳಿಸಿದರು.



ಕುಮಾರಸ್ವಾಮಿ

ನಾನು ಮುಖ್ಯಮಂತ್ರಿ ಆಗಿದ್ದಾಗ ಮೈಷುಗರ್ ಕಾರ್ಖಾನೆ ಪುನಶ್ಚೇತನಕ್ಕೆ 400 ಕೋಟಿ ಹಣವನ್ನು ಬಜೆಟ್‌ನಲ್ಲಿ ಇಟ್ಟು ತಕ್ಷಣವೇ 100 ಕೋಟಿ ಹಂಚಿಕೆ ಮಾಡಿದ್ದೆ. ಅಷ್ಟರಲ್ಲಿ ನನ್ನ ಸರ್ಕಾರ ಹೋಯಿತು. ರೈತ ಭವನ ಅಭಿವೃದ್ಧಿಗೆ 4 ಕೋಟಿ ಅನುದಾನ ನೀಡಿದ್ದೇನೆ. ಆ ಹಣವನ್ನು ಯಾರು ಖರ್ಚು ಮಾಡಬೇಕು ಎಂಬ ಬಗ್ಗೆ ದೊಡ್ಡ ರಾಜಕೀಯ ನಡೆಯುತ್ತಿದೆ. ಇದು ಬೇಸರದ ಸಂಗತಿ. ಮಿಮ್ಸ್ ಅಭಿವೃದ್ಧಿಗೆ ಕೂಡ ಹಣ ನೀಡಿದ್ದು ಅಲ್ಲಿಯೂ ಕಾಮಗಾರಿಗಳು ಇನ್ನೇನು ಶುರುವಾಗಲಿವೆ. ಸಿಎಸ್‌ಆರ್ ಮೂಲಕ 2.50 ಕೋಟಿ ಹಣ ನೀಡಿದ್ದೇನೆ ಎಂದು ವಿವರಿಸಿದರು.

> “ಕಾವೇರಿ ಆರತಿಗೆ 100 ಕೋಟಿ ಯಾಕೆ ಬೇಕು? ನಮ್ಮ ಪುಟ್ಟರಾಜು ಕೆರೆತೊಣ್ಣೂರಿನಲ್ಲಿ ಇಂಥ ಕಾರ್ಯಕ್ರಮ ಮಾಡಿದಾಗ ಎಷ್ಟು ಖರ್ಚು ಆಯಿತು ಎಂದು ಕೇಳಿ. ಇಷ್ಟೊಂದು ಬೃಹತ್ ಮೊತ್ತ ವೆಚ್ಚ ಮಾಡುವುದು ಏತಕ್ಕೆ? 100 ಕೋಟಿ ಖರ್ಚು ಮಾಡುವುದಕ್ಕೆ ನನ್ನ ವಿರೋಧ ಇದೆ.
> –ಹೆಚ್.ಡಿ.ಕುಮಾರಸ್ವಾಮಿ

ಮೈಷುಗರ್ ಶಾಲೆ ಅಭಿವೃದ್ಧಿ ನೀಲನಕ್ಷೆ ಸಿದ್ಧಪಡಿಸಿ: ಮೈಷುಗರ್ ಶಾಲೆಗೆ ಕಾಯಕಲ್ಪಕ್ಕೆ ನೆರವು ನೀಡಲು ಸದಾ ಸಿದ್ಧನಿದ್ದೇನೆ. ಈ ಶಾಲೆಯಲ್ಲಿ ಕೆಲವೇ ಮಕ್ಕಳು ಓದುತ್ತಿದ್ದಾರೆ ಎಂಬ ಮಾಹಿತಿ ನೀಡಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದು, ಎಸ್‌ಎಸ್‌ಎಲ್‌ಸಿ ಜತೆಗೆ ಪಿಯುಸಿ ಬೋಧನೆಗೆ ಅರ್ಜಿ ಹಾಕಿಕೊಳ್ಳಿ. ಅದಕ್ಕೆ ಏನೇನು ಆಗಬೇಕೋ ಅದನ್ನು ನಾನು ಮಾಡಿಕೊಡುತ್ತೇನೆ ಎಂದು ಹೆಚ್.ಡಿ. ಕುಮಾರಸ್ವಾಮಿ ಭರವಸೆ ನೀಡಿದರು.

ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಲು ಏನೇನು ಮಾಡಬೇಕು ಎಂಬುದರ ನೀಲನಕ್ಷೆ ಸಿದ್ಧ ಮಾಡಿ, ಅದಕ್ಕೆ ಅಗತ್ಯವಾದ ನೆರವು ನನ್ನಿಂದ ದೊರೆಯುತ್ತದೆ. ಈ ಶಾಲೆಗೆ ವೈಭವದ ಇತಿಹಾಸವಿದೆ. ಅದನ್ನು ಉಳಿಸುವ ಕೆಲಸ ಮಾಡೋಣ. ಎಲ್ಲಾ ಆಯಾಮಗಳಲ್ಲಿಯೂ ಶಾಲೆ ಅಭಿವೃದ್ಧಿ ಕಾಣಬೇಕು. ನನ್ನ ಮೇಲಿನ ನಿರೀಕ್ಷೆಗಳನ್ನು ನಾನು ಕಾರ್ಯರೂಪಕ್ಕೆ ತರುತ್ತೇನೆ. ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಒಂದು ಕಣ್ಣು ಇಲ್ಲಿಗೆ ನೆಟ್ಟಿದೆ. ನನ್ನ ಹೃದಯ ಇಲ್ಲೇ ಇದೆ. ಚಿಂತೆ ಬೇಡ ಎಂದು ಹೇಳಿದರು.

ಬೆಂಗಳೂರಿಗೆ 4500 ಎಲೆಕ್ಟ್ರಿಕ್ ಬಸ್: ಪ್ರಧಾನಮಂತ್ರಿಗಳ ಪಿಎಂಇ ಡ್ರೈವ್ ಯೋಜನೆ ಮೂಲಕ ಬೆಂಗಳೂರು ನಗರಕ್ಕೆ 4500 ಎಲೆಕ್ಟ್ರಿಕ್ ಬಸ್‌ಗಳನ್ನು ಹಂಚಿಕೆ ಮಾಡಲಾಗಿದೆ. ಮುಂದಿನ ಹಂತದಲ್ಲಿ ಮತ್ತಷ್ಟು ಬಸ್‌ಗಳನ್ನು ಕೊಟ್ಟಿದ್ದೇವೆ. ದೇಶದ ಐದು ನಗರಗಳಿಗೆ ಒಟ್ಟು 14000 ಎಲೆಕ್ಟ್ರಿಕ್ ಬಸ್‌ಗಳನ್ನು ಮಂಜೂರು ಮಾಡಿದ್ದೇವೆ. ಅಲ್ಲದೆ, ಜಿಲ್ಲಾ ▸ 6ನೇ ಪುಟಕ್ಕೆ

ಕಾಲ್ತುಳಿತ; ಸರ್ಕಾರದಿಂದ ಗಂಟೆಗೊಂದು ನಿರ್ಧಾರ

ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ದುರಂತ ವಿಚಾರದಲ್ಲಿ ರಾಜ್ಯ ಸರ್ಕಾರ ಗಂಟೆಗೊಂದು ನಿರ್ಧಾರ ಮಾಡುತ್ತಿದೆ. ಅಂತಿಮವಾಗಿ ಏನು ಮಾಡುತ್ತದೆ ಎಂಬುದನ್ನು ಕಾದು ನೋಡಬೇಕು. ಮೊದಲು ಮ್ಯಾಜಿಸ್ಟೀರಿಯಲ್ ತನಿಖೆ ಎಂದರು. ಆಮೇಲೆ ನ್ಯಾಯಾಂಗ ತನಿಖೆ ಎಂದರು. ಅದಾದ ಮೇಲೆ ಸಿಐಡಿಗೆ ಕೊಡುತ್ತೇವೆ ಎನ್ನುತ್ತಿದ್ದಾರೆ. ಅಂತಿಮವಾಗಿ ಯಾವ ತನಿಖೆ ವರದಿ ಪಡೆದುಕೊಳ್ಳುತ್ತಾರೆ ಎಂಬುದನ್ನು ನೋಡಬೇಕು ಎಂದು ವ್ಯಂಗ್ಯವಾಡಿದರು.

ಇದನ್ನು ಸರ್ಕಾರ ಎನ್ನಲು ಆಗುತ್ತದೆಯೇ? ಯಾವುದೇ ತೀರ್ಮಾನ ಮಾಡಿದರೆ ಸ್ಪಷ್ಟತೆ ಇರಬೇಕು. ಅಧಿಕಾರಿಗಳ ತಪ್ಪು ಏನಿತ್ತು? ಎಫ್‌ಐಆರ್‌ನಲ್ಲಿ ಅಧಿಕಾರಿಗಳು ಕರ್ತವ್ಯಲೋಪ ಆಗಿಲ್ಲ ಎಂದು ಉಲ್ಲೇಖ ಮಾಡಿದ್ದಾರೆ. ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಪಹಲ್ಗಾಮ್, ಪ್ರಯಾಗ್‌ರಾಜ್‌ನಲ್ಲಿ ನಡೆದ ಘಟನೆಗಳನ್ನು ಈಗ ಪ್ರಸ್ತಾಪಿಸುತ್ತಿದ್ದಾರೆ. ಆ ಘಟನೆಗಳಿಗೂ ಇದಕ್ಕೂ ಏನು ಸಂಬಂಧ? ಇಲ್ಲಿ ಇವರು ಮಾಡಿರುವ ತಪ್ಪಿಗೆ ಅಲ್ಲಿನ ವಿಚಾರ ತರುತ್ತಿದ್ದಾರೆ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಮುಂಬೈ ಮೇಲೆ ಉಗ್ರರ ದಾಳಿ ಆಯಿತಲ್ಲ, ಆಗ ಸಿಂಗ್ ಅವರು ರಾಜೀನಾಮೆ ನೀಡಿದ್ದರಾ? ಕೇವಲ ಸಿಎಂ, ಡಿಸಿಎಂ ವರ್ಚಸ್ಸು ಹೆಚ್ಚಿಸಿಕೊಳ್ಳಲಿಕ್ಕೆ ಮಾಡಿದ ಶೋ ಇದು ಎಂದು ಟೀಕಾಪ್ರಹಾರ ನಡೆಸಿದರು.

ನನ್ನ ಆರೋಗ್ಯ ದೇವರು ನೋಡ್ಕೋತಾನೆ: ಕುಮಾರಸ್ವಾಮಿ ತಮ್ಮ ಆರೋಗ್ಯ ನೋಡಿಕೊಳ್ಳಲಿ ಎಂದು ಹೇಳಿರುವ ಮಾಜಿ ಸಂಸದ ಡಿ.ಕೆ.ಸುರೇಶ್ ಹೇಳಿಕೆಗೆ ತಿರುಗೇಟು ಕೊಟ್ಟ ಕೇಂದ್ರ ಸಚಿವರು, ನನ್ನ ಆರೋಗ್ಯವನ್ನ ದೇವರು ನೋಡಿಕೊಳ್ಳುತ್ತಾನೆ. ಮಂಡ್ಯ ಜನರ ಹಾರೈಕೆಯಿಂದ ನನಗೆ ಏನು ಆಗಲ್ಲ. ನಾನು ಯಾವುದೇ ಒತ್ತಡದಲ್ಲಿ ಇಲ್ಲ. ಅವರೇ ಒತ್ತಡದಲ್ಲಿ ಇದ್ದಾರೆ ಎಂದು ಟಾಂಗ್ ನೀಡಿದರು.

ಎಂಡಿಎ ಅಧ್ಯಕ್ಷರಾಗಿ ಡಿಸಿ ಮುಂದುವರಿಕೆ


ಲಕ್ಷ್ಮೀಕಾಂತರೆಡ್ಡಿ

ಮೈಸೂರು,ಜೂ.7(ಆರ್‌ಕೆ)– ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಅಧ್ಯಕ್ಷರಾಗಿ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತರೆಡ್ಡಿ ಅವರು ಮುಂದುವರಿದಿದ್ದಾರೆ.

ಈ ಕುರಿತು ಇತ್ತೀಚೆಗೆ ಅಧಿಕೃತ ಆದೇಶ ಹೊರಡಿಸಿರುವ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಲತಾ ಅವರು, ಎಂಡಿಎಗೆ ಸರ್ಕಾರ ಅಧ್ಯಕ್ಷರನ್ನು ನಾಮನಿರ್ದೇಶನ ಮಾಡುವವರೆಗೆ ಜಿಲ್ಲಾಧಿಕಾರಿಗಳೇ ಆ ಜವಾಬ್ದಾರಿ ನಿರ್ವಹಿಸುವಂತೆ ಸೂಚಿಸಿದ್ದಾರೆ.

ಪ್ರಾಧಿಕಾರದಲ್ಲಿ ಕಮೀಷ್ನರ್, ಅಧೀಕ್ಷಕ ಇಂಜಿನಿಯರ್, ಲೆಕ್ಕಪತ್ರ ಅಥವಾ ಲೆಕ್ಕ ಪರಿಶೋಧನೆ ಅರ್ಹತೆ ಹೊಂದಿರುವ ಮುಖ್ಯ ಲೆಕ್ಕಾಧಿಕಾರಿ, ನಗರ ಯೋಜನೆ ಸದಸ್ಯ, ಓರ್ವ ಶಾಸಕ, ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿಕಾರಿ, ಸೆಸ್ಕ್ ಪ್ರತಿನಿಧಿ ಎಂಡಿಎ ಕಾರ್ಯದರ್ಶಿ ಸದಸ್ಯರಾಗಿರುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಈ ಹಿಂದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಅಧ್ಯಕ್ಷರಾಗಿದ್ದ ಕೆ.ಮರಿಗೌಡ ಅವರು ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನದಲ್ಲಿ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತರೆಡ್ಡಿ ಅವರು ಮುಂದುವರಿದಿದ್ದರು. ಇದೀಗ ಎಂಡಿಎ ಎಂದು ಹೆಸರು ಬದಲಾದ ನಂತರ ಯಾವುದೇ ರಾಜಕೀಯ ವ್ಯಕ್ತಿಯನ್ನು ಸರ್ಕಾರ ಅಧ್ಯಕ್ಷರನ್ನಾಗಿ ನೇಮಕ ಮಾಡದಿರುವುದರಿಂದ ಮುಂದಿನ ಆದೇಶದವರೆಗೆ ಲಕ್ಷ್ಮಿಕಾಂತ ರೆಡ್ಡಿ ಅವರೇ ಪ್ರಾಧಿಕಾರದ ಅಧ್ಯಕ್ಷರಾಗಿ ಮುಂದುವರಿದಿದ್ದಾರೆ.


ಈಗಾಗಲೇ ಪ್ರಾಧಿಕಾರದ ಬಜೆಟ್ ಸೇರಿದಂತೆ ಲಕ್ಷ್ಮೀ ಕಾಂತರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಹಲವು ಸಭೆಗಳು ನಡೆದಿದ್ದು, ಅಧಿಕಾರಿ ವರ್ಗವೇ ಬಹುತೇಕ ಸಂಖ್ಯೆಯಲ್ಲಿ ಸದಸ್ಯರಾಗಿರುವ ಎಂಡಿಎಯಲ್ಲಿ ಮುಂದೆಯೂ ಆಡಳಿತದಲ್ಲಿ ಮುಂದುವರಿಯಲಿದ್ದಾರೆ.

ಖರ್ಗೆ ಅವರಿಗೆ ಅಭಿನಂದನೆ...



ನವದೆಹಲಿಯ ರಾಜಾಜಿ 10ಲ್ಲಿ ಎಐಸಿಸಿ ಅಧ್ಯಕ್ಷರೂ ಆದ ರಾಜ್ಯಸಭೆಯ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೆಪಿಸಿಸಿ ಸಂಯೋಜಕ ಹಾಗೂ ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್. ಭಾಸ್ಕರ್, ಅಪರ ಜಿಲ್ಲಾ ಸರ್ಕಾರಿ ವಕೀಲ ತಿಮ್ಮಯ್ಯ, ಮೈಸೂರು ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಉಪಾಧ್ಯಕ್ಷ ಪುಟ್ಟರಸ (ಪ್ರೇಮ್), ಪ್ರಧಾನ ಕಾರ್ಯದರ್ಶಿ ಎ.ಆರ್.ಕಾಂತರಾಜ್, ಡಿಸಿಸಿ ಕಿಸಾನ್ ಘಟಕದ ಅಧ್ಯಕ್ಷ ಜಿ.ಮಹಾದೇವ ಆತ್ಮೀಯವಾಗಿ ಅಭಿನಂದಿಸಿ, ಒಳ ಮೀಸಲಾತಿ ಸಂಬಂಧ ಚರ್ಚೆ ನಡೆಸಿದರು.

ವಿಕ್ರಂ ಅಯ್ಯಂಗಾರ್‌ಗೆ ಸನ್ಮಾನ...



ಎನ್.ಎಂ.ನವೀನ್‌ಕುಮಾರ್ ವಿಪ್ರ ಮಿತ್ರ ಬಳಗದ ವತಿಯಿಂದ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರ ಅಭಿನಂದನಾ ಸಮಾರಂಭದಲ್ಲಿ ಸಂಘಟನಾ ಕ್ಷೇತ್ರದಿಂದ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ಅವರನ್ನು ಸನ್ಮಾನಿಸಲಾಯಿತು. ನಿವೃತ್ತ ಎಡಿಜಿಪಿ ಭಾಸ್ಕರ್‌ರಾವ್, ಮುಡಾ ಮಾಜಿ ಅಧ್ಯಕ್ಷ ಕೆ.ಆರ್.ಮೋಹನ್‌ಕುಮಾರ್, ಅಖಿಲ ಕರ್ನಾಟಕ ಬ್ರಾಹ್ಮಣ ರಾಜ್ಯ ಉಪಾಧ್ಯಕ್ಷ ಎನ್.ಎಂ.ನವೀನ್‌ಕುಮಾರ್, ರಾಜ್ಯ ಸಂಘಟನಾ ಕಾರ್ಯದರ್ಶಿ ರಾಜ್‌ಕುಮಾರ್, ವಕೀಲರಾದ ರವೀಂದ್ರ, ಸಿಎಸ್ ಚಂದ್ರಶೇಖರ್, ಪ್ರವೀಣ್, ಶ್ರೀಕಾಂತ್ ಕಶ್ಯಪ್ ಹಾಗೂ ಇನ್ನಿತರರು ಹಾಜರಿದ್ದರು.

ಅಮರನಾಥ ಯಾತ್ರಿಕರಿಗಾಗಿ 'ಆಪರೇಷನ್ ಶಿವ'

ಶ್ರೀನಗರ: ಪಹಲ್ಗಾಮ್ ದಾಳಿ ಬೆನ್ನಲ್ಲೇ ಅಮರನಾಥ ಯಾತ್ರಿಕರಿಗೆ ಬಹುಪದರದ ಗರಿಷ್ಠ ಭದ್ರತೆ ಕಲ್ಪಿಸುವ ಉದ್ದೇಶದಿಂದ ಭಾರತೀಯ ಸೇನೆ, ಸಿಆರ್‌ಪಿಎಫ್ ಹಾಗೂ ಕಾಶ್ಮೀರ ಪೊಲೀಸ್ ಇಲಾಖೆ ಜಂಟಿಯಾಗಿ 'ಆಪರೇಷನ್ ಶಿವ' ಯೋಜನೆಯನ್ನು ಜಾರಿಗೆ ತಂದಿದೆ. 'ಆಪರೇಷನ್ ಶಿವ' ಅಮರನಾಥ ಯಾತ್ರಿಕರಿಗೆ ಹೆಜ್ಜೆ ಹೆಜ್ಜೆಗೂ ಸುರಕ್ಷಿತ ಹಾಗೂ ಸುಗಮ ಪ್ರಯಾಣವನ್ನು ಮಾಡಲು ಅನುಕೂಲ ಮಾಡಿಕೊಡಲಿದೆ. ಜು.3ರಿಂದ ಅಮರನಾಥ ಯಾತ್ರೆ ಆರಂಭಗೊಳ್ಳಲಿದ್ದು, ಆ.9ಕ್ಕೆ ಮುಗಿಯಲಿದೆ. ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ 14 ದಿನಗಳು ಯಾತ್ರೆ ಅವಧಿ ತಗ್ಗಲಿದೆ. ಭದ್ರತಾ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಸುಧಾರಿತ ಭದ್ರತಾ ತಂತ್ರಜ್ಞಾನ, ಸಿಸಿಟಿವಿ, ಜಾಮರ್‌ಗಳ ಅಳವಡಿಕೆ, ಡ್ರೋನ್ ಕ್ಯಾಮೆರಾ, ಸಶಸ್ತ್ರ ಪಡೆ ಕಣ್ಗಾವಲು ಸೇರಿದಂತೆ ಗರಿಷ್ಠ ಮಟ್ಟದ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಭದ್ರತೆ ದೃಷ್ಟಿಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ವರದಿಗಳು ತಿಳಿಸಿವೆ.

ನಿಧನ

ಸುಕನ್ಯಾ



ಮೈಸೂರು, ಜೂ.7–ಮೈಸೂರಿನ ಕೆಸರೆ ರಾಜೇಂದ್ರನಗರದ ಕುರಿಮಂಡಿ ನಿವಾಸಿ ದಿವಂಗತ ಲಕ್ಷ್ಮಣ ರಾಜು ಅವರ ಪತ್ನಿ ಸುಕನ್ಯಾ(80) ಶನಿವಾರ ನಿಧನರಾದರು. ಮೃತರು ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಭಾನುವಾರ) ಮಧ್ಯಾಹ್ನ 2 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಕಮಲಮ್ಮ



ಮೈಸೂರಿನ ಚಾಮುಂಡಿಪುರಂ ನಿವಾಸಿ, ದಿವಂಗತ ಸತ್ಯನಾರಾಯಣರಾವ್ ಅವರ ಪತ್ನಿ ಎಸ್.ಕಮಲಮ್ಮ(97) ಶುಕ್ರವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ ನೆರವೇರಿತು.

ಶ್ರೀಮತಿ ಚೆಟ್ರುಮಾಡ ಪಾರ್ವತಿ



ಮೈಸೂರಿನ ವಿಜಯನಗರ 4ನೇ ಹಂತದ ನಿವಾಸಿ, ದಿವಂಗತ ಬೋಪಯ್ಯ(ರಾಮು) ಅವರ ಪತ್ನಿ ಶ್ರೀಮತಿ ಚೆಟ್ರುಮಾಡ ಪಾರ್ವತಿ(ಪೆಮ್ಮಂಡ–ಶ್ರೀಮಂಗಳ) ಶುಕ್ರವಾರ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಮೃತರು ಮಕ್ಕಳಾದ ರಂಜು ಬಿಡ್ಡಪ್ಪ, ಕೆಚಮಾಡ ಲತಾ ಸುಬ್ಬಯ್ಯ ಹಾಗೂ ತೀತಿರ ಗೀತಾ ಪೂಣಚ್ಚ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರದಲ್ಲಿರುವ ಮುಕ್ತಿಧಾಮದಲ್ಲಿ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡೇವಿಡ್



ಮೈಸೂರಿನ ಹೆಬ್ಬಾಳ್ ನಿವಾಸಿ ಡೇವಿಡ್(51) ಶುಕ್ರವಾರ ನಿಧನ ಹೊಂದಿದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಂಜನಗೂಡು ರಸ್ತೆಯಲ್ಲಿರುವ ಕ್ರೈಸ್ತ ಸಮುದಾಯದ ರುದ್ರಭೂಮಿಯಲ್ಲಿ ಶನಿವಾರ ನೆರವೇರಿತು ಎಂದು ಕಟುಂಬದ ಮೂಲಗಳು ತಿಳಿಸಿವೆ.

ಜೂ.27ಕ್ಕೆ ಕೆಂಪೇಗೌಡರ ಜಯಂತಿ ಅರ್ಥಪೂರ್ಣ ಆಚರಣೆ



ಮೈಸೂರು, ಜೂ.7(ಜಿಎ)–ಅರ್ಥಪೂರ್ಣವಾಗಿ ಕೆಂಪೇಗೌಡರ ಜಯಂತಿ ಆಚರಿಸಲು ಎಲ್ಲರೂ ಒಮ್ಮತದಿಂದ ನಿರ್ಧರಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜೂ.27ರಂದು ಭಾಗವಹಿಸಿ ಸಮುದಾಯಕ್ಕೆ ಶಕ್ತಿ ತುಂಬಬೇಕೆಂದು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ತಿಳಿಸಿದರು.


ಹೆಬ್ಬಾಳಿನಲ್ಲಿರುವ ಆದಿಚುಂಚನಗಿರಿ ಶಾಖಾ ಮಠದಲ್ಲಿ ಕೆಂಪೇಗೌಡ ಜಯಂತಿಯ ಪೂರ್ವ ಸಿದ್ಧತಾ ಸಭೆ ನಡೆಸಲಾಯಿತು.

ಮೈಸೂರಿನ ಹೆಬ್ಬಾಳಿನಲ್ಲಿರುವ ಆದಿ ಚುಂಚನಗಿರಿ ಶಾಖಾ ಮಠದಲ್ಲಿ ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿ ಬಾರಿಯೂ ಕೆಂಪೇಗೌಡ ಜಯಂತಿ ಅದ್ಧೂರಿಯಾಗಿ ನಡೆಯುತ್ತದೆ. ಆದರೆ, ಕಾರ್ಯಕ್ರಮ ಯಶಸ್ವಿಯಾಗಲು ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯದವರು ಆಗಮಿಸಿದಾಗ ಮಾತ್ರವೇ ಅದು ಅರ್ಥಪೂರ್ಣ ಆಗುತ್ತದೆ. ಹಾಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಮೊಹಲ್ಲಾ ಹಾಗೂ ತಾಲೂಕಿನ ಗ್ರಾಮೀಣ ಭಾಗದಿಂದಲೂ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿ. ಈ ಬಾರಿ ಮೊದಲಿಗೆ ಲಲಿತ್‌ಮಹಲ್ ಬಳಿ ಇರುವ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ಸಾಂಕೇತಿಕವಾಗಿ ಅರಮನೆಯ ಬಳಿಯ ಕೋಟೆ ಆಂಜನೇಯಸ್ವಾಮಿ ದೇವಾಲಯದವರೆಗೆ ಮೆರವಣಿಗೆ ಬರಲಿದೆ. ಬಳಿಕ ಮೆರವಣಿಗೆಗೆ ವಿಧ್ಯುಕ್ತ ಚಾಲನೆ ನೀಡಿ ಕಲಾಮಂದಿರದವರೆಗೆ ಮೆರವಣಿಗೆ ಸಾಗಲಿದೆ. ಕಾರ್ಯಕ್ರಮಕ್ಕೆ ಸ್ವಯಂ ಪ್ರೇರಿತರಾಗಿ ಆಗಮಿಸಿ ಎಂದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಕೆಂಪೇಗೌಡ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲು ಯಾವೆಲ್ಲಾ ಸಹಕಾರ ಬೇಕು ಅದನ್ನು ನೀಡಲು ನಾನು ಸಿದ್ಧ. ಸಮುದಾಯದ ವಿಚಾರ ಬಂದಾಗ ನಾನಾಗಲಿ ಮಾಜಿ ಶಾಸಕರಾದ ನಾಗೇಂದ್ರಣ್ಣ ಅವರಾಗಲಿ ಸಮುದಾಯದ ಪರವಾಗಿದ್ದೇವೆ. ಸಮುದಾಯದ ವಿಚಾರದಲ್ಲಿ ರಾಜೀಯಾಗುವ ಪ್ರಶ್ನೆಯೇ ಇಲ್ಲ. ಸಮುದಾಯ ಯಾವುದೇ ಇರಲಿ ಆ ಸಮುದಾಯ ಸಂಘಟನೆ ಪ್ರದರ್ಶನ ಮಾಡದಿದ್ದರೆ, ಆ ಸಮುದಾಯ ಹಿಂದೆ ಉಳಿಯಲಿದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಪಕ್ಷಾತೀತವಾಗಿ ನಡೆಯುವ ಕಾರ್ಯಕ್ರಮದಲ್ಲಿ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಅಲ್ಲದೆ ಎಲ್ಲರ ಸಹಕಾರ ಕೆಂಪೇಗೌಡ ಜಯಂತಿ ಆಚರಣೆಗೆ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಒಕ್ಕಲಿಗರ ಸಂಘ ವಿವಿಧ ಸಂಘಗಳನ್ನು ಜತೆಗೂಡಿಸಿಕೊಂಡು ಎಲ್ಲರನ್ನೂ ಆಹ್ವಾನಿಸುವ ಕೆಲಸ ಮಾಡಲಿ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಮೂಲಕ ಕೆಂಪೇಗೌಡ ಜಯಂತಿ ಯಶಸ್ವಿಗೊಳಿಸುವಂತೆ ಹೇಳಿದರು.

ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದಿಂದ ಕೆಂಪೇಗೌಡ ಜಯಂತಿ ಆಚರಣಾ ಸಮಿತಿ ಅಧ್ಯಕ್ಷರನ್ನಾಗಿ ಸಂಘದ ನಿರ್ದೇಶಕ ಪಿ.ಪ್ರಶಾಂತ್‌ಗೌಡ ಅವರನ್ನು ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಸಿ.ಜಿ.ಗಂಗಾಧರ್‌ಗೌಡ, ಕೆ.ವಿ.ಶ್ರೀಧರ್, ಎಂ.ಬಿ. ಮಂಜೇಗೌಡ, ಮೈಸೂರು–ಚಾಮರಾಜನಗರ ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಮರಿಸ್ವಾಮಿ,ಗೌರವಾಧ್ಯಕ್ಷ ಅಲತೂರು ಜಯರಾಮ್, ಪ್ರಧಾನ ಕಾರ್ಯದರ್ಶಿ ಚೇತನ್, ಖಜಾಂಚಿ ಆರ್ ಲೋಕೇಶ್, ನಿರ್ದೇಶಕರಾದ ನಾಗಣ್ಣ, ಪ್ರಕಾಶ್ ಎನ್.ಉಮೇಶ್, ಬೋರೇಗೌಡ, ಎ.ರವಿ, ಗುರುರಾಜ್, ಕುಮಾರಗೌಡ, ಸುಶೀಲಾ ನಂಜಪ್ಪ ಗಿರೀಶ್‌ಗೌಡ, ಒಕ್ಕಲಿಗ

ಪೂರ್ವ ಸಿದ್ಧತಾ ಸಭೆಯಲ್ಲಿ ನಿರ್ಧಾರ

ಸಂಘ ಪೂರ್ವ ವಲಯದ ಅಧ್ಯಕ್ಷರಾದ ಸುರೇಶ್‌ಗೌಡ, ಕೆಪಿಸಿಸಿ ಮಾಧ್ಯಮ ವಕ್ತಾರ ಎಂ.ಲಕ್ಷ್ಮಣ್, ಬಿಜೆಪಿ ಮುಖಂಡರಾದ ಸುಶ್ರೂತ್‌ಗೌಡ, ಕವೀಶ್‌ಗೌಡ ವಾಸು, ಜೆಡಿಎಸ್ ಮುಖಂಡ ಹೆಚ್.ಕೆ.ರಾಮು, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕರ್ನಾಟಕ ಕಾವಲು ಪಡೆ ರಾಜ್ಯಾಧ್ಯಕ್ಷ ಮೋಹನ್‌ಕುಮಾರ್ ಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾಶಂಕರೇಗೌಡ, ಅಶ್ವಿನಿ ಅನಂತು, ಮಾಜಿ ಮೇಯರ್ ಮೋದಾಮಣಿ, ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಜಿಪಂ ಮಾಜಿ ಸದಸ್ಯ ಮಾದೇಗೌಡ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯೆ ಲಕ್ಷ್ಮಿದೇವಿ, ನಮ್ಮೂರು ನಮ್ಮೋರು ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್‌ಗೌಡ, ಮೈಸೂರು ಕೋ ಅಪರೇಟಿವ್ ಬ್ಯಾಂಕ್ ಅಧ್ಯಕ್ಷ ಯೋಗೇಶ್, ರಾಜಕುಮಾರ್, ನೇಗಿಲಯೋಗಿ ರವಿಕುಮಾರ್, ಮೈಸೂರಿನ ವಿವಿಧ ಒಕ್ಕಲಿಗ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮೈಸೂರಿನ ವಿವಿಧ ಮಹಿಳಾ ಒಕ್ಕಲಿಗ ಸಂಘದ ನಿರ್ದೇಶಕರು, ಸದಸ್ಯರು ಹಾಗೂ ಮುಖಂಡರು ಉಪಸ್ಥಿತರಿದ್ದರು.


ಮಾದಕ ವಸ್ತು ಇಟ್ಟುಕೊಂಡಿದ್ದವ ಪೊಲೀಸ್ ವಶಕ್ಕೆ

ಮೈಸೂರು, ಜೂ.7– ಮಾದಕ ವಸ್ತು ಇಟ್ಟುಕೊಂಡಿದ್ದ ವಿದ್ಯಾರ್ಥಿಯೊಬ್ಬನನ್ನು ಮೈಸೂರಿನ ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ರಾಜೀವ್‌ನಗರದ ನಿವಾಸಿ, ಬಿ.ಕಾಂ ವಿದ್ಯಾರ್ಥಿಯೊಬ್ಬ(21 ವರ್ಷ) ಸಾತಗಳ್ಳಿ ಪಾರ್ಕ್ ಬಳಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದು, ಆತನ ಬಳಿ ಇದ್ದ ಸುಮಾರು 5 ಗ್ರಾಂ ಎಂಡಿಎಂಎ ಮಾದಕ ವಸ್ತುವನ್ನು ವಶಪಡಿಸಿಕೊಳ್ಳಲಾಗಿದೆ.

ಸಿಸಿಬಿ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಇಲಾಖೆ ವಾಹನದಲ್ಲಿ ಸಾತಗಳ್ಳಿ ಪಾರ್ಕ್ ಕಡೆಯಿಂದ ರಿಂಗ್ ರಸ್ತೆಗೆ ಹೋಗುವಾಗ ಅಲ್ಲಿ ನಿಂತಿದ್ದ ಯುವಕ, ಪೊಲೀಸ್ ವಾಹನ ಕಂಡು ಓಡಲಾರಂಭಿಸಿದ. ಇದರಿಂದ ಅನುಮಾನಗೊಂಡ ಇನ್ಸ್‌ಪೆಕ್ಟರ್, ಆತನ ಬೆನ್ನತ್ತಿ ಹಿಡಿದು ಪರಿಶೀಲಿಸಿದಾಗ ಆತನ ಬಳಿ ಎಂಡಿಎಂಎ ಪತ್ತೆಯಾಗಿದೆ. ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೇಸ್‌ಬುಕ್‌ನಲ್ಲಿ ಪರಿಚಯ; ಮರುಳಾದ ಮೈಸೂರಿಗರಿಗೆ 22 ಲಕ್ಷ ವಂಚನೆ



ಮೈಸೂರು,ಜೂ.7–ಫೇಸ್‌ಬುಕ್ ಮೂಲಕ ಪರಿಚಯವಾದ ವಂಚಕರು ಮೈಸೂರಿನ ಇಬ್ಬರಿಗೆ ಲಕ್ಷಾಂತರ ರೂ. ವಂಚಿಸಿರುವ ಬಗ್ಗೆ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ವಿದೇಶದಲ್ಲಿ ನೆಲೆಸಿರುವುದಾಗಿ ಪರಿಚಯ ಮಾಡಿಕೊಂಡಿರುವ ಖದೀಮರು, ಒಬ್ಬರಿಂದ ಸುಮಾರು 10.86 ಲಕ್ಷ ರೂ. ಹಾಗೂ ಮತ್ತೊಬ್ಬರಿಂದ 11.70 ಲಕ್ಷ ರೂ. ಪಡೆದು ವಂಚಿಸಿದ್ದಾರೆ.

ಪ್ರಕರಣ 1: ಬೋಗಾದಿಯ 60 ವರ್ಷದ ವ್ಯಕ್ತಿಯೊಬ್ಬರಿಗೆ ಮೇ 23ರಂದು ಫೇಸ್‌ಬುಕ್ ಮೂಲಕ ಅಪರಿಚಿತನೊಬ್ಬ ಪರಿಚಯವಾಗಿದ್ದಾನೆ. ಆತ ತನ್ನ ಹೆಸರು ಫಿಲೋ ವಿಕ್ಟರ್, ತಾನು ಯುನೈಟೆಡ್ ಕಿಂಗ್ಡಮ್ (ಯುಕೆ)ನಲ್ಲಿ ನೆಲೆಸಿರುವುದಾಗಿ ಹೇಳಿಕೊಂಡಿದ್ದಾನೆ. ಬಳಿಕ ಮೊಬೈಲ್ ಸಂಖ್ಯೆ ಪಡೆದು ವಾಟ್ಸಾಪ್‌ನಲ್ಲಿ ಸಂದೇಶ ಕಳುಹಿಸಿ, ನಂಬಿಕೆ ಗಿಟ್ಟಿಸಿದ್ದಾನೆ. ಮೇ 28ರಂದು ಕರೆ ಮಾಡಿದ ಆತ, ನಾನು ದೆಹಲಿಗೆ ಬಂದಿದ್ದು, ಇಮಿಗ್ರೇಷನ್ ಫಾರ್ಮಾಲಿಟೀಸ್ ಪೂರ್ಣಗೊಳಿಸಲು ತುರ್ತು ಹಣ ಬೇಕು, ನಂತರ ವಾಪಸ್ ಮಾಡುವುದಾಗಿ ಕೇಳಿದ್ದಾನೆ. ಆತನ ಮಾತು ನಂಬಿ, ಎರಡು ಖಾತೆಗಳ ಮೂಲಕ ವಂಚಕನಿಗೆ ಒಟ್ಟು 10,85,900 ರೂ. ವರ್ಗಾಯಿಸಿದ್ದಾರೆ. ಕೆಲ ದಿನಗಳ ನಂತರ ತಾವು ಮೋಸ ಹೋಗಿರುವುದು ತಿಳಿದು, ಪೊಲೀಸರಿಗೆ ದೂರು ನೀಡಿದ್ದಾರೆ.


ಪ್ರಕರಣ 2: ನಾಯ್ಡುನಗರದ 42 ವರ್ಷದ ವ್ಯಕ್ತಿಗೆ ಏಪ್ರಿಲ್ 10ರಂದು ಫೇಸ್‌ಬುಕ್ ಮೂಲಕ ಪರಿಚಯವಾದ ಅಪರಿಚಿತ, ಕೆಲ ದಿನಗಳ ನಂತರ ವಾಟ್ಸಾಪ್ ಸಂದೇಶ ಕಳುಹಿಸಲು ಪ್ರಾರಂಭಿಸಿದ್ದ. ಹೀಗೆ ಆತ್ಮೀಯತೆ ಬೆಳೆಸಿಕೊಂಡು ಹಣದ ಸಹಾಯ ಮಾಡುವುದಾಗಿ ನಂಬಿಸಿದ್ದ. ಕೆಲ ದಿನಗಳ ಬಳಿಕ ನಾನು 15 ಸಾವಿರ ಪೌಂಡ್ಸ್ ಹಣವನ್ನು ಗಿಫ್ಟ್ ಆಗಿ ಕಳುಹಿಸಿದ್ದೇನೆ. ಆದರೆ ಆ ಹಣವನ್ನು ಪಡೆಯಬೇಕಾದರೆ ಕೆಲವು ಟ್ಯಾಕ್ಸ್ ಕಟ್ಟಬೇಕು ಎಂದು ಹೇಳಿ ಹಂತ ಹಂತವಾಗಿ ಒಟ್ಟು 11,70,750 ರೂ. ವರ್ಗಾವಣೆ ಮಾಡಿಸಿಕೊಂಡು, ನಂತರ ಸಂಪರ್ಕಕ್ಕೆ ಸಿಕ್ಕಿಲ್ಲ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಇಂದು ಮೈಸೂರಿಗೆ ಸಿಎಂ



ಮೈಸೂರು, ಜೂ.7 (ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಜೂ.8) ಮೈಸೂರಿಗೆ ಆಗಮಿಸುವರು. ಭಾನುವಾರ ಸಂಜೆ 4–25 ಗಂಟೆಗೆ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಅವರು, ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸಂಜೆ 5.30 ಗಂಟೆಗೆ ವಿದ್ಯಾ ನಗರದ ಸ್ಥಳೀಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ರಾತ್ರಿ 7.30 ಗಂಟೆಗೆ ಹೂಟಗಳ್ಳಿಯ ಸೈಲೆಂಟ್ ಶೋರ್ಸ್‌ನಲ್ಲಿ ನಡೆಯುವ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ಪುತ್ರಿ ವಿವಾಹ ಮಹೋತ್ಸವದಲ್ಲಿ ಪಾಲ್ಗೊಂಡು ಅಂದು ರಾತ್ರಿ ಮೈಸೂರಲ್ಲಿ ವಾಸ್ತವ್ಯ ಹೂಡುವರು. ಮರುದಿನ ಬೆಳಿಗ್ಗೆ ವಿಶೇಷ ವಿಮಾನದಲ್ಲಿ ಸಿದ್ದರಾಮಯ್ಯ ಬೆಂಗಳೂರಿಗೆ ಹಿಂತಿರುಗುವರು ಎಂದು ಮುಖ್ಯಮಂತ್ರಿಗಳ ಕಚೇರಿ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.06.2025 ಭಾನುವಾರ, ಮಳೆ ನಕ್ಷತ್ರ: ಮೃಗಶಿರ, 08.06.2025 ರಿಂದ 21.06.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

■ **ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ವಿಶ್ವದ ಮೊಟ್ಟ ಮೊದಲ ವಿಶಿಷ್ಟ ಕಾರ್ಯಕ್ರಮ ವನ ದುರ್ಗಾ ವೃಕ್ಷಶಾಂತಿ ಮಹಾಯಜ್ಞ, ಸಹಸ್ರ ಚಂಡೀಯಾಗ, ಸ್ಥಳ: ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ, ಬೆಳಗ್ಗೆಯಿಂದ.

■ **ಬಾಲಕೃಷ್ಣ ಪ್ರಾವಿಷನ್ ಸ್ಟೋರ್:** ಕೃಷಿ ಮೇಳ, ಸ್ಥಳ: ನಂಜರಾಜ ಬಹಾದ್ದೂರ್ ಛತ್ರ, ಬೆಳಗ್ಗೆ 9 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ (ಬೆಳಗ್ಗೆ 6.30ರಿಂದ 7 ರವರೆಗೆ), ಕಾರ್ನಿಯಲ್ ಒಪೇ ಸಿಟಿ (ಕಾರ್ನಿಯಾದ ಅಪಾರದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ಮೇಘ ಮೈತ್ರಿ ಕನ್ನಡ ಸಾಹಿತ್ಯ ಸಂಘ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ರಾಜ್ಯ ಮಟ್ಟದ ಮೇಘ ಮೈತ್ರಿ 8ನೇ ಕನ್ನಡ ಸಾಹಿತ್ಯ ಸಮ್ಮೇಳನ–2025, ಧ್ವಜಾರೋಹಣ: ಹಿರಿಯ ಸಮಾಜ ಸೇವಕ ಡಾ.ರಘುರಾಮ ವಾಜಪೇಯಿ, ಮೆರವಣಿಗೆಗೆ ಚಾಲನೆ: ಕನ್ನಡ ಪರ ಹೋರಾಟಗಾರ ಧನಪಾಲ್ ಬಿ, ಪುಸ್ತಕ ಮಳಿಗೆ ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಚಾರಗೋಷ್ಠಿ, ಕವಿಗೋಷ್ಠಿ, ಅಧ್ಯಕ್ಷತೆ: ಸಮ್ಮೇಳನಾಧ್ಯಕ್ಷ ಹಿರಿಯ ಸಾಹಿತಿಗಳು, ವೈದ್ಯರಾದ ಡಾ. ಸಿ. ಶರತ್‌ಕುಮಾರ್, ಉಪಸ್ಥಿತಿ: ಮೇಘ ಮೈತ್ರಿ ಕನ್ನಡ ಸಾಹಿತ್ಯ ಸಂಘದ ಅಧ್ಯಕ್ಷ ಎಂ. ರಮೇಶ್ ಕಮತಗಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ, ಬೆಳಗ್ಗೆ 9.30ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ, ನಿದ್ರೆ ಸಮಸ್ಯೆ ನಿವಾರಣೆ ಶಿಬಿರ ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಯೋಗ ಸಾಧನಾ ಕುಟೀರ:** ಕುಟೀರ ಉದ್ಘಾಟನೆ, ಉದ್ಘಾಟನೆ: ಯೋಗಗುರು ಬಿಎನ್‌ಎಸ್ ಐಯ್ಯಂಗಾರ್, ಸ್ಥಳ: ಡಿ. ಸುಬ್ಬಯ್ಯ ರಸ್ತೆ, 2ನೇ ಕ್ರಾಸ್, ಬೆಳಗ್ಗೆ 10 ಗಂಟೆಗೆ.

■ **ಅನ್ವೇಷಣಾ ಸೇವಾ ಟ್ರಸ್ಟ್, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್:** ಧ್ವನಿ ಕೊಟ್ಟ ಧಣಿ ಮಾಜಿ ಮುಖ್ಯಮಂತ್ರಿ ಡಿ. ದೇವರಾಜೇ ಅರಸ್ ಅವರ 43ನೇ ಪುಣ್ಯಸ್ಮರಣೆ, ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ: ರೇಷ್ಮೆ ಮತ್ತು ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್, ಡಿ. ದೇವರಾಜೇ ಅರಸ್ ಕೊಡುಗೆಗಳ ಕುರಿತು: ವಿಧಾನಪರಿಷತ್ ಸದಸ್ಯ ವೈದ್ಯರತ್ನ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ: ಅರಸು ಜಾಗೃತಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎ. ವೆಂಕಟೇಶ್, ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಶರ್, ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್‌ವ್ಹೀಲ್, ರೋಟರಿ ಭವನ, ವಿಜಯನಗರ, ರೈಲ್ವೆ ಬಡಾವಣೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್:** ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್‌ನ ನೂತನ ಕಚೇರಿ ಉದ್ಘಾಟನೆ ಮತ್ತು ಅರಸು ಜನಾಂಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ. ಕಚೇರಿ ಉದ್ಘಾಟನೆ: ಶಾಸಕ ಕೆ. ಹರೀಶ್‌ಗೌಡ, ವಿದ್ಯಾರ್ಥಿಗಳಿಗೆ ಸನ್ಮಾನ: 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕ ಕೆ.ಬಿ. ಗಣಪತಿ, ಡಾ. ಎಂ.ಜಗನ್ನಾಥ್ ಶೆಣೈ, ಮಾಜಿ ಕಾರ್ಪೊರೇಟರ್ ಎಸ್‌ಬಿಎಂ ಮಂಜು, ಅಧ್ಯಕ್ಷತೆ: ಟ್ರಸ್ಟ್‌ನ ಅಧ್ಯಕ್ಷ ಬಿ.ಎಸ್. ಶ್ರೀಧರರಾಜ ಅರಸ್, ಉಪಸ್ಥಿತಿ: ಟ್ರಸ್ಟ್‌ನ ಗೌರವ ಅಧ್ಯಕ್ಷ ಎಂ.ಎಲ್. ಬಸವರಾಜೇ ಅರಸ್, ಸ್ಥಳ: ಗೋಕುಲಂ ಮೂರನೇ ಹಂತ, 4ನೇ ಕ್ರಾಸ್, 2ನೇ ಮೇನ್, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಿನೆಮಾ ಯಾನ: ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ–ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ.ಎಸ್.ಸ್ನೇಹ ಮತ್ತು ಸುನೀತಾ, ವ್ಯಾಖ್ಯಾನ–ಡಾ. ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು: ರವಿ ಮೂರೂರು, 8.30 ಯೋಗ ಕುರಿತ ವಿಶೇಷ ಸರಣಿ: 'ಮಹಾಯೋಗ', 8.35 ಯೋಗದತ್ತ ಜಗತ್ತು: ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಯೋಗ ಶಿಕ್ಷಕರಾದ ಎಸ್.ಶಶಿಕುಮಾರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 8.50 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ: "ಮಕ್ಕಳಲ್ಲಿ ಕಲಿಕಾ ನ್ಯೂನತೆಗಳು" ಕುರಿತು ಮೈಸೂರಿನ ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯ ಲಾಂಗ್ವೇಜ್ ಪೆಥಾಲಜಿ ವಿಭಾಗದ ಪ್ರೊಫೆಸರ್ ಹಾಗೂ ಸ್ಪೀಚ್ ಲಾಂಗ್ವೇಜ್ ಪೆಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ.ಜಯಶ್ರೀ ಶಾನ್ ಬಾಳ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ: ಕಥೆ ಕೇಳು ಪುಟ್ಟ; ಪ್ರಸ್ತುತಿ– ಬಿ.ಜಿ. ಕವಿತಾ, 10.30 KRISH-TRISH and Balty boy: 'ನಾವು ಭಾರತೀಯರು' ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ,, 10.45 ಮಕ್ಕಳ ಮಂಟಪ: ವಿಜಯನಗರದ ರಾಷ್ಟ್ರೋತ್ಥಾನ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.15 ಮಿಶ್ರಮಾಧುರ್ಯ.

ಮಧ್ಯಾಹ್ನ: 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು: ಶಾಂತಲ ವಟ್ಟಂ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ: 'ಅಮೃತವರ್ಷಿಣಿ', 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ನಕ್ಷತ್ರ ಲೋಕ, ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ: ಹೆಸರಾಂತ ಚಲನಚಿತ್ರ ನಿರ್ದೇಶಕ ಬಹದ್ದೂರ್ ಚೇತನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ– ಪ್ರಭುಸ್ವಾಮಿ ಮಳಿಮಠ್ ಹಾಗೂ ಶ್ರೀಮಾನ್. **ಸಂಜೆ:** 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: 1.ತೋರಣ ಹೂರಣ: ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಟಿ.ವಿ.ವಿದ್ಯಾಶಂಕರ್, 2. ಕೃಷಿ ಲೋಕ, 3. ಕೃಷಿ ದರ್ಪಣ: ವಾರದ ಕೃಷಿರಂಗ/ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ–ಆರ್.ಲೋಕೇಶ್ವರಿ. **ರಾತ್ರಿ:** 7.45 ಕನ್ನಡದಲ್ಲಿ ಭಾಷಣ, 8.00 'ನಾದ ಮೀಮಾಂಸೆ': ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪುರೇಷೆ ಕುರಿತ ಸರಣಿ, ಸಂಶೋಧನೆ ಹಾಗೂ ಸಾಹಿತ್ಯ–ಡಾ.ಸಿ.ಎ.ಶ್ರೀಧರ್, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು, 9.30 ಸವಿನೆನಪು, 10.00 ರವಿವಾರದ ಅಖಿಲಭಾರತ ಸಂಗೀತ ಸಭಾ, ಸುನಿಲ್ ಅವಚಾಟ್– ಬಾನ್ಸುರಿ ವಾದನ.

■ **ಮೈಸೂರು ಆರ್ಟ್ ಗ್ಯಾಲರಿ:** ಸಾಧಕರೊಂದಿಗೆ ಸಂವಾದ–102, ತಿಂಗಳ ಸಾಧಕ ಕರ್ನಾಟಕ ಕಲಾಶ್ರೀ ಡಾ.ಕೆ.ಕುಮಾರ್, ಮುಖ್ಯ ಅತಿಥಿ: ಹಿರಿಯ ರಂಗಭೂಮಿ ತಜ್ಞ ಕೆ.ಜಿ.ನಾರಾಯಣ ಕಿಕ್ಕೇರಿ, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್.ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11 ಗಂಟೆಗೆ.

■ **ತೊಳಸಿ ಜ್ಯುವೆಲ್ಸ್:** ಇಟಾಳಸಿ ಲಕ್ಸ್ ಫೆಸ್ಟ್–ಆಭರಣಗಳ ಪ್ರದರ್ಶನ, ಸ್ಥಳ: ತೊಳಸಿ ಜ್ಯುವೆಲ್ಸ್, ವಿವಿ ಮೊಹಲ್ಲಾ, ಟೆಂಪಲ್ ರಸ್ತೆ, ಬೆಳಗ್ಗೆ 11ರಿಂದ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್:** ಕರ್ನಾಟಕ ಶಾಸ್ತ್ರೀಯ ಸಂಗೀತ ಅಧ್ಯಯನ ಶಿಬಿರ–2025, ಸ್ಥಳ: #510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30ರಿಂದ.

■ **ವ್ಯವಸ್ಥಾಪಕರು:** ನಾಲ್ವಡಿ ಕೃಷ್ಣರಾಜ ಒಡೆಯರ್ 141ನೇ ಜನ್ಮದಿನದ ಅಂಗವಾಗಿ 8000 ಚದರ ವಿಸ್ತೀರ್ಣದಲ್ಲಿ ಬೃಹತ್ ರಂಗೋಲಿ ಬಿಡಿಸಿ ಗೌರವ ಸಮರ್ಪಣೆ, ಸ್ಥಳ: ಕೋಟೆ ಶ್ರೀ ಆಂಜನೇಯ ದೇವಾಲಯದ ಮುಂಭಾಗ, ಸಂಜೆ 6 ಗಂಟೆಗೆ.

■ **ಶ್ರೀ ರಾಮಕೃಷ್ಣ ಆಶ್ರಮ:** ಜೂನ್ ತಿಂಗಳ ಪ್ರವಚನ, ಸ್ವಾಮಿ ಸರ್ವದರ್ಶನಾನಂದ ಅವರಿಂದ ಸಂತ ಶ್ರೇಷ್ಠರು ವಿಷಯ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಸಂಜೆ 6 ಗಂಟೆಗೆ.

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್:** ಸಿದ್ಧ ಸಮಾದಿ ಯೋಗ ಶಿಬಿರದ ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ಗಂಟೆಗೆ.

■ **ರಂಗಾಯಣ:** ಭಾರತೀಯ ರಂಗಶಿಕ್ಷಣ ಕೇಂದ್ರ 2024–25ನೇ ಸಾಲಿನ ವಿದ್ಯಾರ್ಥಿಗಳ ನಾಟಕೋತ್ಸವ–2025, ನಾಟಕ: ಆ ಊರು ಈ ಊರು, ರಚನೆ: ಜಿ.ಟಿ. ಜೋಷಿ, ನಿರ್ದೇಶನ: ಯತೀಶ್ ಎನ್.ಕೊಳ್ಳೇಗಾಲ, ರಂಗವಿನ್ಯಾಸ: ಶೃತಿ ವಿ., ಸ್ಥಳ: ಭೂಮಿಗೀತ ರಂಗಮಂದಿರ, ರಂಗಾಯಣ, ಸಂಜೆ 6.30ರಿಂದ.

ಮಳೆ ನೀರು ಚರಂಡಿ ನಿರ್ಮಾಣದ ಮೂಲಕ ಪೂರ್ಣಯ್ಯ ನಾಲೆ ಒತ್ತುವರಿಗೆ ಅವಕಾಶ ಆರೋಪ

ಸ್ಥಳ ಪರಿಶೀಲನೆ ಬಳಿಕ ಕಾಮಗಾರಿ ಸ್ಥಗಿತಕ್ಕೆ ಎಂಜಿಪಿ ಆಗ್ರಹ

ಮೈಸೂರು,ಜೂ.7(ಪಿಎಂ)– ನಗರದ ಬೋಗಾದಿ ರಸ್ತೆಯ ಕುದುರೆ ಮಾಳದ ಸಮೀಪದಲ್ಲಿ ಪೂರ್ಣಯ್ಯ ನಾಲೆಯಲ್ಲಿ ನಡೆಯುತ್ತಿರುವ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿಯು ನಾಲೆಯನ್ನು ಕಿರಿದುಗೊಳಿಸಲಿದೆ ಎಂದು ಆರೋಪಿಸಿದ ಎಂಜಿಪಿ (ಮೈಸೂರು ಗ್ರಾಹಕರ ಪರಿಷತ್) ಸದಸ್ಯರು, ಪೂರ್ಣಯ್ಯ ನಾಲೆ ಒತ್ತುವರಿ ತೆರವು ಸಂಬಂಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಉಳಿದಿರುವಾಗ ಈ ರೀತಿ ಕಾಮಗಾರಿ ಮಾಡುವುದು ಕಾನೂನು ಬಾಹಿರ ಎಂದೂ ಆಪಾದಿಸಿದರು.

ಶನಿವಾರ ಸ್ಥಳಕ್ಕೆ ಭೇಟಿ ನೀಡಿದ ಎಂಜಿಪಿ ಸಂಚಾಲಕ ಭಾನು ಪ್ರಶಾಂತ್, ಸದಸ್ಯರಾದ ನಟರಾಜು, ವಿಶ್ವನಾಥ್ ಹಾಗೂ ಪತ್ರಕರ್ತ ಜಿ.ಎಂ.ಮಹದೇವ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಈ ಕಾಮಗಾರಿ ಸ್ಥಗಿತಗೊಳಿಸಲು ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಜಿ.ಎಂ.ಮಹದೇವ ಮಾತನಾಡಿ, ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದಲ್ಲಿ ಪೂರ್ಣಯ್ಯ ನಾಲೆ ಒತ್ತುವರಿ ತೆರವುಗೊಳಿಸಬೇಕೆಂಬ ಸಂಬಂಧ (ಪ್ರಕರಣ ಸಂಖ್ಯೆ ಎಲ್‌ಜಿಸಿ 237/2024 ಮತ್ತು ಎಲ್‌ಜಿಸಿ 238/2024) ಪ್ರಕರಣ ದಾಖಲಿಸಿದ್ದೇನೆ. ಪ್ರಕರಣ ದಾಖಲಿಸಿ ವರ್ಷವಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ಕೋರ್ಟ್ ಕೇಳಿದ ವರದಿ ನೀಡಲು ವಿಳಂಬ ಮಾಡುತ್ತಿದ್ದಾರೆ. ಇದೇ ಜೂ.11ಕ್ಕೆ ಕೋರ್ಟ್‌ನಲ್ಲಿ ವಿಚಾರಣೆ ಇದೆ ಎಂದು ತಿಳಿಸಿದರು.

ಅಧಿಕಾರಿಗಳು ನಾಲೆ ಒತ್ತುವರಿ ಸಂಬಂಧ ಒಮ್ಮೆ ವರದಿ ನೀಡಿದ್ದರಾದರೂ ಅದನ್ನು ತಿರಸ್ಕರಿಸಿದ ಕೋರ್ಟ್, ಒತ್ತುವರಿದಾರರ ವಿವರ, ಒತ್ತುವರಿಯಾಗಿರುವ ವಿಸ್ತೀರ್ಣ ಒಳಗೊಂಡಂತೆ ವಿವರವಾದ ವರದಿ ಕೇಳಿದೆ. ಆದರೆ ಅಧಿಕಾರಿಗಳು ಸಮಗ್ರ ವರದಿ ಕೊಡುವಲ್ಲಿ ವಿಳಂಬ ಮಾಡುತ್ತಿದ್ದಾರೆ. ಈಗ ಇಲ್ಲಿ ನಡೆಯುತ್ತಿರುವ ಕಾಮಗಾರಿ ಕಾನೂನುಬಾಹಿರ ಎಂದು ದೂರಿದರು.

ಎಂಜಿಪಿ (ಮೈಸೂರು ಗ್ರಾಹಕರ ಪರಿಷತ್) ಸದಸ್ಯ ನಟರಾಜು ಮಾತನಾಡಿ, ಈ ಸ್ಥಳವು ಪೂರ್ಣಯ್ಯ ನಾಲೆಯ ಅಂತಿಮ ಘಟ್ಟ, ಒಟ್ಟಾರೆ 23 ಕಿ.ಮೀ. ವ್ಯಾಪ್ತಿಯನ್ನು (ಉದ್ದ) ಪೂರ್ಣಯ್ಯ ನಾಲೆ ಹೊಂದಿದೆ. ಈ ಸ್ಥಳ ಪೂರ್ಣಯ್ಯ ನಾಲೆಗೆ ಬೋಗಾದಿ ರಸ್ತೆಯಲ್ಲಿ ನಿರ್ಮಿಸಿರುವ ಸೇತುವೆ ಮೂಲಕ ನಾಲೆಯ ನೀರು ಹರಿದು ಹೋಗಲು ಸುಮಾರು 200 ಅಡಿ ಅಗಲದಲ್ಲಿ ಮೂರು ಕಾಂಕ್ರೀಟ್ ವಿಭಾಗಗಳನ್ನು ಮಾಡಲಾಗಿದೆ. ಅಂತೆಯೇ ಈ ಸ್ಥಳದ ನಾಲೆಯ ಜಾಗವೂ ಸುಮಾರು 200 ಅಡಿ ಅಗಲ ಹೊಂದಿದೆ. ಆದರೆ ಇಲ್ಲಿ ಇದೀಗ ನಾಲೆ ಮಧ್ಯ ಭಾಗದಲ್ಲಿ ಚರಂಡಿ ಮಾದರಿಯಲ್ಲಿ ಕಿರಿದಾದ ಕಾಂಕ್ರೀಟ್ ನಿರ್ಮಾಣ ಮಾಡುತ್ತಿದ್ದು, ಆ ಮೂಲಕ ಸಾರ್ವಜನಿಕರ ತೆರಿಗೆ ಹಣ ಪೋಲು ಮಾಡಲಾಗುತ್ತಿದೆ ಎಂದು ಆರೋಪಿಸಿದರು.


ಬೋಗಾದಿ ರಸ್ತೆಯ ಕುದುರೆ ಮಾಳದ ಸಮೀಪದಲ್ಲಿ ಪೂರ್ಣಯ್ಯ ನಾಲೆಯಲ್ಲಿ ನಡೆಯುತ್ತಿರುವ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿ ವೀಕ್ಷಿಸುತ್ತಿರುವ ಎಂಜಿಪಿ ಸದಸ್ಯರು.

ಸ್ಮಶಾನ ಅಭಿವೃದ್ಧಿ ಭಾಗವಾಗಿ ಕಾಮಗಾರಿ...

50 ವರ್ಷಗಳ ಹಿಂದೆ ಸರಸ್ವತಿಪುರಂನಲ್ಲಿ ನಮ್ಮ ಕುಕ್ಕರಹಳ್ಳಿ ಬಡಾವಣೆಗೆ ಸಂಬಂಧಿಸಿದಂತೆ ಸ್ಮಶಾನ ಇತ್ತು. ಅದನ್ನು ಸರ್ಕಾರ ವಶಪಡಿಸಿಕೊಂಡು ಈಗಿರುವ ಕುದುರೆ ಮಾಳದ ಸಮೀಪದ ಪೂರ್ಣಯ್ಯ ನಾಲೆ ಏರಿಯ ಜಾಗವನ್ನು ಕಲ್ಪಿಸಲಾಯಿತು. ಅಂದಿನಿಂದಲೂ ಅದು ನಮ್ಮ ಬಡಾವಣೆಯ ಸ್ಮಶಾನವಾಗಿದೆ. ಪಾಲಿಕೆಯ ವತಿಯಿಂದ ಸ್ಮಶಾನಕ್ಕೆ ಅಗತ್ಯವಾದ ಮೂಲಸೌಲಭ್ಯ ಕಲ್ಪಿಸಿದ್ದಾರೆ. ಆದರೆ ಹೆಚ್ಚು ನೀರು ನಿಲ್ಲುವ ಪರಿಸ್ಥಿತಿ ಇದೆ. ಹಾಗಾಗಿ ನೀರು ನಿಲ್ಲುವುದನ್ನು ತಪ್ಪಿಸಲು ಚರಂಡಿ ನಿರ್ಮಾಣ ಮಾಡಬೇಕೆಂದು ನಮ್ಮ ಕುಕ್ಕರಹಳ್ಳಿ ನಿವಾಸಿಗಳ ಮನವಿ ಮೇರೆಗೆ ಈಗ ಕಾಮಗಾರಿ ನಡೆಯುತ್ತಿದೆ. ನಮಗೆ ಸ್ಮಶಾನಕ್ಕಾಗಿ ಪರ್ಯಾಯವಾಗಿ ಸಮರ್ಪಕ ಸ್ಥಳ ಕಲ್ಪಿಸಿದರೂ ಸರಿಯೇ.

-ಎಂ.ಅಂದಾನಿ, ನಿವೃತ್ತ ಬಿಇಓ, ಜೈಭೀಮ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮತ್ತು ಕುಕ್ಕರಹಳ್ಳಿ ನಿವಾಸಿ.

ಸಮಾಜ ಕಲ್ಯಾಣ ಇಲಾಖೆ ಗಮನಕ್ಕೆ ತರುವೆ...

ಸಮಾಜ ಕಲ್ಯಾಣ ಇಲಾಖೆ ಮೂಲಕ ಎಸ್‌ಸಿಪಿ ಯೋಜನೆಯಡಿ ಕುದುರೆ ಮಾಳ ಸಮೀಪದ ಸ್ಮಶಾನ ಅಭಿವೃದ್ಧಿಗಾಗಿ 50 ಲಕ್ಷ ರೂ. ವೆಚ್ಚದಲ್ಲಿ ಮಳೆ ನೀರು ಚರಂಡಿ ನಿರ್ಮಾಣ ಕಾಮಗಾರಿ ಮಾಡಲಾಗುತ್ತಿದೆ. ಈ ಕಾಮಗಾರಿಗೆ ಆಕ್ಷೇಪ ವ್ಯಕ್ತಪಡಿಸಿರುವ ಸಂಬಂಧ ಸೋಮವಾರ ಸಮಾಜ ಕಲ್ಯಾಣ ಇಲಾಖೆ ಗಮನಕ್ಕೆ ತರಲಾಗುವುದು.

-ವಿವೇಕ, ಸಹಾಯಕ ಇಂಜಿನಿಯರ್, ಕೆಆರ್‌ಐಡಿಎಲ್.

ಈ ಸ್ಥಳದ ಕೆಲಭಾಗವನ್ನು ಸ್ಮಶಾನಕ್ಕೆ ಉಪಯೋಗಿಸಿರುವುದರಲ್ಲಿ ತಪ್ಪೇನಿಲ್ಲ. ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯು (ಕೆಆರ್‌ಐಡಿಎಲ್) ಅನಗತ್ಯವಾಗಿ 50 ಲಕ್ಷ ರೂ. ವೆಚ್ಚದಲ್ಲಿ ಚರಂಡಿ ಮಾದರಿಯಲ್ಲಿ ಕಿರಿದಾದ ನಿರ್ಮಾಣ ಮಾಡುತ್ತಿದೆ. ಇದು ನಾಲೆಯನ್ನು ವಿರೂಪಗೊಳಿಸುವ ಕೆಲಸ. ಅಂದರೆ ಸರ್ಕಾರಿ ಜಾಗವನ್ನು ಸರ್ಕಾರಿ ಇಲಾಖೆಯೇ ವಿರೂಪಗೊಳಿಸಲು ಮುಂದಾಗಿದೆ. ಹಾಗೆ ನೋಡಿದರೆ ಕೆಆರ್‌ಐಡಿಎಲ್‌ನವರು ಕಾಮಗಾರಿ ಮಾಡಲು ಅವಕಾಶವೇ ಇಲ್ಲ. ಅವರು ಗುತ್ತಿಗೆ ತೆಗೆದುಕೊಂಡು ಕಾಮಗಾರಿ ನಡೆಸಬೇಕು. ಪಾಲಿಕೆ ಜಾಗದಲ್ಲಿ ಕಾಮಗಾರಿ ಮಾಡಲು ಅವಕಾಶ ಕೊಟ್ಟಿದ್ದು ಯಾರು ಎಂದು ಕೇಳಿದರೆ ಸಮಾಜ ಕಲ್ಯಾಣ ಇಲಾಖೆ ಎಂದು ಉತ್ತರಿಸುತ್ತಾರೆ. ಆ ಇಲಾಖೆಗೂ, ನಿರ್ಮಾಣ ಕಾಮಗಾರಿಗೂ ಎಲ್ಲಿಂದೆಲ್ಲಿಯ ಸಂಬಂಧ ಎಂದು ಪ್ರಶ್ನಿಸಿದರು.

ಇದೇ 2025ರ ಮಾ.25ರಂದು ಜಿಲ್ಲಾಧಿಕಾರಿಗಳು ತಮ್ಮ ಅಧ್ಯಕ್ಷತೆಯಲ್ಲಿ ಪೂರ್ಣಯ್ಯ ನಾಲೆ ಒತ್ತುವರಿ ಕುರಿತು ಸಭೆ ನಡೆಸಿ, ಒತ್ತುವರಿ ಕುರಿತಂತೆ ಸರ್ವೇ ನಡೆಸಿ ದಾಖಲೆಗಳನ್ನು ಸಂಗ್ರಹಿಸಲು ವಿವಿಧ ಇಲಾಖೆಗಳ ಐದು ತಂಡಗಳನ್ನು ರಚಿಸಿದ್ದಾರೆ. ಹೀಗಿರುವಾಗ ಜಿಲ್ಲಾಧಿಕಾರಿಗಳೇ ಈ ಕಾಮಗಾರಿಗೆ ಅನುಮತಿ ನೀಡಿದ್ದಾರೆ ಎಂದು ಕೆಆರ್‌ಐಡಿಎಲ್ ಅಧಿಕಾರಿಗಳು ಹೇಳುತ್ತಿದ್ದಾರೆ. ಕೋರ್ಟ್‌ನಲ್ಲಿ ಪ್ರಕರಣ ಇರುವಾಗ ಅನುಮತಿ ಹೇಗೆ ಕೊಟ್ಟರು ಎಂದು ಪ್ರಶ್ನಿಸಿದರು.

23 ಕಿ.ಮೀ. ಹಾದು ಹೋಗಿರುವ ಪೂರ್ಣಯ್ಯ ನಾಲೆ ಮತ್ತು ನಾಲಾ ಖರಾಬು ಪ್ರದೇಶದಲ್ಲಿ ಸುಮಾರು 46 ಎಕರೆಯಷ್ಟು ಸರ್ಕಾರಕ್ಕೆ ಸೇರಿದ ಜಾಗದಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಲಾಗಿದೆ. ಈ ಒತ್ತುವರಿ ತೆರವು ಸಂಬಂಧ ಪ್ರಕರಣ ಕೋರ್ಟ್‌ನಲ್ಲಿದೆ. ಈ ನಡುವೆ ಇಲ್ಲಿ ನಾಲೆ ಕಿರಿದು ಮಾಡಿ ಉಳಿದ ಜಾಗದ ಅತಿಕ್ರಮಕ್ಕೆ ಆಸ್ಪದ ಮಾಡಲಾಗುತ್ತಿದೆ. ಆ ಮೂಲಕ ಸರ್ಕಾರಿ ಜಾಗದ ದುರುಪಯೋಗ ಮಾಡುವುದಲ್ಲದೆ, ನಾಲಾ ಜಾಗವನ್ನು ವಿರೂಪಗೊಳಿಸಿ ಸಾರ್ವಜನಿಕ ನಿಧಿಯ ಅಪವ್ಯಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಮೈಸೆಮ್‌ನಲ್ಲಿ ವಿಶ್ವ ಪರಿಸರ ದಿನಾಚರಣೆ

ಮರುಬಳಕೆ, ಸಮರ್ಪಕ ತ್ಯಾಜ್ಯ ನಿರ್ವಹಣೆಯಿಂದ ಪರಿಸರ ಸಮತೋಲನ

ಕೆಪಿಸಿಬಿ ನಿವೃತ್ತ ಪರಿಸರ ಅಧಿಕಾರಿ ಜಿ.ಆರ್.ಗಣೇಶನ್

ಮೈಸೂರು,ಜೂ.7(ಪಿಎಂ)– ಮರುಬಳಕೆ ಮತ್ತು ಸಮರ್ಪಕ ತ್ಯಾಜ್ಯ ನಿರ್ವಹಣೆ ಮೂಲಕ ಪರಿಸರದಲ್ಲಿ ಸಮತೋಲನ ಕಾಯ್ದುಕೊಳ್ಳುವ ಅಗತ್ಯವಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಪಿಸಿಬಿ) ನಿವೃತ್ತ ಪರಿಸರ ಅಧಿಕಾರಿ ಜಿ.ಆರ್.ಗಣೇಶನ್ ಹೇಳಿದರು. ಮೈಸೂರ್ ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ (ಮೈಸೆಮ್)ನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು. ಪ್ರಕೃತಿಯನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ ಮತ್ತು ಎಲ್ಲಾ ಜೀವಿಗಳ ಮೇಲೆ ಪರಿಣಾಮ ಬೀರುವ ಜೀವವೈವಿಧ್ಯತೆಯನ್ನು ಕಾಪಾಡಿಕೊಳ್ಳುವ ತುರ್ತು ಅವಶ್ಯಕತೆ ಇದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ.ಟಿ.ಎಸ್.ಮಂಜುನಾಥ್, ಪ್ಲಾಸ್ಟಿಕ್ ತ್ಯಾಜ್ಯವನ್ನು ಕಡಿಮೆ ಮಾಡುವ ಮತ್ತು ಸುಸ್ಥಿರ ಅಭ್ಯಾಸಗಳನ್ನು ಉತ್ತೇಜಿಸುವ ಹಾಗೂ ಪ್ಲಾಸ್ಟಿಕ್ ಮಾಲಿನ್ಯದ ಬಗ್ಗೆ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಪರಿಸರ ನಿರ್ವಹಣೆಯಲ್ಲಿ ಗಣೇಶನ್ ಅವರ ಪರಿಣತಿ ಮತ್ತು ಅನುಭವವು ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿಗೆ ಅಮೂಲ್ಯವಾದ ಒಳನೋಟಗಳನ್ನು ಒದಗಿಸಲಿದೆ ಎಂದು ತಿಳಿಸಿದರು. ಕಾಲೇಜು ಅಧ್ಯಾಪಕರು ವಿದ್ಯಾರ್ಥಿಗಳು ಹಾಜರಿದ್ದರು.



ಮೈಸೆಮ್ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು.

ಡಿಎವಿ ಪಬ್ಲಿಕ್ ಶಾಲೆಯಲ್ಲಿ ಅರ್ಥಪೂರ್ಣ ವಿಶ್ವ ಪರಿಸರ ದಿನಾಚರಣೆ

ಮೈಸೂರು,ಜೂ.7(ಪಿಎಂ)– ನಗರದ ಡಿಎವಿ ಪಬ್ಲಿಕ್ ಶಾಲೆಯಲ್ಲಿ ಅರ್ಥ ಪೂರ್ಣವಾಗಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಪರಿಸರದ ಮಹತ್ವ ಮತ್ತು ಅದನ್ನು ಸಂರಕ್ಷಿಸುವ ಅಗತ್ಯತೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿಯನ್ನು ಮೂಡಿಸಲು ವಿವಿಧ ವರ್ಣರಂಜಿತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

'ಹಸಿರೇ ಉಸಿರು, ಉಸಿರಿಗಾಗಿ ಹಸಿರು' ಎಂಬುದನ್ನು ಮನವರಿಕೆ ಮಾಡಿಕೊಡಲು ಶಾಲೆಯ ಆವರಣದಲ್ಲಷ್ಟೇ ಅಲ್ಲದೇ ನೆರೆಹೊರೆಯಲ್ಲೂ ವಿದ್ಯಾರ್ಥಿಗಳ ಮೂಲಕ ಸಸಿಗಳನ್ನು ನೆಡಲಾಯಿತು. ಬಡಾವಣೆಯ ನಿವಾಸಿಗಳಲ್ಲಿ ಪರಿಸರ ಸಂರಕ್ಷಣಾ ಪ್ರಜ್ಞೆಯನ್ನು ಮೂಡಿಸಲು ಜಾಗೃತಿ ಜಾಥಾ ಸಹ ಹಮ್ಮಿಕೊಳ್ಳಲಾಗಿತ್ತು. ಶಾಲೆಯ ಆಡಳಿತ ಮಂಡಳಿಯವರು, ಪ್ರಾಂಶುಪಾಲರು, ಉಪಪ್ರಾಂಶುಪಾಲರು, ಶಿಕ್ಷಕ ವೃಂದದವರು ಮತ್ತು ಮಕ್ಕಳು ಉತ್ಸಾಹದಿಂದ ಭಾಗವಹಿಸಿದ್ದರು.


ಮೈಸೂರಿನ ಡಿಎವಿ ಪಬ್ಲಿಕ್ ಶಾಲೆಯಿಂದ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಗಿಡ ನೆಟ್ಟು ನೀರೆರೆದರು.

ಪಡುವಾರಹಳ್ಳಿ ಸಿಗ್ನಲ್ ಬಳಿ ರಸ್ತೆಯಲ್ಲಿ ಹರಿಯುತ್ತಿದೆ ತ್ಯಾಜ್ಯ ನೀರು


ತ್ಯಾಜ್ಯ ನೀರು ರಸ್ತೆಯಲ್ಲಿ ಹರಿಯುತ್ತಿರುವುದು

ಮೈಸೂರು, ಜೂ.7(ಎಸ್‌ಪಿಎನ್)– ಕಳೆದೊಂದು ತಿಂಗಳಿಂದ ಮೈಸೂರು–ಹುಣಸೂರು ರಸ್ತೆಯ ಪಡುವಾರಹಳ್ಳಿ ಸಿಗ್ನಲ್ ಬಳಿ ಮ್ಯಾನ್‌ಹೋಲ್‌ನಿಂದ ಉಕ್ಕಿ ತ್ಯಾಜ್ಯ ನೀರು ರಸ್ತೆಯಲ್ಲಿ ಹರಿದು ಪಾದಚಾರಿಗಳು, ವಾಹನ ಸವಾರರು ಮೂಗುಮುಚ್ಚಿ ಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಮ್ಯಾನ್‌ಹೋಲ್ ವರ್ಷದಲ್ಲಿ ಹಲವು ಬಾರಿ ಕಟ್ಟಿಕೊಳ್ಳುತ್ತದೆ. ಧಾರಾಕಾರ ಮಳೆ ಸುರಿದಾಗ ಮಳೆ ನೀರು ಹಾಗೂ ಒಳಚರಂಡಿ ನೀರು ಒಟ್ಟಿಗೆ ಸೇರಿ ರಸ್ತೆಗೆ ಹರಿಯುತ್ತದೆ ಇದರಿಂದ ವಾಹನ ಸವಾರರು ಈ ಮಾರ್ಗದಲ್ಲಿ ಸಂಚರಿಸುವಾಗ ತೀವ್ರ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.

ಪಡುವಾರಹಳ್ಳಿ ಸಿಗ್ನಲ್ ಬಿಟ್ಟ ತಕ್ಷಣ, ವಾಹನಗಳು ವೇಗವಾಗಿ ತ್ಯಾಜ್ಯ ನೀರಿನ ಮೇಲೆ ಚಲಿಸುವುದರಿಂದ ಆ ನೀರು ಪಾದಚಾರಿಗಳಿಗೆ ಹಾರಿ ಬಟ್ಟೆಗಳೆಲ್ಲಾ ಗಲೀಜು ಆಗಿರುವ ಪ್ರಕರಣಗಳಿವೆ. ಹಾಗಾಗಿ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಸಾರ್ವಜನಿಕರು ಮನವಿ ಮಾಡಿದ್ದಾರೆ.

ನಾಳೆ ಬೆಂಗಳೂರಲ್ಲಿ 'ಕ್ರಾಂತಿಕಾರಿ ಸಮಾವೇಶ'

ಮಾದಿಗ, ಇದಕ್ಕೆ ಸಬಂಧಿತ ಜಾತಿಯ ಜನ ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ವಕೀಲ ಅರುಣ್‌ಕುಮಾರ್ ಮನವಿ



ಮೈಸೂರು, ಜೂ.7– ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಜೂ.9ರಂದು ನಡೆಯಲಿರುವ 'ಕ್ರಾಂತಿಕಾರಿ ಸಮಾವೇಶ'ಕ್ಕೆ ಮಾದಿಗ ಹಾಗೂ ಮಾದಿಗ ಸಂಬಂಧಿತ ಜಾತಿಗಳ ಜನ ಬೃಹತ್ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಮನವಿ ಮಾಡಿದ್ದಾರೆ.

ಒಳಮೀಸಲಾತಿ ಜಾರಿಗೆ ಯಾರೇ ಹೋರಾಟ ನಡೆಸಿದರೂ ನಮ್ಮ ವೇದಿಕೆ ಅವರ ಜೊತೆಯಲ್ಲಿರಲಿದೆ. ಹಾಗೆಯೇ ರಾಜ್ಯದೆಲ್ಲೆಡೆಯಿಂದ ಶಕ್ತಿ ಸಿಗಬೇಕು. ಈ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಜೂ.9ರಂದು ನಡೆಯಲಿರುವ ಮಹತ್ವದ ಕ್ರಾಂತಿಕಾರಿ ಸಮಾವೇಶಕ್ಕೆ ಎಲ್ಲಾ ಜಿಲ್ಲೆ ಹಾಗೂ ತಾಲೂಕುಗಳಿಂದಲೂ ಸ್ವಯಂ ಪ್ರೇರಿತವಾಗಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಬೇಕು. ಪ್ರಯಾಣದ ಖರ್ಚು–ವೆಚ್ಚಕ್ಕೆ ಎಲ್ಲರೂ ಸೇರಿ ವ್ಯವಸ್ಥೆ ಮಾಡಿಕೊಂಡು ಬರಬೇಕು. ಹೆಚ್ಚು ಜನ ಸೇರಿದರೆ ಸರ್ಕಾರಕ್ಕೆ ತೀಕ್ಷ್ಣ ಸಂದೇಶ ರವಾನೆಗೂ ಎಂದು ತಿಳಿಸಿದ್ದಾರೆ.

ಸಮಾವೇಶದಲ್ಲಿ ಭಾಗವಹಿಸುವ ವಕೀಲ ಮಿತ್ರರು, ಸಮವಸ್ತ್ರವಾದ ಕಪ್ಪು ಕೋಟ್ ಧರಿಸಿ ಬರಬೇಕು. ಇದು ಮಾದಿಗ ಹಾಗೂ ಮಾದಿಗ ಸಂಬಂಧಿತ ಜಾತಿಗಳ ಸಮಾವೇಶ ಎಂಬುದನ್ನು ಮನವರಿಕೆ ಮಾಡಿಕೊಡಬೇಕು. ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ನಿಟ್ಟಿನಲ್ಲಿ ಅವರಿಗೆ ಹೋರಾಟದ ಮಹತ್ವವನ್ನು ತಿಳಿಸಿಕೊಡಬೇಕು. ಬುದ್ಧಿಜೀವಿಗಳು, ಯುವಕರೊಂದಿಗೆ ಚರ್ಚೆ ಮಾಡಿ, ಹೆಚ್ಚು ಜನರನ್ನು ಸಮಾವೇಶಗೊಳಿಸುವ ಜವಾಬ್ದಾರಿ ವಕೀಲರುಗಳ ಮೇಲಿದೆ. ಒಟ್ಟಾರೆ ರಾಜ್ಯದೆಲ್ಲೆಡೆಯಿಂದ ಅಪಾರ ಸಂಖ್ಯೆಯ ಜನ ಭಾಗವಹಿಸುವ ಮೂಲಕ ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದು ವೇದಿಕೆ ಪರವಾಗಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದಾಗಿ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

12ನೇ ವರ್ಷದ ಸವಿನೆನಪು



ನೀನು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷ ಆಯಿತು. ನಿನ್ನ ಆತ್ಮಕ್ಕೆ ಚಿರಶಾಂತಿ ಕೋರುವ,

ತಂದೆ– ಹೆಬ್ಬಾಳೇಗೌಡ ಹಾಗೂ ಕುಟುಂಬವರ್ಗ ಡಿ. ಸಾಲುಂಡಿ

ಹೆಚ್. ಬೀರೇಗೌಡ
ಜನನ: 25-2-2000 ಮರಣ: 08-06-2013

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಲೇಟ್.ಎಂ.ಎಸ್ ಶ್ರೀನಿವಾಸನ್‌ರವರ ಮಗ ಶ್ರೀ ಸುಬ್ರಹ್ಮಣ್ಯ ಎಂ.ಎಸ್‌ರವರು, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ:

ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಕಬೀರ್ ರಸ್ತೆ, ನಂ.1647 L 67, ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿದ್ದು ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 12.7 ಅಡಿ ಮತ್ತು ಉತ್ತರ–ದಕ್ಷಿಣ:54 ಅಡಿ, ಒಟ್ಟು ವಿಸ್ತೀರ್ಣ: 685.8 ಚದರ ಅಡಿ, ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿಗೆ ಚಕ್ಕುಬಂದಿ:
ಪೂರ್ವಕ್ಕೆ– ನಾಗರತ್ನ ರವರ ಮನೆ
ಪಶ್ಚಿಮಕ್ಕೆ – ಲೇ.ಚಿಕ್ಕಣ್ಣನವರ ಮನೆ.
ಉತ್ತರಕ್ಕೆ–ಕನ್ಸರ್ ವೆನ್ಸಿಗಲ್ಲಿ ಮತ್ತು ದಕ್ಷಿಣಕ್ಕೆ –ಕಬೀರ್ ರಸ್ತೆ

ಸಹಿ/– **ಆರ್.ಪಾರ್ಥಸಾರಥಿ,** ವಕೀಲರು,
ನಂ.126/2, 1517, ವಿನೋಬಾ ರಸ್ತೆ,
ಶಿವರಾಂಪೇಟೆ, ವಿಶಾಲ್ ಮೆಗಾಮಾರ್ಟ್ ಹತ್ತಿರ,
ಮೈಸೂರು–1, ಮೊ: **9449703430**
Email:rputtarkar@yahoo.co.in

ನಕ್ಕರೆ ಅದೇ ಸ್ವರ್ಗ

ಕಾರು ಅಪಘಾತವಾಗಿ ಕೇಸ್ ಕೋರ್ಟ್ ಮೆಟ್ಟಿಲೇರಿತು.

ನ್ಯಾಯಾಧೀಶರು : ಆಯ್ತು. ನೀನು ಕಾರನ್ನು ನಿಧಾನವಾಗಿ ಓಡಿಸ್ತಾ ಇದ್ದೆ ಅನ್ನೋದಕ್ಕೆ ನಿನ್ನತ್ರ ಏನ್ ಸಾಕ್ಷಿ ಇದೆ?

ಕಾರಿನ ಮಾಲೀಕ : ಯಾವ ಖುಷಿಗೆ ಅಂತ ಫಾಸ್ಟಾಗಿ ಹೋಗ್ಲಿ ಮಹಾಸ್ವಾಮಿ. ಹೆಂಡತಿ ತವರು ಮನೆಗೆ ಹೋಗಿದ್ಲು, ಕರ್ಕೊಂಡು ಬರೋಕೆ ಹೋಗ್ತಾ ಇದ್ದೆ!

ಮೈಸೂರು ಮಿತ್ರ

ಭಾನುವಾರ, 8 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

‘ಶತ್ರು ಎಷ್ಟೇ ಋಣಾತ್ಮಕವಾಗಿ ಬಲಶಾಲಿಯಾಗಿದ್ದರೂ, ಕರ್ಮದ ಫಲ ಎದುರಾದಾಗ ಶರಣಾಗತಿ ಹೊಂದಲೇಬೇಕು’

– ಶ್ರೀ ಕೃಷ್ಣ ಪರಮಾತ್ಮ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಂಗಾರ ಇಟ್ಟುಕೊಂಡು ಬೆಳ್ಳಿ ಬೇಡಿದ ಹಾಗೆ.

ನಿಮ್ಮ ಪತ್ರಗಳು

■ ಈ ಸಾವು ನ್ಯಾಯವೇ.....? ಇದಕ್ಕೆ ಯಾರ ತಲೆದಂಡ.......!

ಮಾನ್ಯರೆ,

ಮಂಗಳವಾರ ನಡೆದ ಐಪಿಎಲ್ ಪಂದ್ಯಾವಳಿಯಲ್ಲಿ ಬೆಂಗಳೂರು ತಂಡವು ಪಂಜಾಬ್ ತಂಡವನ್ನು ಮಣಿಸಿ ಯಶಸ್ಸಿನ ಜಯಮಾಲೆಯನ್ನು ತನ್ನ ಕೊರಳಿಗೆ ಹಾಕಿ ಬೀಗಿತು. ಈ ಯಶಸ್ಸನ್ನು ಸಂಭ್ರಮಿಸಲೆಂದು ನಮ್ಮ ರಾಜ್ಯದ ಆಡಳಿತ ವ್ಯವಸ್ಥೆ ತೀರ್ಮಾನ ಮಾಡಿ ವಿಧಾನಸೌಧದ ಮುಂದೆ ಸನ್ಮಾನ ಮಾಡಲು ನಿರ್ಧರಿಸಿತು. ತಂಡದ ಆಟಗಾರರಿಗೆ ಸನ್ಮಾನಿಸಲು ಆಹ್ವಾನಿಸಿದರು. ಜೊತೆಗೆ ರಾಜ್ಯದ ಜನತೆಗೆ ಸೂಕ್ತ ಸಿದ್ಧತೆಗಳಿಲ್ಲದೆ ಕಾರ್ಯಕ್ರಮಕ್ಕೆ ಸಾಮಾಜಿಕ ಜಾಲತಾಣದ ಮೂಲಕ ಆಮಂತ್ರಿಸಿದರು. ರಾತ್ರಿಯಿಡೀ ಆಟ ನೋಡಿ ಅದೇ ಗುಂಗಿನಲ್ಲಿದ್ದ ಜನತೆಗೆ ಸರಿಯಾಗಿ ನಿದ್ದೆ ಮಾಡದೇ ಅದೇ ಉತ್ಸಾಹದಲ್ಲಿ ತಮ್ಮ ತಂಡದ ಆಟಗಾರರನ್ನು ನೇರವಾಗಿ ನೋಡಿ ಕಣ್ತುಂಬಿಕೊಳ್ಳಬೇಕೆಂದು ಆತುರವಾಗಿ ಬಂದಾಗ ಹನ್ನೊಂದು ಆಟಗಾರರ ಪ್ರಾಣ ಪಕ್ಷಿ ಕಾಲ್ತುಳಿತದಲ್ಲಿ ಹಾರಿಹೋಯಿತು. ಮಡಿದ ಜನರ ಕೌಟುಂಬಿಕ ಆಕ್ರಂದನ ಮುಗಿಲು ಮುಟ್ಟಿತು.

ಇದಕ್ಕೆ ಯಾರು ಹೊಣೆ? ಯಾರ ತಲೆದಂಡ? ರಾಜ್ಯದ ಆಡಳಿತ ಮಂಡಳಿ ತಲೆದಂಡ ಮಾಡಿರುವುದು ನಿಜಕ್ಕೂ ನ್ಯಾಯವೇ? ಇದನ್ನು ರಾಜ್ಯದ ಜನತೆಯು ತೀರ್ಮಾನಿಸುತ್ತದೆ. ಆದರೆ ಬುದ್ಧಿ ಜೀವಿಗಳು ಕೇಳುವ ಪ್ರಶ್ನೆ ಒಂದೇ. ಸರ್ಕಾರದ ನಿಲುವು ಸರಿಯೇ? ಆತುರದ ಕಾರ್ಯಕ್ರಮದ ಅವಶ್ಯಕತೆ ಇತ್ತೇ? ಎನ್ನುವುದಾಗಿದೆ. ಏನೇ ಆಗಲಿ ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲಾ....! ಅಪೇಕ್ಷೆಗೆ ಮೀರಿ ಜನಸಂದಣಿ ಸೇರಿದ್ದಾರೆ ಎಂಬುದು ಸರ್ಕಾರದ ನಿಲುವಾಗಿದೆ. ಕ್ಷಣಮಾತ್ರದ ದೃಶ್ಯ ಕಣ್ತುಂಬಿಕೊಳ್ಳಲೆಂದು ಹೋಗಿ ತಮ್ಮ ಪ್ರಾಣವನ್ನೆ ಕಳೆದುಕೊಂಡ ಈ ಹನ್ನೊಂದು ಜನರ ಸ್ಥಿತಿ ನಿಜಕ್ಕೂ ಘೋರ ಅಲ್ಲವೇ? ಇವರನ್ನೇ ನಂಬಿಕೊಂಡಿದ್ದ ಅವರ ಕುಟುಂಬದವರಿಗೆ ಸಾಂತ್ವನ ಹೇಳುವವರಾರು...?!

ರಾಜ್ಯವು ಎಷ್ಟೆ ಪರಿಹಾರ ಕೊಟ್ಟರೂ ಹೋದ ಪ್ರಾಣವನ್ನು ಮತ್ತೆ ಕೊಡಲು ಸಾಧ್ಯವೇ? ಜನರೂ ಉಚಿತ ಪ್ರವೇಶವೆಂದಾಕ್ಷಣ ದೌಡಾಯಿಸದೆ ಯೋಚಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆ ಈ ಘನಘೋರ ಸಂಗತಿ ಆಗುತ್ತಿರಲಿಲ್ಲ ವೇನೋ? ಮುಂದಾದರು ಜನತೆ ಯೋಚಿಸಿ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸೋಣ ....! **–ಅನಿಲ್ ರಾಜ, ಸಹಶಿಕ್ಷಕರು, ಮೈಸೂರು.**

■ ಕಾವೇರಿ ಆರತಿ ಅಗತ್ಯವೇ?

ಮಾನ್ಯರೆ,

ದಸರಾ ವೇಳೆಗೆ ಮಂಡ್ಯ ಜಿಲ್ಲೆ ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ಕಾರ್ಯಕ್ರಮ ನಡೆಯಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಿಸಿದ್ದಾರೆ. (ಪತ್ರಿಕಾ ವರದಿ.4.5.25)10 ಸಾವಿರ ಮಂದಿಗೆ ಕಾವೇರಿ ಆರತಿ ವೀಕ್ಷಣೆಗೆ ಸೌಲಭ್ಯ ಕಲ್ಪಿಸಲಾಗುವುದು. ಸರ್ಕಾರ ಇದಕ್ಕಾಗಿ 100 ಕೋಟಿ ರೂ.ಗಳನ್ನು ಮೀಸಲಿಟ್ಟಿದೆ ಎಂದೂ ತಿಳಿಸಿದ್ದಾರೆ. ಅವರು ಕುಂಭಮೇಳಕ್ಕೆ ಹೋಗಿದ್ದಾಗ ವಾರಣಾಸಿಯಲ್ಲಿ ನಡೆಯುವ ಗಂಗಾ ಆರತಿಯನ್ನು ನೋಡಿ ಈ ಯೋಜನೆಯನ್ನು ಘೋಷಿಸಿದ್ದಾರೆ. ಆದರೆ ವಾರಣಾಸಿಯ ವಿಶ್ವನಾಥನ ಸನ್ನಿಧಿಯಲ್ಲಿ ನಡೆಯುವ ಭಕ್ತಿ ಪ್ರಧಾನ ಗಂಗಾ ಆರತಿಗೂ, ಕೆಆರ್‌ಎಸ್‌ನಲ್ಲಿ ಆಯೋಜನೆಗೊಳ್ಳುವ ಪ್ರವಾಸೋದ್ಯಮ ಉದ್ದೇಶದ ಕಾವೇರಿ ಆರತಿಗೂ ಬಹಳ ಅಂತರವಿದೆ.

ಮಾರ್ಚ್ 22ರಂದು ಬೆಂಗಳೂರಿನ ಸ್ಯಾಂಕಿ ಕೆರೆ ಬಳಿ ಕಾವೇರಿ ಆರತಿ (ಇದು ಕೂಡ ಪ್ರಚಾರ ಉದ್ದೇಶದ್ದೇ) ನಡೆಸಿದಾಗಲೇ ಮುಖ್ಯಮಂತ್ರಿಗಳು ಕೆಆರ್‌ಎಸ್‌ನಲ್ಲಿ 92 ಕೋಟಿ ರೂ. ವೆಚ್ಚದಲ್ಲಿ ಕಾವೇರಿ ಆರತಿ ನಡೆಸುವುದಾಗಿ ಘೋಷಣೆ ಮಾಡಿದ್ದರು. (ಆಗಲೂ ಬೆಂಗಳೂರು ಜನರಿಂದ ವಿರೋಧ ವ್ಯಕ್ತವಾಗಿತ್ತು ಎನ್ನುವುದು ಗಮನಾರ್ಹ.)

ದಿನಾಂಕ 4.5.25ರ ಪತ್ರಿಕೆಯಲ್ಲಿ ಈ ಕುರಿತು ಲೇಖನ ಬರೆದಿರುವ ಪರಿಸರವಾದಿ ಅ.ನ.ಯಲ್ಲಪ್ಪರೆಡ್ಡಿಯವರು, ಗಂಗೆಯಂತೆ ಪವಿತ್ರ ನದಿಗಳಲ್ಲಿ ಒಂದಾದ ಕಾವೇರಿ ಇಂದು ಕೈಗಾರಿಕೆಗಳ ತ್ಯಾಜ್ಯ ನೀರು, ಹಳ್ಳಿ ಪಟ್ಟಣಗಳ ಕೊಳಚೆ ನೀರು ಸೇರಿ ಮಲಿನಗೊಂಡಿದೆ. ರಾಮ್ ಸರ್ ಒಪ್ಪಂದದ ಪ್ರಕಾರ ಅರಣ್ಯ ಇಲಾಖೆಯು ಜೌಗು ಪ್ರದೇಶದ ಅಭಿವೃದ್ಧಿಯಲ್ಲಿ ಯಶಸ್ಸು ಸಾಧಿಸಿದೆ. ರಾಜ್ಯದಲ್ಲಿ 14930 (jouwgu) ಜೌಗು ತಾಣಗಳಿದ್ದು, ಹೈಕೋರ್ಟ್ ಲೋಕ್ ಅದಾಲತ್ ನಿರ್ದೇಶನದಂತೆ, ನದಿಗಳ ಮಲಿನ ಹರಿವನ್ನು ತಡೆಯುವ ದಿಸೆಯಲ್ಲಿ ನದಿ ಪಾತ್ರದ ಒಂದು ಸಾವಿರ ಅಡಿ ವಿಸ್ತಾರದ ಪ್ರದೇಶವನ್ನು ಬಫರ್ ಜೋನ್ ಎಂದು ಪರಿಗಣಿಸಲು ಹಾಗೂ ಅಲ್ಲಲ್ಲಿ ತ್ಯಾಜ್ಯ ಸಂಸ್ಕರಣಾ ಕೇಂದ್ರಗಳು ಇರುವಂತೆ ನೋಡಿಕೊಳ್ಳಲು ಮಾರ್ಗದರ್ಶನ ಕೊಟ್ಟಿತ್ತು.

ಇದೇ 92 ಕೋಟಿ ಅನುದಾನದಿಂದ 10 ಸಾವಿರ ಹೆಕ್ಟೇರ್ ಜೌಗು ಪ್ರದೇಶ ಅಭಿವೃದ್ಧಿ ಸಾಧ್ಯವಿದೆ. ಗಂಗಾರತಿಯಿಂದ ಎಂದಾದರೂ ಗಂಗೆ ಪವಿತ್ರಳಾಗಿದ್ದಾಳೆಯೇ? ಇಲ್ಲ!! ಇನ್ನಷ್ಟು ಮಲಿನಳಾಗಿದ್ದಾಳೆ. ಅಂತೆಯೇ ಕಾವೇರಿ ಆರತಿ ಮಾಡಲು ಇಂತಹದೊಂದು ಬೃಹತ್ ಮೊತ್ತವನ್ನು ಖರ್ಚು ಮಾಡುವುದು ವ್ಯರ್ಥ. ಅರ್ಥಹೀನ ವಿಚಾರ. ಜನರ ತೆರಿಗೆಯ ಹಣವನ್ನು ಹೀಗೆ ಬೇಕಾಬಿಟ್ಟಿ ಖರ್ಚು ಮಾಡುವುದೆಂದರೆ ಅದು ಹೊಸ ರೀತಿಯ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುವ ಸಂಗತಿ ಎಂದು ಹೇಳಿದ್ದಾರೆ. ಇದು ನಿಜಕ್ಕೂ ಪ್ರಜೆಗಳು ಚಿಂತಿಸಬೇಕಾದ, ವಿಚಾರ ಮಾಡಬೇಕಾದ, ಪ್ರಶ್ನಿಸಬೇಕಾದ ವಿಚಾರ. ಎಲ್ಲವೂ ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆಯಂತೆ ಆಗಬಾರದಲ್ಲವೇ? ಇದೀಗ 6.6.25ರಂದು ಮಂಡ್ಯದಲ್ಲಿ ನಡೆದ ಸಭೆಯಲ್ಲಿ ಈ ಸಂಬಂಧ ವಿವರಣೆ ನೀಡಲು ಬೆಂಗಳೂರಿನಿಂದ ಬಂದಿದ್ದ ಉಪಮುಖ್ಯಮಂತ್ರಿಯವರ ತಾಂತ್ರಿಕ ಸಲಹೆಗಾರರಿಗೆ, ಯೋಜನೆಯೇ ಬೇಡವೆಂದ ಮೇಲೆ ನಿಮ್ಮ ವಿವರಣೆ ಅಗತ್ಯವಿಲ್ಲ ಎಂದು ರೈತ ಮುಖಂಡರಿಗೆ ಅವಕಾಶ ನೀಡಿಲ್ಲವೆಂದು ವರದಿಯಾಗಿದೆ.

ಯೋಜನೆ ಮಾಡಿಯೇ ತೀರುತ್ತೇವೆ ಎಂದು ಸವಾಲು ಹಾಕಿದ್ದ ಶಾಸಕ ಪಿ.ರವಿಕುಮಾರ್‌ರವರಿಗೂ, ಇಂತಹ ಸವಾಲುಗಳಿಗೆ ರೈತ ಸಂಘ ಬಗ್ಗುವುದಿಲ್ಲ. ಅಣೆಕಟ್ಟೆ ಉಳಿವು ಹಾಗೂ ಪರಿಸರ ಸಂರಕ್ಷಣೆಗಾಗಿ ನಮ್ಮ ಹೋರಾಟ ಎಂದು ತಿಳಿಸಿದ್ದಾರೆ. ಆದ್ದರಿಂದ ಸರ್ಕಾರ, 92 ಕೋಟಿ ರೂ ಯೋಜನೆಯ ಕಾವೇರಿ ಆರತಿ ಹಾಗೂ ಸಾವಿರಾರು ಕೋಟಿ ರೂ.ಗಳ ಅಮ್ಯೂಸ್‌ಮೆಂಟ್ ಪಾರ್ಕ್ ಯೋಜನೆಗಳನ್ನು ಕೈಬಿಟ್ಟು ಅದೇ ಮೊತ್ತದಲ್ಲಿ, ಉಪ ನಾಲೆಗಳ ದುರಸ್ತಿ, ಕೆರೆ–ಕಟ್ಟೆಗಳ ಹೂಳು ತೆಗೆಸಿ ಎಂಬ ರೈತರ ಬೇಡಿಕೆ ಸಮಂಜಸವಾಗಿದೆ. ಸರ್ಕಾರ ಯೋಜನೆ ಕೈ ಬಿಡುವುದೊಳಿತು...

– ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಅಪರೂಪದ ವಿದ್ವಾಂಸ ಡಾ.ಎಸ್.ಸಿ.ನಂದೀಮಠ

ಕನ್ನಡ ನಾಡು ನುಡಿಗಳಿಗಾಗಿ ಅತ್ಯಂತ ನಿಷ್ಠೆಯಿಂದ, ಪ್ರೀತಿಯಿಂದ ದುಡಿದು ಧನ್ಯರಾದ ಜೀವಿಗಳು ಅನೇಕ. ಇತಿಹಾಸ, ಪ್ರಾಚ್ಯ ಸಂಶೋಧನೆ, ಶಿಕ್ಷಣ, ಸಾಹಿತ್ಯ, ಛಂದಸ್ಸು, ಶಾಸನ, ಧರ್ಮ, ಕಾವ್ಯ, ವ್ಯಾಕರಣ ಮುಂತಾದ ಯಾವುದೇ ವಿಷಯದಲ್ಲಾಗಲೀ ತಮ್ಮನ್ನು ಸಮಗ್ರವಾಗಿ ತೊಡಗಿಸಿಕೊಂಡು ತಮ್ಮ ನಾಡಿಗೆ ಅಮೂಲ್ಯ ಕಾಣಿಕೆಯನ್ನು ಅರ್ಪಿಸಿದ್ದಾರೆ ಹಲವಾರು ಮಹನೀಯರು. ಅಂತಹವರಲ್ಲಿ ಡಾ.ಆ.ನೇ ಉಪಾಧ್ಯೆಯವರು, ಪ್ರೊ.ಕೆ.ಜಿ. ಕುಂದಣಗಾರರು, ಡಾ.ಎಸ್.ಸಿ.ನಂದೀಮಠ, ಡಾ.ರಾ.ಯ. ಧಾರವಾಡಕರ ಅವರಂತಹ ಅನೇಕ ಮಹನೀಯರು ಇದ್ದಾರೆ.

ಉತ್ತಮ ಕಾಲೇಜು ಇಲ್ಲದ ಸಣ್ಣ ಊರುಗಳಲ್ಲಿ ಒಂದು ವಿದ್ಯಾ ಸಂಸ್ಥೆಯನ್ನು ಕಟ್ಟಿ ಬೆಳೆಸಿ, ಅದನ್ನು ಹೆಮ್ಮರವನ್ನಾಗಿಸುವುದು ಸಾಮಾನ್ಯರ ಕೈಯಿಂದಾಗುವ ಕೆಲಸವಲ್ಲ. ಅದನ್ನು ತೆರೆಯಲು ಪರವಾನಗಿ ಪಡೆಯುವುದರ ಜೊತೆಗೆ ಅದಕ್ಕೆ ಬೇಕಾದ ಕಟ್ಟಡ, ಶಿಕ್ಷಕರು, ವಿದ್ಯಾರ್ಥಿನಿಲಯ, ಗ್ರಂಥಾಲಯ ಹೀಗೆ ಪ್ರತಿಯೊಂದನ್ನು ಕುರಿತೂ ತಯಾರಿ ನಡೆಸಬೇಕಾದ ಜವಾಬ್ದಾರಿಯನ್ನು ನಿಭಾಯಿಸುವುದು ಸಾಮಾನ್ಯವೇ? ಜೊತೆಗೆ ತಮ್ಮ ಅಧ್ಯಯನ ಮತ್ತು ಅಧ್ಯಾಪನಗಳನ್ನೂ ನಿರ್ವಹಿಸುತ್ತಾ, ಬಂದ ಕುತ್ತುಗಳನ್ನೆಲ್ಲಾ ನಿವಾರಿಸಿಕೊಳ್ಳುತ್ತಾ ಪ್ರಾಮಾಣಿಕರಾಗಿ, ಸತ್ಯ ಮಾರ್ಗದಲ್ಲಿ ಸಾಗುವುದೆಂದರೆ ಕತ್ತಿಯ ಅಲಗಿನ ಮೇಲಿನ ನಡಿಗೆಯೇ ಎಂದು ಬೇರೆ ಹೇಳಬೇಕಿಲ್ಲ. ಸದಾಚಾರವನ್ನೇ ತಮ್ಮ ಉಸಿರಾಗಿಸಿಕೊಂಡವರಿಗೆ ಮಾತ್ರ ಅದು ಸಾಧ್ಯವಾದೀತು.

ಇಂದು ಬೆಳಗಾವಿಯ ಕೆ.ಎಲ್.ಇ. ಸೊಸೈಟಿಯ ಲಿಂಗರಾಜ ಕಾಲೇಜು ಮತ್ತು ಬಾಗಲಕೋಟೆಯ ಬಸವೇಶ್ವರ ಕಾಲೇಜುಗಳ ಹೆಸರು ಕೇಳದವರಾರು? ಆದರೆ, ಅದರ ಸ್ಥಾಪನೆಗೆ ಕಾರಣೀಭೂತರಾಗಿ, ತಮ್ಮ ಸರ್ವಸ್ವವನ್ನೂ ಧಾರೆಯೆರೆದಿದ್ದ ಡಾ.ಎಸ್.ಸಿ. ನಂದೀಮಠರನ್ನು ನೆನೆಸದಿದ್ದರೆ, ಅದು ಅಕ್ಷಮ್ಯ ಅಪರಾಧವಾದೀತು. (ಇಂತಹ ನಿಸ್ಪೃಹ ಸೇವೆಗೆ ಅವರ ಚಾರಿತ್ರ್ಯವಧೆಯ ಯತ್ನ ಮಾಡಿದುದು ಶೋಚನೀಯವೇ ಸರಿ). ಆ ಎರಡು ಕಾಲೇಜುಗಳಿಗೂ ತಮ್ಮ ಅಮೂಲ್ಯ ಸಮಯ, ಸೇವೆ ಮತ್ತು ನಿಷ್ಠೆಯನ್ನು ತೋರಿ, ನಂತರ ಅವರು ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಸಂಸ್ಕೃತ ವಿಭಾಗದಲ್ಲಿ ಯುಜಿಸಿ ಪ್ರೊಫೆಸರ್ ಆಗಿ ಹಲವು ವರ್ಷ ಸೇವೆ ಸಲ್ಲಿಸಿದರು. ಈ ಎಲ್ಲದರ ನಡುವೆಯೂ ಅವರು ತಮ್ಮ ಮನಸ್ಸಿನ ಶಾಂತತೆ, ಸಮತೋಲನ ಮತ್ತು ಅಧ್ಯಯನದ ಆಸಕ್ತಿಯನ್ನು ಕಳೆದುಕೊಳ್ಳದೆ ಕನ್ನಡ ಸಾರಸ್ವತ ಲೋಕಕ್ಕೆ ಅತ್ಯಮೂಲ್ಯ ಕಾಣಿಕೆಯನ್ನು ನೀಡಿದ್ದಾರೆ.

ನಂದೀಮಠರ ವ್ಯಕ್ತಿತ್ವವನ್ನು ಚಿತ್ರಿಸುವಾಗ ಅಗತ್ಯವಾಗಿ ಅವರೊಳಗೆ ಎಲ್ಲ ಧರ್ಮಗಳ ಬಗ್ಗೆ ಇದ್ದ ಅಪಾರ ತಿಳುವಳಿಕೆ ಅಷ್ಟೇ ಅಲ್ಲದೆ, ಎಲ್ಲ ಧರ್ಮಗಳನ್ನೂ ಗೌರವದಿಂದ ಕಾಣುತ್ತಿದ್ದ ಅಪೂರ್ವ ಗುಣದ ಬಗ್ಗೆ ಹೇಳಲೇಬೇಕಾಗುತ್ತದೆ. ವೀರಶೈವ, ವೈದಿಕ, ಜೈನ, ಬೌದ್ಧ, ಕ್ರೈಸ್ತ ಮುಂತಾದ ಧರ್ಮಗಳನ್ನು ಆಳವಾಗಿ ಅಭ್ಯಸಿಸಿದ್ದ ಅವರಲ್ಲಿ ಇದು ಸಹಜವಾಗಿಯೇ ಬೆಳೆದಿತ್ತು ಎಂದೆನಿಸುತ್ತದೆ.

> “ ಶಿಕ್ಷಣ, ಪಾಂಡಿತ್ಯ, ಸಮಾಜ ಸೇವೆ ಎಲ್ಲದರಲ್ಲೂ ತಮ್ಮನ್ನು ಕಾಯಾ ವಾಚಾ ಮನಸಾ ತೊಡಗಿಸಿಕೊಂಡ ಡಾ.ಎಸ್.ಸಿ.ನಂದೀಮಠ ಅವರ ಬಗೆಯನ್ನು ಬಣ್ಣಿಸಲು ಸಾಧ್ಯವಿಲ್ಲ.



ಡಾ.ಎಸ್.ಸಿ.ನಂದೀಮಠ

ಸರ್ವಧರ್ಮ ಸಮನ್ವಯ ಎಂಬ ಮಾತನ್ನು ಎಲ್ಲರೂ ಬಳಸುತ್ತಾರಷ್ಟೇ. ಆದರೆ ಅವರು ಅದನ್ನು ಬದುಕಿ ತೋರಿಸಿದ ಮಹಾನುಭಾವ. ‘ಎನಗಿಂತ ಕಿರಿಯರಿಲ್ಲ’ ಎಂಬುದನ್ನು ಅಕ್ಷರಶಃ ನಂಬಿ, ಪಾಲಿಸಿದ ಅಪರೂಪದ ಶಿವಭಕ್ತ ಆತ. ಕನ್ನಡ, ಇಂಗ್ಲಿಷ್, ಪಾಲಿ, ಸಂಸ್ಕೃತ, ಪ್ರಾಕೃತ ಭಾಷೆಗಳು ಅವರಿಗೆ ಕರತಲಾಮಲಕವಾಗಿದ್ದುವು. ಆರೋಗ್ಯ ಸರಿ ಇಲ್ಲದಿರುವಾಗಲೂ, ತಮಿಳಿನಲ್ಲಿರುವ ಶೈವ ಗ್ರಂಥಗಳನ್ನು ಕನ್ನಡಕ್ಕೆ ತರಲೆಂದು ತಮಿಳು ಮತ್ತು ಪಾಲ್ಕುರಿಕೆ ಸೋಮನಾಥನ (ತೆಲುಗು) ಬಸವ ಪುರಾಣವನ್ನು ಅಧ್ಯಯನ ಮಾಡಲು ತೆಲುಗು ಭಾಷೆಯನ್ನೂ ಕಲಿಯುತ್ತಿದ್ದರು. ಅವರಲ್ಲಿದ್ದುದು ಅಪಾರ ಜ್ಞಾನ ತೃಷೆ. ಕಾವ್ಯ, ಧರ್ಮ, ಅಲಂಕಾರ, ಶಾಸನ, ಭಾಷಾಶಾಸ್ತ್ರ ಅವರ ಆಸಕ್ತಿಯ ಕ್ಷೇತ್ರಗಳು ಒಂದೇ ಎರಡೇ. ‘ಎ ಹ್ಯಾಂಡ್ ಬುಕ್ ಆಫ್ ವೀರಶೈವಿಸಂ’, ‘ಕರ್ನಾಟಕದ ಧರ್ಮಗಳು’, ಹರಿಹರ ಕವಿಯ ‘ಗಿರಿಜಾ ಕಲ್ಯಾಣ’, ಜಾಯಗೊಂಡ ಬರೆದ ‘ಕನ್ನಡ ಕುವಲಯಾನಂದ’, ‘ಶೂನ್ಯ ಸಂಪಾದನೆ’, ‘ಧಮ್ಮಪದ’ ಮುಂತಾದ ಅಮೂಲ್ಯ ಗ್ರಂಥಗಳಲ್ಲದೆ, ಅನೇಕ ಉತ್ಕೃಷ್ಟ ಲೇಖನಗಳನ್ನೂ ಅವರು ಬರೆದಿದ್ದಾರೆ. ಸಂಸ್ಕೃತದಲ್ಲಿ ಅವರು ರಚಿಸಿದ ಬಸವ ಪುರಾಣದ ಮೌಲ್ಯವನ್ನು ಕಟ್ಟಲು ಸಾಧ್ಯವೇ? ಶಿಕ್ಷಣ, ಪಾಂಡಿತ್ಯ, ಸಮಾಜ ಸೇವೆ ಎಲ್ಲದರಲ್ಲೂ ತಮ್ಮನ್ನು ಕಾಯಾ ವಾಚಾ ಮನಸಾ ತೊಡಗಿಸಿಕೊಂಡ ಅವರ ಬಗೆಯನ್ನು ಬಣ್ಣಿಸಲು ಸಾಧ್ಯವಿಲ್ಲ.

ಚನ್ನಬಸವಯ್ಯ ಮತ್ತು ಪರಗಂಗವ್ವ ಅವರ ಮಗನಾಗಿ 1900ರಲ್ಲಿ ತಾಯಿಯ ತವರೂರಾದ ಕಡಕೋಳ (ರಾಮದುರ್ಗ ಸಂಸ್ಥಾನ) ದಲ್ಲಿ ಜನಿಸಿದ ಅವರಲ್ಲಿ ಉತ್ತಮ ಸಂಸ್ಕಾರವನ್ನು ನೀಡಿದವರು ಧರ್ಮ ನಿಷ್ಠರಾದ ತಂದೆ–ತಾಯಿಗಳು. ತಂದೆಯವರು ಗೋಕಾಕ ತಾಲೂಕಿನ ಚಿಕ್ಕನಂದಿ ಗ್ರಾಮದವರು. ತಮ್ಮ ಬೇಸಾಯವನ್ನು ತಾವೇ ಮಾಡಿಕೊಳ್ಳುತ್ತಿದ್ದ ಕಾಯಕ ನಿಷ್ಠೆ ಅವರದು. ಗೋಕಾಕದಲ್ಲಿ ಪ್ರಾರಂಭಿಕ ಶಿಕ್ಷಣ ಪಡೆದ ಶಿವಲಿಂಗಯ್ಯನವರು ಮುಂದೆ ಸಂಸ್ಕೃತವನ್ನು ಪ್ರಧಾನವಾಗಿ ಮಾಡಿಕೊಂಡು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಪರೀಕ್ಷೆಯನ್ನು ಉತ್ತಮ ದರ್ಜೆಯಲ್ಲಿ ಮುಗಿಸಿದರು. ಅವರಲ್ಲಿ ಸಂಸ್ಕೃತದ ಕಲಿಕೆಯ ಬಯಕೆಯ ಬೀಜವನ್ನು ಹುಟ್ಟುಹಾಕಿದವರು ಅವರ ತಂದೆಯವರು. ವ್ಯಾಪಾರಕ್ಕೆಂದು ಮುಂಬಯಿಗೆ ಹೋಗಿ ಹಿಂದಿರುಗುವಾಗ ಪುಣೆಯ ಸುಸಂಸ್ಕೃತ ವಾತಾವರಣ, ಸಂಸ್ಕೃತ ವಿದ್ಯಾ ಪ್ರೇಮಗಳಿಂದ ಆಕರ್ಷಿತರಾಗಿ, ಮಗನಿಗೆ ಸಂಸ್ಕೃತ ಓದಲು ಉತ್ತೇಜಿಸಿದರು.

ಆ ವೇಳೆಗೆ ನಂದೀಮಠರಿಗೆ ಇತಿಹಾಸ, ಸಂಸ್ಕೃತ, ಸಾಹಿತ್ಯ, ಧರ್ಮ ಶಾಸ್ತ್ರಗಳಲ್ಲಿ ಅಭಿರುಚಿ ಹುಟ್ಟಿತ್ತು. ಇವುಗಳ ಆಳವಾದ ಅಧ್ಯಯನ ಮಾಡಬೇಕೆಂದು ನಿಶ್ಚಯಿಸಿಯಾಗಿತ್ತು. ಮುಂಬಯಿ ವಿಶ್ವವಿದ್ಯಾಲಯದಿಂದ ಎಂ.ಎ ಪದವಿ ಪಡೆದು ಕೊಲ್ಲಾಪುರದ ರಾಜಾರಾಮ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇರಿಕೊಂಡು ಎರಡು ವರುಷ ಕೆಲಸ ಮಾಡಿದರು. ಆ ವೇಳೆಗಾಗಲೇ ಅವರಲ್ಲಿದ್ದ ಸಂಶೋಧನಾ ದೃಷ್ಟಿ, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಇದ್ದ ಪಾಂಡಿತ್ಯವು ಸುತ್ತಮುತ್ತಲಿನ ಶಾಸನಗಳನ್ನು ಪತ್ತೆಹಚ್ಚಿ ಓದಲು ಪ್ರೇರೇಪಿಸಿದ್ದಿತು. ಆಗ ಪ್ರತಿಭಾವಂತರಾದ ವೀರಶೈವ ವಿದ್ಯಾರ್ಥಿಗಳನ್ನು ಇಂಗ್ಲೆಂಡಿಗೆ ಕಳುಹಿಸುವ ಯೋಜನೆಯೊಂದು ಉದಾರ ಹಸ್ತದವರಿಂದ ತಯಾರಾಗಿತ್ತು. ಇದರ ಪ್ರಯೋಜನ ಪಡೆದು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನಂದೀಮಠರು ತಮ್ಮ ಅಧ್ಯಾಪಕ ವೃತ್ತಿ ತೊರೆದು ಇಂಗ್ಲೆಂಡಿಗೆ (1928) ಹೋದರು. ಮಹಾಮೇಧಾವಿಗಳಾಗಿದ್ದ ಡಾ.ಬಾರ್ನೆಟ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡುವ ತಮ್ಮ ಕನಸನ್ನು ನನಸಾಗಿಸಿಕೊಂಡರು.

ಭಾರತದಲ್ಲಿ ಅಲಭ್ಯವಿದ್ದ ಅನೇಕ ಸಂಸ್ಕೃತ–ಕನ್ನಡ ಗ್ರಂಥಗಳ ಆಳವಾದ ಅಧ್ಯಯನ ಮಾಡಿದರು. ‘ಸಂಸ್ಕೃತ ಮತ್ತು ಪ್ರಾಚೀನ ಭಾರತೀಯ ಸಂಸ್ಕೃತಿ’ ಎಂಬ ವಿಷಯದಲ್ಲಿ ಡಾಕ್ಟರೇಟ್ ಪದವಿಯನ್ನು ಎರಡೇ ವರುಷಗಳಲ್ಲಿ ಪಡೆದು ಭಾರತಕ್ಕೆ ಹಿಂದಿರುಗಿದರು. ಈ ವಿದ್ಯಾಪಾರಂಗತರಿಗೆ ಹಲವು ಸಂಘ ಸಂಸ್ಥೆಗಳಿಂದ ಉಪನ್ಯಾಸ ನೀಡಲು ಆಮಂತ್ರಣ ಬಂದಿತು. ಅವುಗಳಲ್ಲಿ ಮುಖ್ಯವಾದುದು ಪುಣೆಯಲ್ಲಿ ‘ವೀರಶೈವರ ಇತಿಹಾಸ ಮತ್ತು ಧರ್ಮ’ ಎಂಬ ವಿಶೇಷ ಉಪನ್ಯಾಸ. ಇದರಲ್ಲಿ ಅವರ ಆಳವಾದ ವ್ಯಾಸಂಗ, ಶಾಸ್ತ್ರೀಯ ವಸ್ತುನಿಷ್ಠತೆ ಮತ್ತು ಪ್ರಾಮಾಣಿಕ ಅನ್ವೇಷಕನ ದೃಷ್ಟಿಯು ವ್ಯಕ್ತವಾಗಿದೆ. ‘ಶಿವಾನುಭವ’ ದ್ವೈಮಾಸಿಕದಲ್ಲಿ ಅವರ ಅನೇಕ ಪಾಂಡಿತ್ಯಪೂರ್ಣ ಲೇಖನಗಳು ಲಭ್ಯ. ಮುಂದೆ ಅವರು ಮುಂಬಯಿಯಲ್ಲಿ ಆರ್ಕೈವ್ಸ್ ವಿಭಾಗದ ಡೆಪ್ಯುಟಿ ಡೈರೆಕ್ಟರ್ ಹುದ್ದೆಗಾಗಿ ಸಂದರ್ಶನ ಕೊಡಲು ಹೋದಾಗ, ಅವರನ್ನು ಬೆಳಗಾವಿಯ ಜಿ.ಎ ಹೈಸ್ಕೂಲಿನವರು ಆರಂಭಿಸಬೇಕೆಂದಿದ್ದ ಕಾಲೇಜಿನ ಹೊಣೆಗಾರಿಕೆಯನ್ನು ಹೊತ್ತುಕೊಳ್ಳುವಂತೆ ಮಾಡಿದುದು ವಿಧಿಯಾಟವಷ್ಟೇ. 1932ರಲ್ಲಿ ಸಂಸ್ಕಾರವಂತ ಕನ್ಯೆ ಕಲ್ಯಾಣಮ್ಮ ಅವರೊಡನೆ ವಿವಾಹವೂ ಆಗಿ ಅವರ ಅನುರೂಪ ದಾಂಪತ್ಯದಲ್ಲಿ ಹತ್ತು ಮಕ್ಕಳು ಹುಟ್ಟಿ ಎಲ್ಲರೂ ವಿದ್ಯಾವಂತರಾಗಿದ್ದಾರೆ. ಕೊನೆಯವರೆಗೂ ಅಧ್ಯಯನದ ಸಾಂಗತ್ಯವನ್ನು ತೊರೆಯದ ಅವರು ಅನಾರೋಗ್ಯಕ್ಕೆ ತುತ್ತಾದುದು ವಿಷಾದನೀಯ. 1975 ನವಂಬರ್ 21ರಂದು ಬಾಗಲಕೋಟೆಯಲ್ಲಿಯೇ ಈ ಮಹಾನ್ ಜೀವವು ಶಿವನಲ್ಲಿ ಐಕ್ಯವಾಯಿತು.

ಕಾಡು ಹೊಕ್ಕಿರುವ 52 ಆದಿವಾಸಿ ಕುಟುಂಬಗಳು

- 1985 ರಿಂದ 2025ರವರೆಗೂ ವಾಸವಿರುವ ದಾಖಲೆಕೊಡಿ: ಅರಣ್ಯ ಇಲಾಖೆ
- ಜೀವ ಹೋದರೂ ಸರಿ ನಾವ್ಯಾರೂ ಅರಣ್ಯ ಬಿಟ್ಟು ಬರಲ್ಲ: ಆದಿವಾಸಿಗಳ ಪಟ್ಟು

■ ಎಂ.ಟಿ.ಯೋಗೇಶ್‌ಕುಮಾರ್

ನಾಗರಹೊಳೆ(ಅತ್ತೂರು ಕೊಲ್ಲಿ ಹಾಡಿ), ಜೂ.7– ಆನೆ, ಹುಲಿ, ಚಿರತೆ, ಕರಡಿ ಸೇರಿದಂತೆ ವನ್ಯಜೀವಿಗಳಿರುವ ದಟ್ಟ ಅರಣ್ಯದೊಳಗೆ 52 ಆದಿವಾಸಿ ಕುಟುಂಬಗಳು ಅಪಾಯವನ್ನು ಲೆಕ್ಕಿಸದೆ ಕಳೆದ ಒಂದು ತಿಂಗಳಿಂದ ಬೀಡುಬಿಟ್ಟಿವೆ.

ಕೊಡಗು ಜಿಲ್ಲೆಯ ವಿವಿಧ ಕಾಫಿ ತೋಟದ ಲೈನ್‌ಮನೆಗಳಲ್ಲಿ ವಾಸಿಸುತ್ತಿದ್ದ 52 ಆದಿವಾಸಿ ಕುಟುಂಬಗಳ 250ಕ್ಕೂ ಹೆಚ್ಚು ಮಂದಿ ಕಳೆದ ಒಂದು ತಿಂಗಳ ಹಿಂದೆ ಕೊಡಗಿನ ಕುಟ್ಟ ವ್ಯಾಪ್ತಿಗೆ ಒಳಪಡುವ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಬಾಳೆಕೋವು ಶಾಖೆಯ ಅತ್ತೂರು ಕೊಲ್ಲಿ ಅರಣ್ಯ ಪ್ರದೇಶದಲ್ಲಿ ಟೆಂಟ್‌ಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಾ, ತಮಗೆ ಶಾಶ್ವತ ಪರಿಹಾರ ಒದಗಿಸುವಂತೆ ಒತ್ತಾಯಿಸುತ್ತಿದ್ದಾರೆ. ನಮ್ಮ ಪೂರ್ವಜರು ಇದೇ ಸ್ಥಳದಲ್ಲಿ ವಾಸಿಸುತ್ತಿದ್ದರು. 3 ದಶಕದ ಹಿಂದೆ ಪುನರ್ವಸತಿಗಾಗಿ ಅರಣ್ಯ ಇಲಾಖೆ ನಮ್ಮನ್ನು ಒಕ್ಕಲೆಬ್ಬಿಸಿದ್ದು, ಯಾವುದೇ ರೀತಿಯ ಪುನರ್ವಸತಿ ಕಲ್ಪಿಸಿಲ್ಲ ಎಂದು ಆರೋಪಿಸುತ್ತಿರುವ ಆದಿವಾಸಿ ಕುಟುಂಬ, ಕೆಲ ಸ್ವಯಂ ಸೇವಾ ಸಂಘಟನೆಗಳ ಮುಖಂಡರ ಬೆಂಬಲದೊಂದಿಗೆ ಅರಣ್ಯ ಪ್ರದೇಶಕ್ಕೆ ನುಗ್ಗಿ ಬೀಡು ಬಿಟಿವೆ.

ಅರಣ್ಯ, ವಿವಿಧ ಇಲಾಖೆಯಲ್ಲೂ ಉಲ್ಲೇಖವಿಲ್ಲ: ಅರಣ್ಯ ಹಕ್ಕು ಹಾಯ್ದೆಯಡಿ ಅತ್ತೂರು ಕೊಲ್ಲಿ ಪ್ರದೇಶದಲ್ಲಿ ಭೂಮಿ ಹಾಗೂ ಮನೆಗಾಗಿ ಅರ್ಜಿ ಸಲ್ಲಿಸಿರುವ ಈ 52 ಕುಟುಂಬಗಳು ಈ ಹಿಂದೆ ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದ ಬಗ್ಗೆ ಅರಣ್ಯ, ಕಂದಾಯ, ಸಮಾಜ ಕಲ್ಯಾಣ ಇಲಾಖೆ ಹಾಗೂ ಬುಡಕಟ್ಟು ಕಲ್ಯಾಣ ಇಲಾಖೆಯಲ್ಲಿ ಯಾವುದೇ ದಾಖಲೆಗಳಿಲ್ಲ. ಈ ಕಾರಣದಿಂದ ಈ ಕುಟುಂಬಗಳು 2011ರಲ್ಲಿ ಸಲ್ಲಿಸಿದ್ದ ಅರಣ್ಯ ಹಕ್ಕು ಕಾಯ್ದೆಯ ಅರ್ಜಿ ತಿರಸ್ಕೃತಗೊಂಡಿವೆ. ಅಲ್ಲದೆ 2024ರಲ್ಲಿ ಎಸ್‌ಡಿಎಲ್‌ಸಿ ಸಮಿತಿಯಲ್ಲೂ ಈ ಕುಟುಂಬಗಳ ಅರ್ಜಿ ತಿರಸ್ಕಾರವಾಗಿದೆ.

ಅರಣ್ಯ ಇಲಾಖೆ 1985, 2011, 2019 ಹಾಗೂ 2025ರಲ್ಲಿ ಉಪಗ್ರಹದಲ್ಲಿ ಸೆರೆ ಹಿಡಿದಿರುವ ಚಿತ್ರಗಳಲ್ಲಿ ಅತ್ತೂರು ಕೊಲ್ಲಿ ಪ್ರದೇಶದಲ್ಲಿ ಆದಿವಾಸಿ ಕುಟುಂಬಗಳು ವಾಸವಿಲ್ಲದೇ ಇರುವುದು ಸ್ಪಷ್ಟವಾಗಿದ್ದು, ಅದನ್ನೇ ಕಾನೂನು ಹೋರಾಟದಲ್ಲಿ ಸಾಕ್ಷ್ಯಿಯಾಗಿ ಅರಣ್ಯ ಇಲಾಖೆ ಬಳಸಿಕೊಂಡಿದೆ. ಅಲ್ಲದೆ, 2006–2007ರಲ್ಲಿ ಮೈಸೂರು ಕಾರ್ಯ ಯೋಜನೆ ವತಿಯಿಂದ ನಾಲ್ಕೇರಿ ಮೀಸಲು ಅರಣ್ಯದ ಸರ್ವೆ ನಡೆಸಿ, ರಚಿಸಿರುವ ನಕ್ಷೆಯಲ್ಲಿ ಎಲ್ಲಾ ಹಾಡಿಗಳ ಮಾಹಿತಿ ಇದ್ದು, ‘ಅತ್ತೂರು ಕೊಲ್ಲಿ’ ಹಾಡಿ ಬಗ್ಗೆ ಉಲ್ಲೇಖವಿಲ್ಲ. 2002ರಲ್ಲಿ ಕರ್ನಾಟಕ ಸರ್ಕಾರ ಅನುಮೋದಿಸಿರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಮ್ಯಾನೇಜ್‌ಮೆಂಟ್ ಪ್ಲಾನ್(2000ದಿಂದ 2010ವರೆಗೆ)ನ 317ನೇ ಪುಟದಲ್ಲಿ ನಾಗರಹೊಳೆ ಅರಣ್ಯದಲ್ಲಿನ ಎಲ್ಲಾ 43 ಹಾಡಿಗಳ ಬಗ್ಗೆ ಉಲ್ಲೇಖವಿದ್ದು, ಅತ್ತೂರು ಕೊಲ್ಲಿ ಹಾಡಿ ಪ್ರಸ್ತಾಪವಿಲ್ಲ. 1999–2000ದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳಾದ ಡಾ.ರಮಣಯ್ಯ, ಡಾ. ಎನ್.ನಾಗರಾಜು, ಅಶೋಕ್ ಅವರ ನೇತೃತ್ವದಲ್ಲಿ ನಾಗರಹೊಳೆ ಅರಣ್ಯ ವ್ಯಾಪ್ತಿಯ ಹಾಡಿಗಳ ಸಮೀಕ್ಷೆ ಮಾಡಿ ಸಲ್ಲಿಸಿರುವ ‘ಇನ್‌ಹ್ಯಾಬಿಟಾಟ್ಸ್ ಆಫ್ ರಾಜೀವ್ ಗಾಂಧಿ ನ್ಯಾಷನಲ್ ಪಾರ್ಕ್, ನಾಗರಹೊಳೆ–ಫ್ಯಾಮಿಲಿ ಪ್ರೊಫೈಲ್’ ಹೆಸರಿನ ವರದಿಯಲ್ಲಿ ನಾಗರಹೊಳೆಯಲ್ಲಿನ ಎಲ್ಲಾ ಹಾಡಿಗಳ 1041 ಆದಿವಾಸಿ ಕುಟುಂಬಗಳ 3740 ಮಂದಿ ಹೆಸರನ್ನು ನಮೂದಿಸಿದ್ದಾರೆ. ಅದರಲ್ಲಿ ಅತ್ತೂರು ಕೊಲ್ಲಿ ಪ್ರದೇಶದಲ್ಲಿ ಬೀಡು ಬಿಟ್ಟಿರುವ ಆದಿವಾಸಿ ಕುಟುಂಬಗಳ ಮಾಹಿತಿ ಇಲ್ಲ. ಈ ಎಲ್ಲಾ ಕಾರಣದಿಂದ ಅತ್ತೂರು ಕೊಲ್ಲಿ ಅರಣ್ಯ ಪ್ರದೇಶದಲ್ಲಿ ಬೀಡು ಬಿಟ್ಟಿರುವ ಆದಿವಾಸಿಗಳು ಸಲ್ಲಿಸಿರುವ ಅರಣ್ಯ ಹಕ್ಕು ಕಾಯ್ದೆ ಅರ್ಜಿ ತಿರಸ್ಕಾರಗೊಂಡಿವೆ ಎಂದು ಅರಣ್ಯಾಧಿಕಾರಿಗಳು ಹೇಳುತ್ತಿದ್ದಾರೆ.

ಜೂ.2ರಂದು ಎಸ್‌ಡಿಎಲ್‌ಸಿ ಸಮಿತಿ ನಡೆಸಿದ ವಿಚಾರಣೆಯಲ್ಲಿ ಆದಿವಾಸಿಗಳು ಈ ಹಿಂದೆ ಆ ಸ್ಥಳದಲ್ಲಿ ವಾಸಿಸುತ್ತಿದ್ದ ಬಗ್ಗೆ ಯಾವುದೇ ಕುರುಹು, ಸಾಕ್ಷಿ, ದಾಖಲೆ ಇಲ್ಲದೇ ಇರುವುದನ್ನು ಪರಿಗಣಿಸಿ ಆದಿವಾಸಿ ಸಮುದಾಯ 52 ಕುಟುಂಬ ಸಲ್ಲಿಸಿದ್ದ ಅರ್ಜಿ ತಿರಸ್ಕಾರಗೊಂಡಿದೆ ಅರಣ್ಯ ಹಕ್ಕು ಕಾಯ್ದೆ ಸೆಕ್ಷನ್ 3 ಮತ್ತು 4ರಲ್ಲಿ ಡಿ.13, 2005ರ ವರೆಗೂ ಅರಣ್ಯದಲ್ಲಿ ವಾಸವಿರುವ ಆದಿವಾಸಿಗಳಿಗೆ ಮಾತ್ರ ಅರಣ್ಯ ಹಕ್ಕು ಕಾಯ್ದೆ ಸೌಲಭ್ಯ ಪಡೆಯಬಹುದಾಗಿದೆ ಎಂಬ ನಿಮಯವಿದೆ. ಆದರೆ, ಈಗ ಅರಣ್ಯ ಪ್ರದೇಶದಲ್ಲಿ ಬೀಡು ಬಿಟ್ಟಿರುವ ಆದಿವಾಸಿಗಳು ಈ ಹಿಂದೆ ಅಲ್ಲಿ ವಾಸಿಸುತ್ತಿದ್ದ ಕುರಿತು ಯಾವುದೇ ದಾಖಲೆ ಇಲ್ಲದೇ ಇರುವುದರಿಂದ ಹಿನ್ನಡೆ ಅನುಭವಿಸುವಂತಾಗಿದೆ.



ನಾಗರಹೊಳೆ ಅರಣ್ಯದ ಅತ್ತೂರು ಕೊಲ್ಲಿ ಅರಣ್ಯ ಪ್ರದೇಶದಲ್ಲಿ ಟೆಂಟ್ ನಿರ್ಮಿಸಿಕೊಂಡಿರುವ ಆದಿವಾಸಿ ಕುಟುಂಬ.

ಪ್ರಾಣ ಹೋದರು ಸರಿ, ಕಾಡಲ್ಲೇ ಇರ್ತೀವಿ

ನಾಗರಹೊಳೆ ಅರಣ್ಯದ ಅತ್ತೂರು ಕೊಲ್ಲಿ ಅರಣ್ಯ ಪ್ರದೇಶದಲ್ಲಿ ಬೀಡು ಬಿಟ್ಟಿರುವ ಆದಿವಾಸಿ ಕುಟುಂಬದ ಸುಶೀಲ, ರೇಣುಕಾ ಸೇರಿದಂತೆ ಇನ್ನಿತರರು ‘ಮೈಸೂರು ಮಿತ್ರ’ನೊಂದಿಗೆ ಮಾತನಾಡಿ, ಈ ಹಿಂದೆ ನಾವು ಅತ್ತೂರು ಕೊಲ್ಲಿ ಅರಣ್ಯ ಪ್ರದೇಶದಲ್ಲೇ ವಾಸಿಸುತ್ತಿದ್ದೆವು. ಪುನರ್ವಸತಿ ಕಲ್ಪಿಸುವುದಾಗಿ ಆರಣ್ಯಾಧಿಕಾರಿಯೊಬ್ಬರು ನಮ್ಮನ್ನು ಕಾಡಿಂದ ಹೊರಗೆ ಕಳುಹಿಸಿದರು. ಈ ಜಾಗದಲ್ಲಿ ನಾವು ಪೂಜಿಸುತ್ತಿದ್ದ ಗುಡಿ ಇದೆ. ಮನೆ ಕುರುಹು ಇದೆ. ಆದರೂ, ಅರಣ್ಯ ಇಲಾಖೆ ಅಧಿಕಾರಿಗಳು ನಮಗೆ ಮನೆ ನಿರ್ಮಿಸಲು ಅವಕಾಶ ನೀಡುತ್ತಿಲ್ಲ. ನಾವು ಸತ್ತರೂ ಸರಿ ಈ ಪ್ರದೇಶದಿಂದ ಹೊರಗೆ ಹೋಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕಳೆದ 2–3 ದಶಕಗಳಿಂದ ಕೊಡಗು ಜಿಲ್ಲೆಯ ವಿವಿಧೆಡೆ ಕಾಫಿ ಎಸ್ಟೇಟ್‌ನಲ್ಲಿ ಲೈನ್‌ಮನೆಯಲ್ಲಿ ವಾಸಿಸುತ್ತಿದ್ದ ಈ ಆದಿವಾಸಿ ಕುಟುಂಬಗಳು ಇದೀಗ ಲೈನ್‌ಮನೆಯಿಂದ ಹೊರಗೆ ಬಂದಿವೆ. ಅಸ್ಸಾಂನಿಂದ ಬಂದಿರುವ ಕಾರ್ಮಿಕರು ಕಾಫಿ ತೋಟದ ಕೆಲಸಕ್ಕೆ ಸೇರಿಕೊಂಡಿರುವುದರಿಂದ ಆದಿವಾಸಿಗಳು ಮಾಡುತ್ತಿದ್ದ ಕೆಲಸಕ್ಕೆ ತೊಂದರೆಯಾದ ಹಿನ್ನೆಲೆಯಲ್ಲಿ ಲೈನ್‌ಮನೆಯಿಂದ ಹೊರ ಬಂದಿರುವ ಈ 52 ಕುಟುಂಬಗಳು ಇದೀಗ ಶಾಶ್ವತ ನೆಲೆ ಕಂಡುಕೊಳ್ಳಲು ಅತ್ತೂರು ಕೊಲ್ಲಿ ಅರಣ್ಯ ಪ್ರದೇಶ ಆಯ್ಕೆ ಮಾಡಿಕೊಂಡಿವೆ ಎಂದು ಮೂಲಗಳು ತಿಳಿಸಿವೆ.

ಆದಿವಾಸಿಗಳು ಬೀಡುಬಿಟ್ಟಿರುವ ಅತ್ತೂರು ಕೊಲ್ಲಿ ಅರಣ್ಯ ಪ್ರದೇಶವಿರುವ ಸ್ಥಳದಿಂದ ಕೇವಲ ಒಂದು ಕಿಮಿ ಅಂತರದಲ್ಲಿಯೇ ಕೇರಳ ಗಡಿಯಿದ್ದು, ಅಲ್ಲಿನ ಕೆಲ ಆದಿವಾಸಿ ಕುಟುಂಬಗಳು ಅತ್ತೂರು ಕೊಲ್ಲಿ ಪ್ರದೇಶದಲ್ಲಿರುವ ಆದಿವಾಸಿ ಕುಟುಂಬದೊಂದಿಗೆ ಸೇರಿಕೊಂಡಿವೆ ಎಂದು ಹೇಳಲಾಗುತ್ತಿದೆ.

ಅನ್ನಭಾಗ್ಯ, ಗೃಹಲಕ್ಷ್ಮೀ ಸೌಲಭ್ಯ: ಅತ್ತೂರು ಕೊಲ್ಲಿ ಅರಣ್ಯ ಪ್ರದೇಶದಲ್ಲಿ ಬೀಡು ಬಿಟ್ಟಿರುವ 52 ಆದಿವಾಸಿಗಳ ಕುಟುಂಬಗಳಿಗೆ ರಾಜ್ಯ ಸರ್ಕಾರದ ಮಹತ್ವಕಾಂಕ್ಷೆ ಯೋಜನೆಯಾದ ಅನ್ನಭಾಗ್ಯ ಹಾಗೂ ಗೃಹಲಕ್ಷ್ಮೀ ಯೋಜನೆಯ ಸೌಲಭ್ಯ ದೊರಕುತ್ತಿದೆ. ಬಹುತೇಕ ಎಲ್ಲರ ಬಳಿಯೂ ಆಧಾರ್ ಕಾರ್ಡ್, ಪಡಿತರ ಚೀಟಿ ಇದ್ದು, ವಿಳಾಸ ಕುಟ್ಟ, ವಿರಾಜಪೇಟೆ ತಾಲೂಕು, ಕೊಡಗು ಜಿಲ್ಲೆ ಎಂದು ಮುದ್ರಿಸಲಾಗಿದೆ. ಯಾರೊಬ್ಬರ ಆಧಾರ್ ಕಾರ್ಡ್ ಅಥವಾ ಪಡಿತರ ಚೀಟಿಯಲ್ಲೂ ಅತ್ತೂರು ಕೊಲ್ಲಿ ಎಂದು ನಮೂದಾಗದೇ ಇರುವುದು ಅವರ ಅರಣ್ಯ ಹಕ್ಕು ಅರ್ಜಿ ಪ್ರತಿಪಾದನೆಗೆ ತೊಡಕಾಗಿದೆ.

ಅರಣ್ಯ ಇಲಾಖೆಯಿಂದ ಯಾವುದೇ ಪ್ರಮಾದವಾಗಿಲ್ಲ

“ ಅರಣ್ಯ ಇಲಾಖೆಯಿಂದ ಆದಿವಾಸಿಗಳ ಮೇಲೆ ದೌರ್ಜನ್ಯ ನಡೆದಿಲ್ಲ. 1985ರಿಂದ 2025ರವರೆಗಿನ ಯಾವ ದಾಖಲೆಗಳಲ್ಲೂ ಅತ್ತೂರು ಕೊಲ್ಲಿ ಪ್ರದೇಶದಲ್ಲಿ ಮೊಕ್ಕಾಂ ಹೂಡಿರುವ ಆದಿವಾಸಿಗಳ ಕುಟುಂಬ ಅಲ್ಲಿ ನೆಲೆಸಿದ್ದ ಬಗ್ಗೆ ದಾಖಲೆಯಿಲ್ಲ. ಆ ಕಾರಣದಿಂದ ಎಸ್‌ಡಿಎಲ್‌ಸಿ ಸಮಿತಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಕಾನೂನು ನಿಯಮ ಅನುಸರಿಸಿ ತಿರಸ್ಕರಿಸಿದೆ.

– ಅನನ್ಯಕುಮಾರ್, ಎಸಿಎಫ್, ನಾಗರಹೊಳೆ



ದಾಖಲೆ ಪ್ರದರ್ಶಿಸುತ್ತಿರುವ ಎಸಿಎಫ್ ಅನನ್ಯಕುಮಾರ್.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಚಿನ್ನಸ್ವಾಮಿ ಸ್ಟೇಡಿಯಂಗೆ ಸಿಐಡಿ ತಂಡ ಭೇಟಿ; ಕಾಲ್ತುಳಿತ ಸ್ಥಳದಲ್ಲಿ ಪರಿಶೀಲನೆ

ಬೆಂಗಳೂರು, ಜೂ.7– ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಕಾಲ್ತುಳಿತದಿಂದ 11 ಮಂದಿ ಅಭಿಮಾನಿಗಳು ಸಾವನ್ನಪ್ಪಿದ್ದ ಪ್ರಕರಣ ಈಗಾಗಲೇ ದೇಶಾದ್ಯಂತ ಸುದ್ದಿಯಾಗಿದೆ. ಪ್ರಕರಣದಿಂದ ಸರ್ಕಾರ ಆಘಾತಕ್ಕೆ ಒಳಗಾಗಿದ್ದು, ಈಗಾಗಲೇ ನಾಲ್ವರನ್ನು ಬಂಧಿಸಲಾಗಿದೆ. ಸರ್ಕಾರ ಸಿಐಡಿ, ಮ್ಯಾಜಿಸ್ಟ್ರೇಟ್ ಹಾಗೂ ನ್ಯಾಯಾಂಗ ತನಿಖೆಗೆ ಆದೇಶ ಕೂಡ ಕೊಟ್ಟಿದೆ. ಪ್ರಕರಣವನ್ನು ಸಿಐಡಿ ಪೊಲೀಸರಿಗೆ ಕಬ್ಬನ್ ಪಾರ್ಕ್ ಪೊಲೀಸರು ಹಸ್ತಾಂತರ ಮಾಡಿದ್ದು, ಇಂದಿನಿಂದ ತನಿಖೆ ಆರಂಭಿಸಿದೆ.

ಸಿಐಡಿ ಎಸ್‌ಪಿ ಶುಭನ್ವಿತಾ ನೇತೃತ್ವದಲ್ಲಿ ಕಾಲ್ತುಳಿತ ಪ್ರಕರಣದ ತನಿಖೆ ನಡೆಯಲಿದ್ದು, ಡಿವೈಎಸ್‌ಪಿ ಗೌತಮ್ ಹಾಗೂ ಪುರುಷೋತ್ತಮ್‌ರನ್ನು ತನಿಖಾಧಿಕಾರಿಗಳಾಗಿ ನೇಮಕ ಮಾಡಲಾಗಿದೆ. ಕಾಲ್ತುಳಿತ ಉಂಟಾದ ಸ್ಥಳಕ್ಕೆ ಭೇಟಿ ನೀಡಿದ ಸಿಐಡಿ ತಂಡ, ನೂಕು ನುಗ್ಗಲು ಉಂಟಾಗಿದ್ದ ಗೇಟ್ ನಂಬರ್ 7, 19, 18, 16, 21ರ ಬಳಿ ಪರಿಶೀಲನೆ ನಡೆಸಿದೆ.

ಬಂಧನಕ್ಕೊಳಗಾಗಿರುವ ಡಿಎನ್‌ಎ ಮ್ಯಾನೇಜ್‌ಮೆಂಟ್‌ನ ಮೂವರು ಹಾಗೂ ಆರ್‌ಸಿಬಿಯ ಒಬ್ಬರು ನ್ಯಾಯಾಂಗ ಬಂಧನದಲ್ಲಿದ್ದು, ಬಾಡಿ ವಾರೆಂಟ್ ಮೇಲೆ ವಶಕ್ಕೆ ಪಡೆಯಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ. ಶನಿವಾರ ಹಾಗೂ ಭಾನುವಾರ ಕೋರ್ಟ್‌ಗೆ ರಜೆ ಇದ್ದು, ಸೋಮವಾರ ಕಸ್ಟಡಿಗೆ ಪಡೆಯಲು ಸಿದ್ಧತೆ ನಡೆದಿದೆ.

ಸಿಐಡಿ ಜೊತೆ ಬೆಂಗಳೂರು ಜಿಲ್ಲಾಧಿಕಾರಿ ಕೂಡ ತನಿಖೆ ಆರಂಭಿಸಿದ್ದಾರೆ. ಚಿನ್ನಸ್ವಾಮಿ ಸ್ಟೇಡಿಯಂಗೆ ಭೇಟಿ ನೀಡಿ ಪರಿಶೀಲನೆ ನಡೆಸಿರುವ ಜಿಲ್ಲಾಧಿಕಾರಿ ಜಗದೀಶ್, ಗಾಯಗೊಂಡವರ ಬಗ್ಗೆ ತನಿಖೆ ವರದಿ ಪಡೆದುಕೊಂಡಿದ್ದಾರೆ. ಗಾಯಾಳುಗಳ ಸಂಖ್ಯೆಯನ್ನು ಸರ್ಕಾರ ತಪ್ಪಾಗಿ ಹೇಳಿರುವುದು ಬಹಿರಂಗವಾಗಿದೆ. ಸುದ್ದಿಗೋಷ್ಠಿಯಲ್ಲಿ ಸಿಎಂ ಸಿದ್ದರಾಮಯ್ಯ ಅವರು 11 ಜನರು ಮೃತಪಟ್ಟಿದ್ದಾರೆ, 47 ಜನರು ಗಾಯಗೊಂಡಿದ್ದಾರೆ ಎಂದು ಹೇಳಿದ್ದರು. ಆದರೆ ಅಸಲಿಗೆ ಗಾಯಗೊಂಡವರು ಕೇವಲ 47 ಜನರು ಮಾತ್ರವಲ್ಲ, ಬರೋಬ್ಬರಿ 65 ಮಂದಿ ಕಾಲ್ತುಳಿತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗಾಯಾಳುಗಳಿಗೂ ನೋಟಿಸ್ ಜಾರಿ: ಬೆಂಗಳೂರಿನ 4 ಆಸ್ಪತ್ರೆಗಳಿಂದ ಜಿಲ್ಲಾಧಿಕಾರಿ ಜಗದೀಶ್ ವಿವರಣೆ ಪಡೆದುಕೊಂಡಿದ್ದಾರೆ. ಬೌರಿಂಗ್, ಫೋರ್ಟಿಸ್, ಮಣಿಪಾಲ್ ಮತ್ತು ವೈದೇಹಿ ಆಸ್ಪತ್ರೆಗಳಲ್ಲಿ ಎಷ್ಟು ಗಾಯಾಳುಗಳು ಅಡ್ಮಿಟ್ ಆಗಿದ್ದರು, ಎಷ್ಟು ಮಂದಿ ಡಿಸ್ಚಾರ್ಜ್ ಆದರು ಮತ್ತು ಎಷ್ಟು ಡೆತ್ ಆಗಿದೆ. ಘಟನೆಗೆ ಕಾರಣ ಏನು ಎಂಬ ಮಾಹಿತಿ ಪಡೆದುಕೊಂಡಿದ್ದಾರೆ. ಕಾಲ್ತುಳಿತ ಹೇಗಾಯ್ತು? ಏನೇನಾಯ್ತು ಎಂಬ ಮಾಹಿತಿ ಸಂಗ್ರಹಕ್ಕೆ 25ಕ್ಕೂ ಹೆಚ್ಚು ಗಾಯಾಳುಗಳಿಗೆ ನೋಟಿಸ್ ಕೊಟ್ಟಿದ್ದಾರೆ.

ಬೌರಿಂಗ್ ಆಸ್ಪತ್ರೆಯಲ್ಲಿ ಇಬ್ಬರು ಮಾತ್ರ ಚಿಕಿತ್ಸೆ ಪಡೆಯುತ್ತಿದ್ದು, ಉಳಿದೆಲ್ಲಾ ಗಾಯಾಳುಗಳು ಡಿಸ್ಚಾರ್ಜ್ ಆಗಿದ್ದಾರೆ. ಇಬ್ಬರೂ ಅಭಿಮಾನಿಗಳು ಪದವಿ ವಿದ್ಯಾರ್ಥಿಗಳಾಗಿದ್ದು, ಕೆಆರ್ ಪುರಂ ಹಾಗೂ ಚಿಕ್ಕಮಗಳೂರು ಮೂಲದ ನಿವಾಸಿಗಳಾಗಿದ್ದಾರೆ. ಕಾಲ್ತುಳಿತದಲ್ಲಿ ಇಬ್ಬರು ಅಭಿಮಾನಿಗಳ ಕಾಲು ಮುರಿದಿತ್ತು.

ಶಾಸಕರಾಗಿ ಹರೀಶ್‌ಗೌಡರು 2 ವರ್ಷ ಪೂರೈಕೆ ಸಂಭ್ರಮಾಚರಣೆ

ವಾರ್ಡ್ ನಂ.19, 22ರ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಅಧಿಕ ಅಂಕದೊಂದಿಗೆ ಉನ್ನತ ವ್ಯಾಸಂಗ ಮಾಡಿದರೆ ಎಲ್ಲಿಯಾದರೂ ಜೀವನ ರೂಪಿಸಿಕೊಳ್ಳಬಹುದು; ಮಕ್ಕಳಿಗೆ ಕಿವಿಮಾತು



ಚಾಮರಾಜ ಕ್ಷೇತ್ರದ ಶಾಸಕರಾಗಿ ಕೆ.ಹರೀಶ್‌ಗೌಡರು 2 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ವಾರ್ಡ್ ನಂ.19 ಮತ್ತು 22ರ ವ್ಯಾಪ್ತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

> **ಮಾದಕ ವ್ಯಸನಕ್ಕೆ ದೂಡುವವರಿದ್ದಾರೆ ಎಚ್ಚರ...!**
> ಇತ್ತೀಚಿನ ದಿನಗಳಲ್ಲಿ ಮಾದಕ ವ್ಯಸನಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಪ್ರತಿಭಾವಂತ ವಿದ್ಯಾರ್ಥಿಗಳನ್ನೂ ಈ ವ್ಯಸನಕ್ಕೆ ದೂಡಲಾಗುತ್ತಿದೆ. ನಮ್ಮದೇ ಕ್ಷೇತ್ರದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಯೊಬ್ಬನನ್ನು ಮಾದಕ ವ್ಯಸನಿಯನ್ನಾಗಿ ಮಾಡಲಾಗಿತ್ತು. ಆದ್ದರಿಂದ ವಿದ್ಯಾರ್ಥಿಗಳು, ಯುವಕ–ಯುವತಿಯರು, ಪೋಷಕರು ಬಹಳ ಎಚ್ಚರಿಕೆಯಿಂದ ಇರಬೇಕು.
> – ಕೆ.ಹರೀಶ್‌ಗೌಡ, ಶಾಸಕ

ಮೈಸೂರು, ಜೂ.7(ಎಂಕೆ)– ಚಾಮರಾಜ ಕ್ಷೇತ್ರದ ಶಾಸಕರಾಗಿ ಕೆ.ಹರೀಶ್‌ಗೌಡರು 2 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ವಾರ್ಡ್ ನಂ.19 ಮತ್ತು 22ರ ವ್ಯಾಪ್ತಿಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ತೇರ್ಗಡೆಯಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರಿನ ಪಡುವಾರಹಳ್ಳಿಯ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಕೆ.ಹರೀಶ್‌ಗೌಡರ ಸ್ನೇಹ ಬಳಗದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಬ್ಯಾಗ್, ಸ್ಮರಣಿಕೆ, ಸಿಹಿ ನೀಡಿ ಸನ್ಮಾನಿಸಲಾಯಿತು. ಹಾಗೆಯೇ ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ಪದಾಧಿಕಾರಿಗಳಾದ ಮಹದೇವಸ್ವಾಮಿ, ಭೈರಪ್ಪ ವೆಂಕುಗಿರಿಗೌಡ, ರಾಮಣ್ಣ ಸೋಮಣ್ಣ ಸುರೇಶ್(ಉಗ್ರಯ್ಯ), ಮುಖಂಡರಾದ ರಾಮು, ಲೋಕೇಶ್, ಗುತ್ತಿಗೆದಾರ ಸೋಮಣ್ಣ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ವಕೀಲೆ ತನುಜಾ ಮಹೇಶ್ ಸೇರಿದಂತೆ ಪಡುವಾರಹಳ್ಳಿ ಯಜಮಾನರು, ಮುಖಂಡರನ್ನು ಸನ್ಮಾನಿಸಲಾಯಿತು.

ನಂತರ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಶಾಸಕ ಕೆ.ಹರೀಶ್‌ಗೌಡ, ಚಾಮರಾಜ ಕ್ಷೇತ್ರದಲ್ಲಿ ಪ್ರತೀ ವಾರ್ಡ್‌ನಲ್ಲಿಯೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಪ್ರೋತ್ಸಾಹ ನೀಡುವಂತೆ ಪಕ್ಷದ ಮುಖಂಡರು, ಕಾರ್ಯಕರ್ತರಿಗೆ ಸೂಚನೆ ನೀಡಿದ್ದೆ. ಅದರಂತೆ ಕ್ಷೇತ್ರದೆಲ್ಲೆಡೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರ್ತಿಸಿ ಪ್ರೋತ್ಸಾಹಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಸ್ಪರ್ಧಾತ್ಮಕ ಯುಗದಲ್ಲಿ ಶೇ.85 ಪರ್ಸೆಂಟ್ ತೆಗೆದುಕೊಂಡರೂ ಕಾಲೇಜುಗಳಲ್ಲಿ ಸೀಟ್ ಸಿಗದಂತಹ ಪರಿಸ್ಥಿತಿ ಇದೆ ಮೊದಲು ಶಾಲೆಗೆ ಹೋದರೆ ಸಾಕು ಎನ್ನುತ್ತಿದ್ದರು. ಆದರೆ ಈಗ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದರಷ್ಟೇ ಉನ್ನತ ವಿದ್ಯಾಭ್ಯಾಸ ಎನ್ನಲಾಗುತ್ತಿದೆ ಆದ್ದರಿಂದ ವಿದ್ಯಾರ್ಥಿಗಳು ಗಮನವಿಟ್ಟು ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದರು.

ವಿದ್ಯಾಭ್ಯಾಸದ ಜೊತೆಗೆ ಬದುಕನ್ನು ಕಟ್ಟಿಕೊಳ್ಳುವ ರೀತಿ–ನೀತಿಯನ್ನು ಅರಿತುಕೊಳ್ಳಬೇಕು. ವಿಜ್ಞಾನ, ಸಾರ್ವಜನಿಕ ಆಡಳಿತ ಸೇರಿದಂತೆ ಹಲವು ವಿಷಯಗಳಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿದರೆ ಮುಂದಿನ ಜೀವನವೂ ಉಜ್ವಲವಾಗಿರುತ್ತದೆ. ಸರ್ಕಾರಿ ಅಥವಾ ಖಾಸಗಿ ಕಂಪನಿಗಳಲ್ಲಿ ಕೆಲಸ ಸಿಗದಿದ್ದರೂ ಶಿಕ್ಷಣ, ಜೀವನ ಕಟ್ಟಿಕೊಳ್ಳುವ ವಿಶ್ವಾಸ ತುಂಬಲಿದೆ ಎಂದರು.

ಕ್ಷಣಿಕ ಸುಖಕ್ಕೆ ಜಾರದೆ ಇತಿಮಿತಿಯಲ್ಲೇ ಇದ್ದರೆ, ನಿಮ್ಮ ಪೋಷಕರಿಗೂ ನೆಮ್ಮದಿ ಇರಲಿದೆ. ಚಂಚಲತೆ ಬಿಟ್ಟು ತಂದೆ–ತಾಯಿ ಇಚ್ಛೆಗೆ ಅನುಗುಣವಾಗಿ ನಡೆದುಕೊಳ್ಳಿ. ಒಬ್ಬರು ಉನ್ನತ ಸ್ಥಾನಕ್ಕೆ ತಲುಪಿದರೆ ನೂರಾರು ಜನರಿಗೆ ಸಹಾಯ ಮಾಡುಬಹುದು. ಮುಂದಿನ ದಿನಗಳಲ್ಲಿ ಎಲ್ಲಾ ಕ್ಷೇತ್ರದಲ್ಲಿಯೂ ಪುರುಷರಷ್ಟೇ ಸಮಾನ ಅವಕಾಶ ಮಹಿಳೆಯರಿಗೂ ದೊರೆಯಲಿದ್ದು, ಮನಸ್ಸನ್ನು ಯಾವ ಕಡೆಗೂ ಹರಿಯಲು ಬಿಡದೆ ಏಕಚಿತ್ತದಿಂದ ಅಧ್ಯಯನ ಮಾಡುವಂತೆ ತಿಳಿಸಿದರು.

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷ ಚಂದ್ರಶೇಖರ್, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ, ಶ್ರೀ ಸತ್ಯಸಾಯಿ ಬಾಬು ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲ ತ್ರಿಮೂರ್ತಿ, ಜಯಲಕ್ಷ್ಮಿಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಕುಮಾರ್, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ವಾರ್ಡ್ ನಂ.19 ಮತ್ತು 22ರ ಅಧ್ಯಕ್ಷರಾದ ಕುಮಾರ್, ಶಿವಪ್ರಕಾಶ್, ಮುಖಂಡರಾದ ಯೋಗೇಶ್, ಪಚ್ಚಿ, ರಾಜಣ್ಣ, ಮಾದೇಶ್, ಮಾಯಣ್ಣ, ನರಸಿಂಹ, ಶಿವು, ಕಿರಣ್ ಕುಮಾರ್, ಮರಿಸ್ವಾಮಿ, ಬಾಬು, ಒಂಟಿಕೊಪ್ಪಲು ಗುರುರಾಜ್, ಯುವ ಕಾಂಗ್ರೆಸ್‌ನ ನಿಶಾಂತ್ ಪಟೇಲ್, ವಿನಯ್ ಮತ್ತಿತರರಿದ್ದರು.

ಜಾನಪದ ವಿದ್ವಾಂಸ ರಾಜಪ್ಪ ನಿಧನ



ಮೈಸೂರು, ಜೂ.7(ಬಿಎಲ್‌ಯು)– ಜಾನಪದ ವಿದ್ವಾಂಸರೂ ಆದ ನಿವೃತ್ತ ಸಂಶೋಧಕ ಟಿ.ಎಸ್.ರಾಜಪ್ಪ (83) ಅವರು ಇಂದು ನಿಧನರಾಗಿದ್ದಾರೆ.

ಮೈಸೂರಿನ ಕುವೆಂಪು ನಗರದಲ್ಲಿ ವಾಸವಾಗಿದ್ದ ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಇಂದು ಮುಂಜಾನೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದರು.

ರಾಜಪ್ಪ ಅವರು ಪತ್ನಿ ನಾಗಮಣಿ, ಮೂವರು ಗಂಡು ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಅವರ ಮಗ ವಿದೇಶದಲ್ಲಿದ್ದು, ನಾಳೆ ಬೆಳಗ್ಗೆ ಮೈಸೂರಿಗೆ ಆಗಮಿಸಲಿದ್ದಾರೆ. ತರುವಾಯ ನಾಳೆ ಮಧ್ಯಾಹ್ನ 2 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಲಿದೆ.

ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಲ್ಲಿ 30 ವರ್ಷಗಳ ಕಾಲ ಸಂಶೋಧಕರಾಗಿ ಸೇವೆ ಸಲ್ಲಿಸಿದ ರಾಜಪ್ಪ ಅವರು, 20ಕ್ಕೂ ಹೆಚ್ಚು ಕೃತಿಗಳನ್ನು ರಚನೆ ಮಾಡಿದ್ದಾರೆ. ರಾಜ್ಯ ಸರ್ಕಾರದ ಜಾನಪದ ತಜ್ಞ ಪ್ರಶಸ್ತಿ ಪಡೆದಿರುವ ಅವರು ನಂಜನಗೂಡಿನಲ್ಲಿ ಮಾರ್ಚ್ 1 ರಂದು ನಡೆದ ಮೈಸೂರು ಜಿಲ್ಲಾ ಮಟ್ಟದ 17 ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು.

ಫೋಟೋ, ವಿಡಿಯೋ ಚಿತ್ರೀಕರಣಕ್ಕೆ ಬಹುಮಾನ ಒಂದೇ ಮಾನದಂಡ ಅಲ್ಲ

ಅಂಕಣಕಾರ ತ್ರಿಪುರಾಂತಕ ಅಭಿಪ್ರಾಯ



ಮೈಸೂರಿನ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶನಿವಾರ ಮೈಸೂರು ಪತ್ರಕರ್ತರ ಸ್ನೇಹ ಕೂಟ ಪತ್ರಕರ್ತರಿಗಾಗಿ ಆಯೋಜಿಸಿದ್ದ ಮಾಧ್ಯಮ ವೃತ್ತಿಪರ ಕಾರ್ಯಾಗಾರದಲ್ಲಿ ಅಂಕಣಕಾರ ತ್ರಿಪುರಾಂತಕ ಹಾಗೂ ಇತರ ಗಣ್ಯರು ಭಾಗವಹಿಸಿದ್ದರು.

ಮೈಸೂರು, ಜೂ.7(ಬಿಎಲ್‌ಯು)– ಯಾವುದೇ ರೀತಿಯ ಫೋಟೋ ಮತ್ತು ವಿಡಿಯೋ ಚಿತ್ರೀಕರಣಕ್ಕೆ ಬಹುಮಾನ ಒಂದೇ ಮಾನದಂಡವಾಗಿರಬಾರದು. ಒಂದು ಫೋಟೋ ಮತ್ತು ವಿಡಿಯೋ ಸಾವಿರ ಅರ್ಥಗಳನ್ನು ಬಿಂಬಿಸುವ ಸಾಮರ್ಥ್ಯ ಅದರಲ್ಲಿರಬೇಕು ಎಂದು ಲೇಖಕರೂ ಆದ ಸುತ್ತೂರಿನ ಜೆಎಸ್‌ಎಸ್ ಶಾಲೆಯ ಸಮನ್ವಯ ಅಧಿಕಾರಿಯೂ ಆದ ಅಂಕಣಕಾರ ಜಿ.ಎಲ್. ತ್ರಿಪುರಾಂತಕ ಅಭಿಪ್ರಾಯಪಟ್ಟರು.

ನಗರದ ಜೆಎಲ್‌ಬಿ ರಸ್ತೆಯ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇಂದು ಮೈಸೂರು ಪತ್ರಕರ್ತರ ಸ್ನೇಹ ಕೂಟ ಪತ್ರಕರ್ತರಿಗಾಗಿ ಆಯೋಜಿಸಿದ್ದ ಮಾಧ್ಯಮ ವೃತ್ತಿಪರ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಇಂದಿನ ತಾಂತ್ರಿಕತೆಯಲ್ಲಿ ಸಾಧಾರಣ ಮೊಬೈಲ್‌ನಿಂದ ಗುಣಮಟ್ಟದ ಫೋಟೋ ತೆಗೆಯಬಹುದು ಹಾಗೂ ವಿಡಿಯೋ ಚಿತ್ರೀಕರಣ ಮಾಡಬಹುದು ಎಂದು ಹೇಳಿದರು.

ಉನ್ನತ ತಂತ್ರಜ್ಞಾನದ ಹಲವು ರೀತಿಯ ಆ್ಯಪ್‌ಗಳನ್ನು ಬಳಸಿ ಕೀಟದಿಂದ ಚಂದ್ರನ ತನಕ ಫೋಟೋ ತೆಗೆದು, ವಿಡಿಯೋ ಚಿತ್ರೀಕರಣ ಮಾಡಬಹುದು. ಆದರೆ ಮೊಬೈಲ್‌ನಲ್ಲಿ ತೆಗೆಯುವ ಫೋಟೋ ಹಾಗೂ ವಿಡಿಯೋ ಚಿತ್ರೀಕರಣದ ಬಗ್ಗೆ ಕೀಳರಿಮೆ ಇದ್ದು, ಇದು ದೂರವಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮವೊಂದರ ಉದ್ಘಾಟನೆ ಸಮಯದಲ್ಲಿ ಅತಿಥಿಗಳು ತಮಗೆ ಬೇಕಾದ ಹಾಗೆ ನಿಲ್ಲಿಸಿ ಫೋಟೋ ತೆಗೆಯಬಾರದು. ಪತ್ರಿಕಾ ಛಾಯಾಗ್ರಾಹಕರು ತೆಗೆಯುವ ಫೋಟೋಗಳಲ್ಲಿ ನೈಜತೆ ಇರಬೇಕು ಎಂದರು.

ಇದೇ ವೇಳೆ ಮಾತನಾಡಿದ ಅನುಭವಿ ಛಾಯಾಗ್ರಾಹಕ ರಾಜಾರಾವ್, ಇತ್ತೀಚಿಗೆ ದಿನಪತ್ರಿಕೆಗಳಲ್ಲಿ ಫೋಟೋಗೆ ಹೆಚ್ಚಿನ ಆದ್ಯತೆ ನೀಡುತ್ತಿಲ್ಲ. ಕನಿಷ್ಠ ಶೇಕಡ 40 ರಷ್ಟು ಫೋಟೋಗೆ ಅವಕಾಶ ನೀಡಿದರೆ ಓದುಗರನ್ನು ಆ ಪತ್ರಿಕೆ ಮತ್ತಷ್ಟು ಆಕರ್ಷಿಸುತ್ತದೆ ಎಂದರು.

ಆದರೆ, ಇತ್ತೀಚಿಗೆ ಪತ್ರಿಕೆಗಳ ಓದು ಬಹಳ ಕಡಿಮೆಯಾಗುತ್ತಿದೆ. ಫೋಟೋ ಬಗ್ಗೆ ಸಂವೇದನೆ ಇಲ್ಲದಿರುವುದು ಇದಕ್ಕೆ ಒಂದು ಕಾರಣವಾಗಿದೆ. ಪತ್ರಿಕಾ ಛಾಯಾಗ್ರಾಹಕರು ಒಂದು ಕಾರ್ಯಕ್ರಮದ ಫೋಟೋ ತೆಗೆದು ಮತ್ತೊಂದು ಕಾರ್ಯಕ್ರಮದ ಫೋಟೋ ತೆಗೆಯುವ ಧಾವಂತದಲ್ಲಿರುತ್ತಾರೆ. ಇದರಿಂದ ಗುಣಮಟ್ಟದ ಫೋಟೋ ತೆಗೆಯಲು ಸಾಧ್ಯವಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಇಂದು ಸೋಷಿಯಲ್ ಮೀಡಿಯಾದಿಂದ ಬಹಳಷ್ಟು ಜನ ಆದಾಯಗಳಿಸುತ್ತಿದ್ದಾರೆ. ಆದರೆ ಅಲ್ಲಿ ಬರುವ ಸುದ್ದಿಗಳನ್ನು ಜನರು ನಂಬುವುದಿಲ್ಲ. ಪತ್ರಿಕೆಗಳ ಸುದ್ದಿಯಲ್ಲಿ ಜನರಿಗೆ ಅಚಲವಾದ ನಂಬಿಕೆ ಇರುತ್ತದೆ. ಇದರಿಂದ ಹಲವು ರೀತಿಯ ಪ್ರಭಾವಗಳಿದ್ದರೂ ಪತ್ರಿಕೆಗಳು ಇನ್ನೂ ಗಟ್ಟಿಯಾಗಿ ಬೇರೂರಿವೆ ಎಂದು ರಾಜಾರಾಮ್ ಹೇಳಿದರು.

ಪತ್ರಕರ್ತರಾದ ಅಂಶಿ ಪ್ರಸನ್ನ ಕುಮಾರ್, ಎಸ್.ಟಿ.ರವಿಕುಮಾರ್, ಸಿ.ಕೆ.ಮಹೇಂದ್ರ ಸತ್ಯನಾರಾಯಣ, ಬಸಣ್ಣ, ಸತೀಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬೇರೆ ಸಮುದಾಯದವರು ನೀಡುವ ಗೌರವವನ್ನು ಬ್ರಾಹ್ಮಣರು ಕಾಪಾಡಿಕೊಳ್ಳಿ

ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಭಾಸ್ಕರ್ ರಾವ್



ಮೈಸೂರಿನ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಕಲ್ಯಾಣ ಭವನದಲ್ಲಿ ಎನ್.ಎಂ.ನವೀನ್ ಕುಮಾರ್ ವಿಪ್ರ ಮಿತ್ರ ಬಳಗದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ಭಾಸ್ಕರ್ ರಾವ್ ಮತ್ತು ಎನ್.ಎಂ.ನವೀನ್ ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಜೂ.7(ಜಿಎ)–ಬ್ರಾಹ್ಮಣರು ಬೇರೆ ಸಮುದಾಯದವರು ನೀಡುವ ಗೌರವವನ್ನು ಕಾಪಾಡಿಕೊಳ್ಳಿ, ಧೈರ್ಯ ಪ್ರದರ್ಶನ ಮಾಡಿ ಎಂದು ನಿವೃತ್ತ ಎಡಿಜಿಪಿ, ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಭಾಸ್ಕರ್ ರಾವ್ ಸಲಹೆ ನೀಡಿದರು.

ಮೈಸೂರಿನ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಕಲ್ಯಾಣ ಭವನದಲ್ಲಿ ಎನ್.ಎಂ.ನವೀನ್ ಕುಮಾರ್ ವಿಪ್ರ ಮಿತ್ರ ಬಳಗದ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ರಾಮಾಯಣದ ಕಾಲದಿಂದಲೂ ನಾವು ಮುಂಚೂಣಿಯಲ್ಲಿದ್ದೇವೆ ಎಂದೂ ಹಿಂದುಳಿದಿಲ್ಲ. ಹಾಗೇ ಹಿಂದುಳಿದವರು ಅಲ್ಲ. ಭಗವಂತನ ಕೃಪೆ ನಮ್ಮ ಮೇಲೆ ಇದೆ. ಅವನ ಕೃಪೆ ಇದ್ದರೆ ಯಾರ ಹಿಂದೆಯೂ ಹೋಗಬೇಕಿಲ್ಲ, ಚಮಚಾಗಿರಿ ಮಾಡಬೇಕಿಲ್ಲ, ಬಕೆಟ್ ಹಿಡಿಯುವ ಅವಶ್ಯಕತೆ ಇಲ್ಲ ಎಂದರು.

ಸಮುದಾಯದ ಬಹಳ ಜನ ಸ್ವಾಭಿಮಾನ ಬಿಟ್ಟು ಬೇರೆ ರೀತಿ ಕೆಲಸಗಳನ್ನು ಮಾಡಿ ಸಮುದಾಯಕ್ಕೆ ಕೆಟ್ಟ ಹೆಸರು ತಂದು ಅವರೂ ಕೆಟ್ಟವರಾಗಿದ್ದಾರೆ. ಸಮುದಾಯಕ್ಕೆ ಮನುಷ್ಯನ ಕೃಪೆ ಬೇಕಿಲ್ಲ. ಭಗವಂತನ ಕೃಪೆ ನಿರಂತರವಾಗಿರಬೇಕು. ಅದಕ್ಕಾಗಿ ನಿತ್ಯ ಪೂಜೆ, ಗ್ರಾಮದ ಹಬ್ಬಗಳಲ್ಲಿ ಭಾಗವಹಿಸಿ ಎಂದು ತಿಳಿಸಿದರು.

ನಮ್ಮ ಮುಂದಿನ ಪೀಳಿಗೆಗೆ ಉತ್ತಮ ಅವಕಾಶ ಕಲ್ಪಿಸುವ ರೀತಿ ಸಮುದಾಯ ಕೆಲಸ ಮಾಡಬೇಕು. ಮಕ್ಕಳನ್ನು ಅವಮಾನ ಮಾಡಬಾರದು. ಇಂದಿನ ಮಕ್ಕಳು ಸಂಕುಚಿತ ಮನೋಭಾವದವರು. ಸಣ್ಣ ಸಣ್ಣ ವಿಷಯಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅವರಿಗೆ ಅವಕಾಶ ನೀಡಿ ಎಂದರು.

ಬ್ರಾಹ್ಮಣ ಸಮುದಾಯದಲ್ಲಿ ಬಡತನ ಹೆಚ್ಚಿದೆ. ಹಾಗೇ ಕೋಟಿ ಕೋಟಿ ಒಡೆಯರು ಇದ್ದಾರೆ. ಉಳ್ಳವರು ಸಮುದಾಯದ ಬಡ ಮಕ್ಕಳಿಗೆ, ಹಳ್ಳಿಯಲ್ಲಿ ಅರ್ಚಕರಾಗಿ ಕೆಲಸ ಮಾಡುವವರಿಗೆ, ಮದುವೆಯಲ್ಲಿ ತರಕಾರಿ ಕತ್ತರಿಸುವವರಿಗೆ ಸಹಾಯ ಮಾಡಿ. ಈ ವಿಷಯದಲ್ಲಿ ನಮ್ಮ ಸಮುದಾಯದವರು ಬೇರೆ ಸಮುದಾಯಗಳನ್ನು ನೋಡಿ ಪಾಠ ಕಲಿಯಬೇಕು. ಜೈನ ಸಮುದಾಯದವರು ಯಾರೂ ಬಡತನಕ್ಕೆ ಬೀಳದಂತೆ ಸಹಾಯ ಮಾಡಿ ಕೈ ಹಿಡಿಯುತ್ತಾರೆ. ಹಾಗೇ ನಾವು ಮಾಡಿ ಸಮುದಾಯದ ಸಂಖ್ಯೆ ಮತ್ತು ಸಂಘಟನೆ ಹೆಚ್ಚಿಸಬೇಕಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ಎನ್.ಎಂ.ನವೀನ್ ಕುಮಾರ್, ಭಾಸ್ಕರ್ ರಾವ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 35 ಮಂದಿ ವಿಪ್ರ ಸಾಧಕರನ್ನು ಸನ್ಮಾನಿಸಲಾಯಿತು.

ಛತ್ತೀಸ್‌ಗಢದಲ್ಲಿ ಭದ್ರತಾ ಪಡೆಗಳ ಎನ್‌ಕೌಂಟರ್‌ಗೆ ಐವರು ನಕ್ಸಲರು ಬಲಿ



ಬಿಜಾಪುರ, ಜೂ.7– ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯ ಇಂದ್ರಾವತಿ ರಾಷ್ಟ್ರೀಯ ಉದ್ಯಾನವನ ಪ್ರದೇಶದಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳೊಂದಿಗೆ ನಡೆದ ಎರಡು ಪ್ರತ್ಯೇಕ ಎನ್‌ಕೌಂಟರ್‌ಗಳಲ್ಲಿ ಐವರು ನಕ್ಸಲರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಕಳೆದ ಮೂರು ದಿನಗಳಲ್ಲಿ ಉನ್ನತ ನಕ್ಸಲ್ ನಾಯಕರಾದ ಸುಧಾಕರ್ ಮತ್ತು ಭಾಸ್ಕರ್ ಸೇರಿದಂತೆ ಏಳು ನಕ್ಸಲರನ್ನು ತಟಸ್ಥಗೊಳಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಜಿಲ್ಲೆಯ ಇಂದ್ರಾವತಿ ರಾಷ್ಟ್ರೀಯ ಉದ್ಯಾನವನ ಪ್ರದೇಶದಲ್ಲಿ ನಡೆಯುತ್ತಿರುವ ನಕ್ಸಲ್ ವಿರೋಧಿ ಕಾರ್ಯಾಚರಣೆಯ ಸಮಯದಲ್ಲಿ ಭದ್ರತಾ ಪಡೆಗಳು ಏಳು ಮಾವೋವಾದಿಗಳ ಶವಗಳನ್ನು ವಶಪಡಿಸಿಕೊಂಡಿವೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶನಿವಾರ ಗುಂಡಿನ ಚಕಮಕಿಯ ನಂತರ ಎರಡು ಶವಗಳನ್ನು ವಶಪಡಿಸಿಕೊಳ್ಳಲಾಗಿದೆ. ಆದರೆ, ಶುಕ್ರವಾರ ಮಧ್ಯರಾತ್ರಿ ನಡೆದ ಗುಂಡಿನ ಚಕಮಕಿಯ ನಂತರ ಮೂರು ಶವಗಳು ಪತ್ತೆಯಾಗಿವೆ ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ಉದ್ಯಾನದಲ್ಲಿ ಹಿರಿಯ ನಕ್ಸಲ್ ನಾಯಕರೊಬ್ಬರು ಅಡಗಿರುವ ಮಾಹಿತಿ ಪಡೆದುಕೊಂಡ ಬಳಿಕ ಜಿಲ್ಲಾ ಮೀಸಲು ಪಡೆ ಕೋಬ್ರಾ (ಕಮಾಂಡೋ ಬೆಟಾಲಿಯನ್) ಮತ್ತು ವಿಶೇಷ ಕಾರ್ಯಪಡೆ ಒಳಗೊಂಡ ಜಂಟಿ ತಂಡ ಗುರುವಾರದಿಂದ ಶೋಧ ಕಾರ್ಯಾಚರಣೆ ನಡೆಸುತ್ತಿತ್ತು.

25–26 ನೇ ಸಾಲಿನ ವಿವಿಧ ವೃತ್ತಿಗಳ ಖಾಲಿ ಸ್ಥಾನಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜೂ.7– ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ) ಎನ್ ಆರ್ ಮೊಹಲ್ಲಾ ಮೈಸೂರು –07 ಇಲ್ಲಿನ 2025–26ನೇ ಸಾಲಿನ ವಿವಿಧ ವೃತ್ತಿಗಳ ಖಾಲಿ ಸ್ಥಾನಗಳಿಗೆ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಹಾಗೂ 8ನೇ ತರಗತಿ ಪಾಸಾದ (10 ನೇ ತರಗತಿ ಫೇಲ್ ಆದ ಅಭ್ಯರ್ಥಿಗಳು) ವೆಲ್ಡರ್ ವೃತ್ತಿಗೆ ಅವಕಾಶವಿರುತ್ತದೆ. ಮೆರಿಟ್ ಆಧಾರದಲ್ಲಿ ಪ್ರಾಚಾರ್ಯರ ಹಂತದಲ್ಲಿಯೇ ಆಫ್ ಲೈನ್ (ನೇರ ಪ್ರವೇಶ) ಪ್ರವೇಶ ನಡೆಯಲಿದೆ. ಆಸಕ್ತ ಅಭ್ಯರ್ಥಿಗಳಿಗೆ ಐಟಿಐ ಗೆ ನೇರವಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಎನ್ ಆರ್ ಮೊಹಲ್ಲಾ ಮೈಸೂರು –07 ನ್ನು ನೇರವಾಗಿ ಅಥವಾ ದೂರವಾಣಿ ಸಂ: 0821–2498456 / 9945616088 ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ದರ್ಜೆ –1 ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನ ವೀರಶೈವ ಲಿಂಗಾಯತ ಭವನಕ್ಕೆ

ಮಹಾಸಭಾದ ರಾಷ್ಟ್ರೀಯ ಘಟಕದಿಂದ ಕೋಟಿ ರೂ. ನೆರವು



ಮೈಸೂರಿನ ಗನ್‌ಹೌಸ್ ಬಳಿಯಿರುವ ಬಸವಣ್ಣನವರ ಪ್ರತಿಮೆ ಬಳಿ ಇರುವ ವೀರಶೈವ ಲಿಂಗಾಯತ ಮಹಾಸಭಾ ಕಚೇರಿಗೆ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಆಗಮಿಸಿ, ಮೈಸೂರಲ್ಲಿ ನಿರ್ಮಿಸಲುದ್ದೇಶಿಸಿರುವ ವೀರಶೈವ ಲಿಂಗಾಯತ ಭವನಕ್ಕೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ 1 ಕೋಟಿ ರೂ. ಮೊತ್ತದ ಚೆಕ್ ವಿತರಿಸಿದರು.

ಮೈಸೂರು,ಜೂ.7(ಎಂಟಿವೈ)– ಮೈಸೂರಲ್ಲಿ ನಿರ್ಮಿಸಲುದ್ದೇಶಿಸಿರುವ ವೀರಶೈವ ಲಿಂಗಾಯತ ಭವನ ನಿರ್ಮಾಣಕ್ಕೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ 1 ಕೋಟಿ ರೂ. ಆರ್ಥಿಕ ನೆರವು ನೀಡಿದ್ದು, ಶನಿವಾರ ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿಯೂ ಆದ ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಚೆಕ್ ಹಸ್ತಾಂತರಿಸಿದರು.


ಮೈಸೂರಿನ ಗನ್‌ಹೌಸ್ ಬಳಿಯಿರುವ ಬಸವಣ್ಣನವರ ಪ್ರತಿಮೆ ಬಳಿ ಇರುವ ವೀರಶೈವ ಲಿಂಗಾಯತ ಮಹಾಸಭಾ ಕಚೇರಿಗೆ ಇಂದು ಮಧ್ಯಾಹ್ನ ಆಗಮಿಸಿದ ಸಚಿವ ಈಶ್ವರ್ ಬಿ.ಖಂಡ್ರೆ ವೀರಶೈವ ಲಿಂಗಾಯತ ಮಹಾಸಭಾ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ, ಭವನದ ನೀಲನಕ್ಷೆ ಪರಿಶೀಲಿಸಿದರು. ಬಳಿಕ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ 1 ಕೋಟಿ ರೂ. ಚೆಕ್ ವಿತರಿಸಿದರು.

ಇದೇ ವೇಳೆ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಮೈಸೂರಲ್ಲಿ ನಿರ್ಮಿಸಲು ಉದ್ದೇಶಿಸಿರುವ ವೀರಶೈವ ಲಿಂಗಾಯತ ಭವನ ಸುಸಜ್ಜಿತವಾಗಿ ಮೂಡಿಬರಬೇಕು. ಸ್ವಲ್ಪವೂ ಸ್ಥಳ ಪೋಲಾಗದಂತೆ ನೀಲನಕ್ಷೆ ತಯಾರಿಸಿ, ಭವನ ನಿರ್ಮಿಸಬೇಕು. ಮಹಾಸಭಾ ನೀಡಿರುವ ಒಂದು ಕೋಟಿ ರೂ.ನಲ್ಲಿ 50 ಲಕ್ಷ ರೂ.ಗಳನ್ನು ಕಟ್ಟಡ ನಿರ್ಮಾಣಕ್ಕೆ ಬಳಸಬೇಕು. ಉಳಿದ 50 ಲಕ್ಷ ರೂ. ಹಾಗೂ ಸದಸ್ಯತ್ವ ಮೊತ್ತದ ಶೇ.90 ರಷ್ಟನ್ನು ನಿಯಮಾನುಸಾರ ಬಡ್ಡಿ ರಹಿತ ಸಾಲವಾಗಿ ನೀಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ರಾಜ್ಯದಾದ್ಯಂತ ಭವನ ನಿರ್ಮಾಣಕ್ಕೆ ಮಹಾಸಭಾದ ಜಿಲ್ಲಾ ಘಟಕಗಳಿಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಆರ್ಥಿಕ ನೆರವು ನೀಡುತ್ತಿದೆ. ಆ ಹಣ ಸದುಪಯೋಗವಾಗಬೇಕು. ಎಲ್ಲಾ ಕಡೆಯೂ ಆದಷ್ಟು ತ್ವರಿತಗತಿಯಲ್ಲಿ ವೀರಶೈವ ಲಿಂಗಾಯತ ಭವನ ನಿರ್ಮಾಣವಾಗಬೇಕು ಎಂದು ಅಭಿಪ್ರಾಯಪಟ್ಟರು. ಇದೇ ವೇಳೆ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜ್ ಹಾಗೂ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡರಿಗೆ 'ಆತಿಥ್ಯ ರತ್ನ' ಪ್ರಶಸ್ತಿ ಪ್ರದಾನ

ನನ್ನ ಹೋಟೆಲ್ ಉದ್ಯಮದ ಈ ಪ್ರಶಸ್ತಿ ನನಗೆ 'ಪದ್ಮಭೂಷಣ' ಪುರಸ್ಕಾರವಿದ್ದಂತೆ; ಗೌಡರ ಧನ್ಯತೆ



ಬೆಂಗಳೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ 70ನೇ ವಾರ್ಷಿಕೋತ್ಸವದ ಸಮಾರಂಭದಲ್ಲಿ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರಿಗೆ 'ಅತಿಥ್ಯ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜೂ.7– ಬೆಂಗಳೂರಿನ ಎಫ್‌ಕೆಸಿಸಿಐ ಸಭಾಂಗಣದಲ್ಲಿ ಇತ್ತೀಚಿಗೆ ನಡೆದ ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ 70ನೇ ವಾರ್ಷಿಕೋತ್ಸವದ ಸಮಾರಂಭದಲ್ಲಿ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರೂ ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಯೂ ಆಗಿರುವ ಸಿ.ನಾರಾಯಣಗೌಡ ಅವರಿಗೆ ಹೋಟೆಲ್ ಉದ್ಯಮ ಕ್ಷೇತ್ರದಲ್ಲಿ ರಾಜ್ಯಮಟ್ಟದ ಪ್ರತಿಷ್ಠಿತ 'ಅತಿಥ್ಯ ರತ್ನ 2025' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಕೆಲ ವರ್ಷಗಳಿಂದ ಸನ್ಮಾನ, ಪ್ರಶಸ್ತಿಗಳ ಗೀಳಿನಿಂದ ದೂರವಿದ್ದೆ. ಆದರೆ ನನ್ನ ಹೋಟೆಲ್ ಉದ್ಯಮ ಹಾಗೂ ಸಾಮಾಜಿಕ ಸೇವೆಯನ್ನು ಗುರುತಿಸಿ ಈ 'ಅತಿಥ್ಯ ರತ್ನ' ಸೇವಾ ಪ್ರಶಸ್ತಿಯನ್ನು ನೀಡಿರುವುದು, ಪದ್ಮಭೂಷಣ ಪುರಸ್ಕಾರವೇ ಸಿಕ್ಕಂತಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಕಾಯಕದಲ್ಲಿ ಆತ್ಮತೃಪ್ತಿ ಕಂಡುಕೊಂಡರೆ ಅದಕ್ಕಿಂತ ಖುಷಿ ಮತ್ತೊಂದಿಲ್ಲ. ಪ್ರಶಸ್ತಿ ನೀಡಿ ಗೌರವಿಸಿದ ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಧನ್ಯವಾದಗಳು. ಪ್ರೀತಿಯಿಂದ ನೀಡಿರುವ ಈ ಪ್ರಶಸ್ತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಈ ಪ್ರಶಸ್ತಿಯನ್ನು ನನ್ನ ಎಲ್ಲಾ ಹೋಟೆಲ್ ಉದ್ಯಮಿಗಳಿಗೆ ಸಮರ್ಪಿಸುತ್ತೇನೆ. ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಎದುರಿಸಿ, ಎದೆಗಾರಿಕೆಯಿಂದ ಮುನ್ನಡೆದಾಗ ಮಾತ್ರ ಗುರಿ ಮುಟ್ಟಿ, ಬಯಸಿದ್ದನ್ನು ಪಡೆಯಲು ಸಾಧ್ಯ. ಪ್ರೀತಿ ಜೊತೆಗೆ ವಿಶ್ವಾಸಪೂರ್ಣ ಹೆಜ್ಜೆ ನಮ್ಮ ಬದುಕಿನ ದಿಕ್ಕನ್ನೇ ಬದಲಿಸುತ್ತದೆ. ಇದನ್ನು ಯುವ ಉದ್ಯಮಿಗಳು ಮನದಟ್ಟು ಮಾಡಿಕೊಂಡು ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ಹೋಟೆಲ್ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿಶಾಸ್ತ್ರಿ ಮಾತನಾಡಿ, ಸಮಾಜಕ್ಕೆ ತನ್ನಿಂದ ಏನನ್ನಾದರೂ ಕೊಡಬೇಕು ಎನ್ನುವ ತುಡಿತವೇ ಸಾಧನೆಯ ಮೊದಲ ಮೆಟ್ಟಿಲು. ಓರ್ವ ಸಾಧಕನ ಹಿಂದೆ ಕಠಿಣ ಪರಿಶ್ರಮ ವಿರುತ್ತದೆ. ಶ್ರಮ, ಸಂಸ್ಕೃತಿಯ ಜೊತೆಗೆ ಇತರರನ್ನು ಗೌರವಿಸುವ ಉದಾರ ಗುಣ ಸಂಪನ್ನರಾದ ನಾರಾಯಣಗೌಡ ಅವರಿಗೆ ಪ್ರಶಸ್ತಿ ಸಂದಿರುವುದು ಇಡೀ ಹೋಟೆಲ್ ಉದ್ಯಮಿಗಳಿಗೆ ಹೆಮ್ಮೆ ತಂದಿದೆ. ಮೈಸೂರು ಜಿಲ್ಲೆ ಹಾಗೂ ಸುತ್ತಮುತ್ತಲಿನ ಹಲವರಿಗೆ ಉದ್ಯೋಗ ಒದಗಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರ ಸೇವಾಕಾರ್ಯಕ್ಕೆ ಇನ್ನಷ್ಟು ಪ್ರಶಸ್ತಿ–ಪುರಸ್ಕಾರಗಳು ಸಲ್ಲುವಂತಾಗಲಿ ಎಂದು ಹಾರೈಸಿದರು.

ಶ್ರೀ ಆದಿಚುಂಚನಗಿರಿ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಮಾಜಿ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್, ಕರ್ನಾಟಕ ರಾಜ್ಯ ಹೋಟೆಲ್ ಗಳ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಶಾಸಕ ಉದಯ್ ಹುಟ್ಟುಹಬ್ಬದ ಅಂಗವಾಗಿ ಇಂದು ಪ್ರತಿಭಾ ಪುರಸ್ಕಾರ, ಅಭಿನಂದನೆ, ಮನರಂಜನಾ ಕಾರ್ಯಕ್ರಮ



ಮದ್ದೂರು, ಜೂ.7–ಮದ್ದೂರು ಕ್ಷೇತ್ರದ ಶಾಸಕ ಕೆ.ಎಂ. ಉದಯ ಅವರ 51ನೇ ವರ್ಷದ ಜನ್ಮದಿನದ ಅಂಗವಾಗಿ ಭಾನುವಾರ ಪಟ್ಟಣದ ಸರಕಾರಿ ಕ್ರೀಡಾಂಗಣದಲ್ಲಿ ಪ್ರತಿಭಾ ಪುರಸ್ಕಾರ, ಅಭಿನಂದನೆ, ಹಾಗೂ ಮನರಂಜನಾ ಕಾರ್ಯಕ್ರಮ ಆಯೋಜಿಸಿರುವುದಾಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಲುವರಾಜು ತಿಳಿಸಿದರು.

ಪಟ್ಟಣದ ಸರಕಾರಿ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ಸಂಬಂಧ ಏರ್ಪಡಿಸಿರುವ ಬೃಹತ್ ವೇದಿಕೆ ನಿರ್ಮಾಣ ಕಾಮಗಾರಿ ಪರಿಶೀಲಿಸಿ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಕೆ.ಎಂ.ಉದಯ ಅವರ ಹುಟ್ಟುಹಬ್ಬದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿರುವುದಾಗಿ ತಿಳಿಸಿದರು.

ಭಾನುವಾರ ಸಂಜೆ 6 ಗಂಟೆಗೆ ಆಯೋಜಿಸಿರುವ ವೇದಿಕೆ ಕಾರ್ಯಕ್ರಮದ ವೇಳೆ ಖ್ಯಾತ ಚಲನಚಿತ್ರ, ಸಂಗೀತ ನಿರ್ದೇಶಕ ಗುರುಕಿರಣ್ ಮತ್ತು ತಂಡದವರಿಂದ ಚಲನಚಿತ್ರ ಗೀತಗಾಯನ ಕಾರ್ಯಕ್ರಮ ನೆರವೇರಲಿದ್ದು, ಉದಯೋನ್ಮುಖ ಕಲಾವಿದರು ಭಾಗವಹಿಸಲಿರುವುದಾಗಿ ವಿವರಿಸಿದರು.

ಅಭಿನಂದನೆ: ಕಳೆದ ಸಾಲಿನ ಪಿಯುಸಿ ಮತ್ತು ಎಸ್ಎಸ್ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಮದ್ದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಿವಾಸಿಗಳ ಪೈಕಿ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸದಸ್ಯರು ಅಥವಾ ಅವರ ಕುಟುಂಬ ವರ್ಗದವರನ್ನು ಕಾರ್ಯಕ್ರಮದ ವೇಳೆ ಅಭಿನಂದಿಸಿ ಗೌರವಿಸುವುದಾಗಿ ತಿಳಿಸಿದರು.

ಪಠ್ಯ ಪರಿಕರಗಳ ವಿತರಣೆ: ವರ್ಷಂಪ್ರತಿ ನಡೆದು ಬಂದಿರುವ ಸರಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಅಗತ್ಯವಿರುವ ಪಠ್ಯೇತರ ಪರಿಕರಗಳು ಮತ್ತು ವಿದ್ಯಾರ್ಥಿಗಳಿಗೆ ಅಗತ್ಯವಿರುವ ಬ್ಯಾಗ್ ಸೇರಿದಂತೆ ಇತರೆ ವಸ್ತುಗಳನ್ನು ಕದಲೂರು ಕೆ.ಎಂ.ಉದಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಜೂ.9ರ ಸೋಮವಾರದಿಂದ ಎಲ್ಲಾ ಸರಕಾರಿ ಶಾಲೆಗಳಿಗೂ ವಿತರಿಸುವುದಾಗಿ ತಿಳಿಸಿದರು.

ಕಾರ್ಯಕ್ರಮಕ್ಕೆ ತಾಲೂಕಿನ ವಿವಿಧ ಗ್ರಾಮಗಳಿಂದ 9 ರಿಂದ 10 ಸಾವಿರ ಮಂದಿ ಆಗಮಿಸುವ ನಿರೀಕ್ಷೆಯಿದ್ದು ವೇದಿಕೆಯಲ್ಲಿ ಶಾಸಕ ಕೆ.ಎಂ.ಉದಯ ಅವರನ್ನು ಅಭಿನಂದಿಸಿ ಗೌರವಿಸುವ ಕುರಿತು ವಿವರಣೆ ನೀಡಿದರು.

ಈ ವೇಳೆ ಭಾರತಿನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೀವ್, ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಆರ್.ಮೋಹನ್‌ಕುಮಾರ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಅಜ್ಜಹಳ್ಳಿ ರಾಮಕೃಷ್ಣ, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ. ಸಂದರ್ಶ, ಮನ್‌ಮುಲ್ ನಿರ್ದೇಶಕ ಹರೀಶ್‌ಬಾಬು, ಸೋಮನಹಳ್ಳಿ ವಿಎಸ್‌ಎಸ್. ಎನ್.ಬಿ ಅಧ್ಯಕ್ಷ ಸಿ.ಟಿ.ಶಂಕರ್, ಪುರಸಭೆ ಅಧ್ಯಕ್ಷೆ ಕೋಕಿಲಾಅರುಣ್, ಉಪಾಧ್ಯಕ್ಷ ಟಿ.ಆರ್.ಪ್ರಸನ್ನಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ಡಿ.ಮಹಾಲಿಂಗಯ್ಯ, ಪುರಸಭಾ ಸದಸ್ಯರಾದ ಸಚಿನ್, ವೆಂಕಟೇಶ್, ಬಸವರಾಜು, ಮಾಜಿ ಸದಸ್ಯ ಮಹೇಶ್, ರಘು, ಟಿಎಪಿಸಿಎಂಎಸ್ ಉಪಾಧ್ಯಕ್ಷರಾಘವ ಇದ್ದರು.

ತಾಯಿತನದ ಸಾಹಿತ್ಯ ಹುಟ್ಟಬೇಕಿದೆ

ಮಂಡ್ಯ: ಇಂದಿನ ದಿನಗಳಲ್ಲಿ ತಾಯಿತನದ ಸಾಹಿತ್ಯ ಹುಟ್ಟಬೇಕಿದೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಹೇಳಿದರು.

ನಗರದಲ್ಲಿರುವ ಕರ್ನಾಟಕ ಸಂಘದ ಕೆವಿಎಸ್‌ಎಸ್ ಭವನದಲ್ಲಿ ದಲಿತ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ ಆಯೋಜಿಸಿದ್ದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮದಿನ ಆಚರಣೆ–ದಲಿತ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ ಲೋಕಾರ್ಪಣೆ–ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬುದ್ಧ ಬಸವ ಅಂಬೇಡ್ಕರ್ ಬದುಕಿರುವುದೇ ದಲಿತತ್ವದಲ್ಲಿಯೇ ಹೊರತು ಇನ್ನಾವುದರಲ್ಲಿಯೂ ಇಲ್ಲ, ಇಂದಿನ ವಿದ್ಯಮಾನಗಳ ದಿನಗಳಲ್ಲಿ ತಾಯಿತನದ ಸಾಹಿತ್ಯ ಹುಟ್ಟಿ, ಬೇರುಮಟ್ಟದಿಂದ ಹೂ ಮಟ್ಟದವರೆಗೂ ತಲುಪಬೇಕಿದೆ ಎಂದು ನುಡಿದರು.

ಅಗತ್ಯವಾಗಿರುವುದನ್ನು ತಿರಸ್ಕಾರ ಮಾಡುತ್ತಿದ್ದೇವೆ, ಈ ದೇಶದ ದೊಡ್ಡ ಅವಘಡ ಎಂದರೆ ಅಪಘಾತ ಅಲ್ಲ, ಮಾನಸಿಕ ಅವಘಡಗಳು ಕೂಡ ಪ್ರಮಾದವಾಗುತ್ತಿವೆ, ದೇಶ–ಕೋಶಕ್ಕೂ ನಮಗೂ ಸಂಬಂಧ ಇದೆ ಎಂದು ಭಾವಿಸಬೇಕು, ನಮ್ಮನ್ನು ಬಿಟ್ಟು ದೇಶವಿಲ್ಲ, ದೇಶಬಿಟ್ಟು ನಾವಿಲ್ಲ ಅಂದುಕೊಂಡಾಗ ಮಾತ್ರ ಭಯ, ಪ್ರೀತಿಗಳು ಹುಟ್ಟಲಿಕ್ಕೆ ಸಾಧ್ಯವಿದೆ, ಇದ್ದರಿಂದ ಅದು ಸ್ಮಶಾನಕ್ಕೆ ಸಮಾನ ಎಂದು ಅಭಿಪ್ರಾಯಪಟ್ಟರು.



ಮಂಡ್ಯದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಭಾರತದೇಶದ ಬೆಳಕಾದ ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ನೆನೆಯದೇ ಯಾವುದೂ ನಡೆಯದು, ಅಮ್ಮನಿಲ್ಲ ಮನೆ ಹೇಗಿದೆಯೋ ಹಾಗೇ ಅಂಬೇಡ್ಕರ್ ವಿಚಾರ ಇಲ್ಲದ ದೇಶವು ಅನಾಥವಾಗುತ್ತದೆ, ಅವರ ಸತ್ವವನ್ನು ಸಾರ್ವತ್ರೀಕರಣ ಮಾಡಬೇಕಿದೆ ಎಂದರು.

ಬಳಿಕ ಮಾತನಾಡಿದ ರಂಗತಜ್ಞ ಡಾ.ರಾಜಪ್ಪದಳವಾಯಿ, 1874ರಲ್ಲಿ ಭಾರತದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಮೀಸಲಾತಿ ನೀಡಿದ ಕೀರ್ತಿ ನಾಲ್ವಡಿಕೃಷ್ಣರಾಜ ಒಡೆಯರ್‌ಗೆ ಸಲ್ಲುತ್ತದೆ, ಇಂದು ಶೇ.3 ರಷ್ಟು ಜನಸಂಖ್ಯೆಯಿರುವವರಿಗೆ ಶೇ.10ರಷ್ಟು ಮೀಸಲಾತಿ ನೀಡಲಾಗಿದೆ ಇದು ಅವೈಜ್ಞಾನಿಕ, ಇಂದಿನ ದಿನಗಳಲ್ಲಿ ನಡೆಯುತ್ತಿರುವ ರಾಜಕೀಯ ಎಂದು ಎಚ್ಚರಿಸಿದರು. ಇಂದಿನ ದಿನಗಳಲ್ಲಿ ಎಲ್ಲಾ ಜಾತಿಯವರಿಗೂ ಮೀಸಲಾತಿ ಇದೆ. ಅದು ಎಸ್ಸಿ ಎಸ್ಟಿಗಳಿಂದ ಮೀಸಲಾತಿ ಇದೆ ಎಂದುಕೊಂಡಿರುವುದು ಅಜ್ಞಾನ, ದಲಿತ ಸಾಹಿತ್ಯ ಪರಿಷತ್ ಉತ್ತಮ ಕಾರ್ಯಮಾಡಲಿ, ಕಸಾಪ ರಾಜ್ಯಾಧ್ಯಕ್ಷರ ಸ್ಥಾನ ಬದಲಿಸಲು ಹೋರಾಟ ಶುರುವಾಗಿದೆ, ಇದು ನಡೆಯುತ್ತಿರುವುದು ನಡೆಯಲಿ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕಿ ಮಲ್ಲಾಜಮ್ಮ, ನಿವೃತ್ತ ಪ್ರಾಂಶುಪಾಲ ಪ್ರೊ.ಹುಲ್ಕೆರೆ ಮಹದೇವ್, ನಿವೃತ್ತ ಪ್ರಾಂಶುಪಾಲ ಪ್ರೊ. ಬಿ.ಎಸ್.ಚಂದ್ರಶೇಖರನ್, ನಗರಸಭೆ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ, ನಿವೃತ್ತ ಉಪನ್ಯಾಸಕ ಗುರುಮೂರ್ತಿ, ದಸಾಪ ವಿಭಾಗೀಯ ಸಂಯೋಜಕ ಡಾ.ಚಂದ್ರಗುಪ್ತ ಸಾಧಕರಾದ ರಾಮದೇವರಾಕೆ, ಗಾಯಕ ಹುರುಗಲವಾಡಿರಾಮಯ್ಯ, ಎನ್.ನಾಗರಾಜು, ಗಾಯಕಿ ಮಂಜುಳಾ, ಸಿ.ಎಂ.ನರಸಿಂಹಮೂರ್ತಿ ಹಾಜರಿದ್ದರು.

ಮದ್ದೂರಲ್ಲಿ ಮಹಿಳೆ ಅನುಮಾನಾಸ್ಪದ ಸಾವು



ಮದ್ದೂರು: ಪಟ್ಟಣದ ಚನ್ನೇಗೌಡ ಬಡಾವಣೆಯಲ್ಲಿ ಕಳೆದ ಒಂದು ವರ್ಷದಿಂದ ಬಾಡಿಗೆ ಮನೆಯಲ್ಲಿ ವಾಸವಿದ್ದ ಮಹಿಳೆಯೋರ್ವಳು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಸಂಬಂಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಶಾ (19) ಮೃತ ಮಹಿಳೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಕಾಮಗೆರೆ ಗ್ರಾಮದ ಚಂದನ್‌ಗೌಡ(24) ಮತ್ತು ಆಶಾ(19) ದಂಪತಿಗಳು ಮದ್ದೂರು ಪಟ್ಟಣದಲ್ಲಿ ಕಳೆದ ಒಂದು ವರ್ಷಗಳಿಂದ ವಾಸವಿದ್ದರೆನ್ನಲಾಗಿದೆ.

ಮೃತ ಆಶಾರವರಿಗೆ ಭಾನುವಾರ ಸೀಮಂತ ಕಾರ್ಯವನ್ನು ನಡೆಸಲು ತಯಾರಿ ಕೂಡ ನಡೆಸಲಾಗಿತ್ತು. ತುಂಬು ಗರ್ಭಿಣಿಯಾದ ಆಶಾ ವೇಲ್‌ನಿಂದ ಕುತ್ತಿಗೆಗೆ ಬಿಗಿದ ಸ್ಥಿತಿಯಲ್ಲಿ ಶವ ಕಂಡುಬಂದಿದ್ದು ಹೆಚ್ಚಿನ ವಿಚಾರಣೆಗಾಗಿ ಪತಿ ಚಂದನ್‌ಗೌಡನನ್ನು ವಶಕ್ಕೆ ಪಡೆದು ವಿಚಾರಣೆ ಕೈಗೊಂಡಿದ್ದಾರೆ ಎನ್ನಲಾಗಿದೆ.

ಪರಸ್ಪರ ಪ್ರೇಮಿಸಿ ವಿವಾಹವಾಗಿದ್ದ ಆಶಾ ತುಂಬು ಗರ್ಭಿಣಿಯಾಗಿದ್ದು, ಶನಿವಾರ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ವರದಿಯಾಗಿದ್ದು, ಮೃತಳ ತಾಯಿ ನೀಲಾ ನೀಡಿದ ದೂರಿನ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿದ ವೃತ್ತ ನಿರೀಕ್ಷಕ ಶಿವಕುಮಾರ್, ಪಿಎಸ್ಐ ಮಂಜುನಾಥ್ ಸ್ಥಳ ಪರಿಶೀಲನೆ ಬಳಿಕ ಪ್ರಕರಣ ದಾಖಲಿಸಿಕೊಂಡಿದ್ದಾರೆ.


ಬನ್ನಂಗಾಡಿ ಗ್ರಾಮದಲ್ಲಿ ಗ್ರಾಮದೇವತೆ ಶ್ರೀದಣ್ಣಮ್ಮ ದೇವಿಯ ಪ್ರತಿಷ್ಠಾಪನೆ

ಪಾಂಡವಪುರ, ಜೂ.7– ತಾಲೂಕಿನ ಬನ್ನಂಗಾಡಿ ಗ್ರಾಮದಲ್ಲಿ ಗ್ರಾಮದೇವತೆ ಶ್ರೀದಣ್ಣಮ್ಮ ದೇವಿಯ ಪ್ರತಿಷ್ಠಾಪನೆ ಕಾರ್ಯಕ್ರಮ ಗ್ರಾಮಸ್ಥರ ನೇತೃತ್ವದಲ್ಲಿ ವಿಜೃಂಭಣೆಯಿಂದ ಶುಕ್ರವಾರ ನಡೆಯಿತು.

ಗ್ರಾಮದ ಹೊರವಲಯದಲ್ಲಿ ದೇವಸ್ಥಾನದ ಕುಲಸ್ಥರು ಹಾಗೂ ಗ್ರಾಮಸ್ಥರೆಲ್ಲರು ಸೇರಿ ಗ್ರಾಮದೇವತೆ ಶ್ರೀದಣ್ಣಮ್ಮ ದೇವಿ ದೇವಸ್ಥಾನ ಹಾಗೂ ವಿಗ್ರಹ ಪ್ರತಿಷ್ಠಾಪನೆ ಮಾಡಲಾಗಿದ್ದು, ಕುಲಗುರುಗಳಾದ ಬೋಳೇನಹಳ್ಳಿ ಮಠದ ಶ್ರೀನಿಜಗುಣ ಒಡೆಯರ್ ನೇತೃತ್ವದಲ್ಲಿ ಪ್ರತಿಷ್ಠಾಪನೆಯನ್ನು ನೆರವೇರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ಗುರುವಾರ ರಾತ್ರಿಯಿಂದ ಶುಕ್ರವಾರ ಬೆಳಗ್ಗಿನವರೆಗೂ ಗಣಪತಿ ಹೋಮ, ಚಂಡಿಕಾ ಹೋಮ ಸೇರಿದಂತೆ ಹೋಮಹವನಗಳು ನಡೆದವು. ಬಳಿಕ ಶ್ರೀನಿಜಗುಣ ಒಡೆಯರ್ ನೇತೃತ್ವದಲ್ಲಿ ಪ್ರತಿಷ್ಠಾಪನೆಯನ್ನು ನೆರವೇರಿಸಲಾಯಿತು. ದೇವಸ್ಥಾನದ ಉದ್ಘಾಟನೆಯ ಅಂಗವಾಗಿ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು. ಬನ್ನಂಗಾಡಿ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ ಪ್ರಸಾದ ಸ್ವೀಕರಿದರು.

ಶ್ರೀನಿಜಗುಣ ಒಡೆಯರ್ ಸ್ವಾಮೀಜಿ ಮಾತನಾಡಿ, ಬನ್ನಂಗಾಡಿ ಗ್ರಾಮದಲ್ಲಿ ಗ್ರಾಮಸ್ಥರೆಲ್ಲ ಸೇರಿ ಗ್ರಾಮದೇವತೆ ಶ್ರೀದಣ್ಣಮ್ಮ ದೇವಿಯ ನೂತನ ದೇವಸ್ಥಾನ ಹಾಗೂ ವಿಗ್ರಹ ಪ್ರತಿಷ್ಠಾಪನೆ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನೆರವೇರಿಸಿದ್ದಾರೆ. ಗ್ರಾಮಗಳಲ್ಲಿ ದೇವಸ್ಥಾನಗಳು ನಿರ್ಮಾಣವಾಗುವುದರಿಂದ ಜನರದಲ್ಲಿ ಧಾರ್ಮಿಕ ಭಾವನೆ ಮೂಡುವ ಜೊತೆಗೆ ಮನಸ್ಸಿಗೆ ನೆಮ್ಮದಿ, ಪರಸ್ಪರ ಹೊಂದಾಣಿಕೆಗಳು ಬೆಳೆದು ಶಾಂತಿ ನೆಲೆಸುತ್ತದೆ ಎಂದು ತಿಳಿಸಿದರು.



ಶ್ರೀದಣ್ಣಮ್ಮದೇವಿ ನೂತನ ದೇವಸ್ಥಾನ ಹಾಗೂ ವಿಗ್ರಹ ಪ್ರತಿಷ್ಠಾಪನೆ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು.

ಈ ಸಂದರ್ಭದಲ್ಲಿ ಬನ್ನಂಗಾಡಿ ಗ್ರಾಮಸ್ಥರು, ಮುಖಂಡರು, ಯಜಮಾನರು, ಯುವಕರು ಪಾಲ್ಗೊಂಡಿದ್ದರು.

ಭಾರತೀಪುರ ಕ್ರಾಸ್ ಗ್ರಾ.ಪಂ. ಉಪಾಧ್ಯಕ್ಷರಾಗಿ ಕೃಷ್ಣವೇಣಿ ಜನಾರ್ಧನ್ ಅವಿರೋಧ ಆಯ್ಕೆ

ಕೆ.ಆರ್.ಪೇಟೆ, ಜೂ.7– ತಾಲೂಕಿನ ಭಾರತೀಪುರ ಕ್ರಾಸ್ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಸಿ.ಆರ್. ಕೃಷ್ಣವೇಣಿ ಜನಾರ್ಧನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷೆ ಮಂಜುಳ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆಯಲ್ಲಿ ಕೃಷ್ಣವೇಣಿ ಹೊರತುಪಡಿಸಿ ಬೇರೆ ಯಾವುದೇ ಸದಸ್ಯರು ನಾಮಪತ್ರ ಸಲ್ಲಿಸದೇ ಇರುವ ಕಾರಣ ಅವಿರೋಧ ಆಯ್ಕೆ ನಡೆಯಿತು.

ಚುನಾವಣಾಧಿಕಾರಿಯಾಗಿ ಹೇಮಾವತಿ ನೀರಾವರಿ ಇಲಾಖೆಯ ನಂ.3ರ ಕಾರ್ಯಪಾಲಕ ಇಂಜಿನಿಯರ್ ಚಂದ್ರೇಗೌಡ ಕಾರ್ಯನಿರ್ವಹಿಸಿದರು. ಸಹ ಚುನಾವಣಾಧಿಕಾರಿಗಳಾಗಿ ತಾ.ಪಂ. ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಓ ದಿನೇಶ್‌ಕುಮಾರ್.ಬಿ. ಅವರು ಕಾರ್ಯನಿರ್ವಹಣೆ ಮಾಡಿದರು.

ನೂತನ ಉಪಾಧ್ಯಕ್ಷೆ ಕೃಷ್ಣವೇಣಿ ಜನಾರ್ಧನ್ ಅವರನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎನ್.ಕುಮಾರ್, ಸದಸ್ಯರಾದ ಬಿ.ಕೆ.ಶಿವರಾಮು, ಬಿ.ಎಸ್.ಸುನಿಲ್, ಡಿ. ಕುಬೇರ, ಕೆ.ಕೆಂಪರಾಜು, ಗೌಡಪ್ಪ ಜಾನರಸಿಂಹ, ಹೆಚ್.ಟಿ.ದೇವಾಂಬ, ಲಕ್ಷ್ಮಮ್ಮ, ಹೆಚ್.ಕೆ.ಶಶಿಕಲಾ ಅಭಿನಂದಿಸಿದರು.

ಜೂ.10ರಂದು ನೇರ ಸಂದರ್ಶನ

ಮಂಡ್ಯ,ಜೂ.7– ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ವತಿಯಿಂದ ಹಾಗೂ ಮೆ. ಮೆಡ್ಲೇವ್ ಹೆಲ್ತ್ ಆಂಡ್ ಲೈಫ್ಸ್ಟೈಲ್ ಪ್ರೈ. ಲಿ., ಮೆ. ಬಜಾಜ್ ಫೈನಾನ್ಸ್ ಲಿಮಿಟೆಡ್ (ಆನ್ ಲೈನ್), ಮೆ. ಕೆ.ಎಸ್ ವರ್ಲ್ಡ್ ವೆಂಚರ್ಸ್ (ಆನ್ಲೈನ್) ಮತ್ತು ಮೆ. ಮನಿಫೀಸ್ಟ್ ರಾಯಲ್ ಪ್ರೈ. ಲಿ., ಸಂಸ್ಥೆಯಲ್ಲಿ ಖಾಲಿಯಿರುವ ಹುದ್ದೆಗಳಿಗಾಗಿ ಜೂ.10 ರಂದು ನೇರ ಸಂದರ್ಶನ ನಡೆಯಲಿದೆ. ಸಿ.ಆರ್.ಎಂ (ವರ್ಕ್ ಫ್ರಮ್ ಹೋಂ), ಸೇಲ್ಸ್ ಎಕ್ಸಿಕ್ಯೂಟಿವ್, ಬ್ರ್ಯಾಂಡ್ ಅಂಬಾಸಿಡರ್ ಫರ್ ವೈನ್ಸ್, ಫ್ರೂಂಸ್, ಕಾಸ್ಮಿಕ್ಸ್ ಖಾಲಿಯಿರುವ ಹುದ್ದೆಗಳಾಗಿದ್ದು ಆಸಕ್ತರು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ತಮ್ಮ ರೆಸ್ಯೂಮ್ ಹಾಗೂ ಬಯೋಡೇಟಾಗಳೊಂದಿಗೆ ನೇರಸಂದರ್ಶನಕ್ಕೆ ಹಾಜರಾಗಿ ಉದ್ಯೋಗ ಪಡೆಯಬಹುದಾಗಿದೆ. 18 ರಿಂದ 50 ವರ್ಷ ವಯೋಮಾನವುಳ್ಳ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232–295124/ 9164642684 ಅನ್ನು ಸಂಪರ್ಕಿಸಬಹುದು.

ಪಾಲಹಳ್ಳಿಯಲ್ಲಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ವಿತರಣ ನಾಲೆಗಳಾದ ಬೇವಿನ ತಾಳು ಮತ್ತು ಪೇಟೆ ಗದ್ದೆ ನಾಲೆಗಳನ್ನು 4.98 ಕೋಟಿ ವೆಚ್ಚದಲ್ಲಿ ಆಧುನೀಕರಣಗೊಳಿಸುವ ಕಾಮಗಾರಿಗೆ ಶಾಸಕ ರಮೇಶ್ ಬಂಡಿಸಿದ್ದೇಗೌಡ ಚಾಲನೆ ನೀಡಿದರು. ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್. ಚಂದ್ರಶೇಖರ್. ಪಿ.ಜಿ.ಗೋವಿಂದರಾಜು, ರಾಮೇಗೌಡ, ಗ್ರಾಪಂ ಅಧ್ಯಕ್ಷೆ ಜಯಲಕ್ಷ್ಮಿ ನಾರಾಯಣ ಮತ್ತು ಉಪಾಧ್ಯಕ್ಷೆ ಆಶಾ, ಕಾವೇರಿ ನೀರಾವರಿ ನಿಗಮದ ಇಇ ಜಯಂತ್, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಊರಿನ ಗ್ರಾಮಸ್ಥರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ರಾಜೀನಾಮೆ ಇಂಗಿತ

ವಿಜಯೋತ್ಸವ ರೋಡ್ ಶೋ ನಡೆದಿದ್ದೇ ಆಗಿದ್ದರೆ ಮುಂದಾಗಬಹುದಾಗಿದ್ದ ಘಟನೆಯನ್ನು ಊಹಿಸಲೂ ಸಾಧ್ಯವಿರಲಿಲ್ಲ ಎಂದು ವಿಶ್ಲೇಷಿಸಿದ್ದಾರೆ.

ಈ ಹಿಂದೆಯೂ ಬೆಳಗಾವಿಯ ಸುವರ್ಣಸೌಧದಲ್ಲಿ ಬಿಜೆಪಿ ಶಾಸಕ ಸಿ.ಟಿ.ರವಿ ಬಂಧನ, ನಂತರ ಅವರನ್ನು ರಾತ್ರಿಯಿಡೀ ಪೋಲಿಸರು ಸುತ್ತಾಡಿಸಿದ ವಿವರಗಳನ್ನು ಹಿರಿಯ ಅಧಿಕಾರಿಗಳು ನನಗೆ ತಿಳಿಸಿರಲಿಲ್ಲ. ಇದರಲ್ಲೂ ನಮ್ಮ ಸಹೋದ್ಯೋಗಿಗಳು ವಿಷಯ ಮರೆಮಾಚಿ ಪ್ರಕರಣ ನಡೆದ ಬಗ್ಗೆ ನನ್ನ ರಾಜೀನಾಮೆಯನ್ನೇ ಕೇಳಿದ್ದರು. ತಮ್ಮ ಹೆಸರು ಮುಖ್ಯಮಂತ್ರಿ ಸ್ಥಾನಕ್ಕೆ ಮುನ್ನೆಲೆಗೆ ಬಂದಾಗಲೆಲ್ಲಾ ಯಾವುದೋ ಪ್ರಕರಣ ಮುಂದೆ ಮಾಡಿ, ಅದಕ್ಕೆ ನನ್ನ ಹೆಸರು ಥಳಕು ಹಾಕಿ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ. ನನ್ನ ಶಿಕ್ಷಣ ಸಂಸ್ಥೆಗಳ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ದಾಳಿ ನಡೆಯಿತು. ಇದರ ಹಿಂದೆ ನಮ್ಮವರೇ ಇದ್ದಾರೆಂಬು ದಾಗಿ ವಿರೋಧ ಪಕ್ಷಗಳ ಮುಖಂಡರು ಹೇಳುತ್ತಾರೆ. ನನ್ನ ಇತಿಮಿತಿಯಲ್ಲಿ ಅಧಿಕಾರ ಚಲಾಯಿಸಿದ್ದೇನೆ. ಆದರೆ, ಯಾರದ್ದೋ ತಪ್ಪಿಗೆ ಕೆಲವು ಕಹಿ ಘಟನೆಗಳು ನಡೆದಿವೆ. ಅದರಲ್ಲಿ ಈಗ ಕಾಲ್ತುಳಿತ ಪ್ರಕರಣದಿಂದ 11 ಮಂದಿ ಮೃತಪಟ್ಟಿದ್ದಾರೆ. 50ಕ್ಕೂ ಹೆಚ್ಚು ಮಂದಿ ಗಾಯ ಗೊಂಡಿದ್ದಾರೆ. ಇದಕ್ಕೂ ನನಗೂ ಸಂಬಂಧವೇ ಇಲ್ಲ, ಆದರೂ, ಗೃಹ ಸಚಿವನಾಗಿ ನಾನು ನೈತಿಕ ಹೊಣೆ ಹೊರಬೇಕಿದೆ. ಹೇಗಿದ್ದರೂ ಸರ್ಕಾರ ಪ್ರತ್ಯೇಕ ತನಿಖೆಗಳಿಗೆ ಆದೇಶ ಮಾಡಿದೆ. ತನಿಖೆಯಿಂದ ಸತ್ಯ ಹೊರಬರಲಿದೆ. ವರದಿ ನಂತರ ನನ್ನನ್ನು ವಿರೋಧಿಸುವವರಿಗೆ ಸತ್ಯ ಏನೆಂಬುದು ತಿಳಿಯುತ್ತದೆ, ನನಗೆ ಅಧಿಕಾರದಲ್ಲಿ ಇರಲು ಆಸಕ್ತಿ ಇಲ್ಲವಾಗಿದೆ ಎಂದು ತಮ್ಮ ಆಪ್ತರ ಬಳಿ ಅಳಲು ತೋಡಿಕೊಂಡಿದ್ದಾರೆ. ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರೆ ಒಳ ಮೀಸಲಾತಿ ಸಮೀಕ್ಷೆ ಮೇಲೆ ಪರಿಣಾಮ ಬೀರುತ್ತದೆಯೇ ಎಂಬ ಬಗ್ಗೆಯೂ ಆಪ್ತರನ್ನು ಕೇಳಿದ್ದಾರೆ. ಕಳೆದ ಎರಡು ದಿನಗಳಿಂದ ಇದೇ ವಿಚಾರದಲ್ಲಿ ಮುಳುಗಿರುವ ಡಾ.ಪರಮೇಶ್ವರ್ ಏನು ನಿರ್ಧಾರ ಕೈಗೊಳ್ಳುತ್ತಾರೋ ಕಾದು ನೋಡಬೇಕಿದೆ.

ಶಂಕರ್, ಖಜಾಂಚಿ ಜೈರಾಂ ರಾಜೀನಾಮೆ

ಅನಿರೀಕ್ಷಿತ ದುರ್ಘಟನೆಯಲ್ಲಿ ನಮ್ಮ ಪಾತ್ರ ತುಂಬಾ ಸೀಮಿತವಾಗಿದೆ. ಆದರೂ ನಾವು ಆ ಘಟನೆಯ ನೈತಿಕ ಹೊಣೆ ಹೊರುತ್ತೇವೆ. ಹಾಗಾಗಿ ಕೆಎಸ್‌ಸಿಎ ಕಾರ್ಯದರ್ಶಿ ಮತ್ತು ಖಜಾಂಚಿ ಹುದ್ದೆಗಳಿಗೆ ನಾವು ರಾಜೀನಾಮೆ ಸಲ್ಲಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಈ ಇಬ್ಬರೂ ಬೆಂಗಳೂರಿನ ಖ್ಯಾತ ಆಡಿಟರ್‌ಗಳಾಗಿದ್ದು, ಇತ್ತೀಚೆಗೆ ಕೆಎಸ್‌ಸಿಎ ಪದಾಧಿಕಾರಿಗಳಾಗಿ 3 ವರ್ಷಗಳ ಅವಧಿಗೆ ನೇಮಕಗೊಂಡಿದ್ದರು. ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್, ಕಾರ್ಯದರ್ಶಿ ಶಂಕರ್ ಮತ್ತು ಖಜಾಂಚಿ ಜಯರಾಮ್ ಅವರು ಹೈಕೋರ್ಟ್‌ಗೆ ಪ್ರತಿಕ್ರಿಯೆ ನೀಡಿ, ಚಿನ್ನಸ್ವಾಮಿ ಸ್ಟೇಡಿಯಂನ ಗೇಟ್ ನಿರ್ವಹಣೆ ಮತ್ತು ಜನಸಂದಣಿ ನಿರ್ವಹಣೆ ಸಂಘದ ಜವಾಬ್ದಾರಿಯಲ್ಲ. ವಿಧಾನ ಸೌಧದಲ್ಲಿ ಆರ್‌ಸಿಬಿ ಐಪಿಎಲ್ ಆಚರಣೆಗಳನ್ನು ನಡೆಸಲು ಅನುಮತಿ ಕೋರಿದ್ದೆವು ಎಂದು ಹೇಳಿದ್ದಾರೆ. ವಿಧಾನಸೌಧದಲ್ಲಿ ನಡೆದ ಸನ್ಮಾನ ಸಮಾರಂಭವು ಯಾವುದೇ ಪ್ರಮುಖ ಅಡಚಣೆಗಳಿಲ್ಲದೆ ನಡೆದರೂ, ಚಿನ್ನಸ್ವಾಮಿ ಸ್ಟೇಡಿಯಂ ಹೊರಗೆ ಅವ್ಯವಸ್ಥೆ ಭುಗಿಲೆದ್ದಿತು, ಅಲ್ಲಿ ಆರ್‌ಸಿಬಿಯ ಸೋಷಿಯಲ್ ಮೀಡಿಯಾ ಪೇಜ್ ಅನ್ನು ಅನುಸರಿಸಿ ಲಕ್ಷಾಂತರ ಜನರು ಸೇರಿದ್ದರು. ಕೊನೆಗೆ ಪರೇಡ್ ರದ್ದಾದಾಗ ಸೋಷಿಯಲ್ ಮೀಡಿಯಾ ಪೇಜ್‌ನಿಂದ ಮೆಸೇಜ್ ಅನ್ನು ಅಳಿಸಿಹಾಕಲಾಗಿತ್ತು. ಆರ್‌ಸಿಬಿ ಆಟಗಾರರ ಯೋಜಿತ ವಿಜಯೋತ್ಸವ ಮೆರವಣಿಗೆಯನ್ನು ಕೊನೆ ಕ್ಷಣದಲ್ಲಿ ರದ್ದುಗೊಳಿಸಲಾಗಿತ್ತು. ಹೊರಗೆ ನಡೆದ ದುರಂತದ ಹೊರತಾಗಿಯೂ ಕ್ರೀಡಾಂಗಣದೊಳಗಿನ ಕಾರ್ಯಕ್ರಮ ಮುಂದುವರೆಯಿತು.

ದುರಂತಕ್ಕೂ ನನಗೂ ಸಂಬಂಧವಿಲ್ಲ

ಕಾರ್ಯಕ್ರಮ ಕುರಿತು ಜಾಲತಾಣದಲ್ಲಿ ಯಾರು ಪೋಸ್ಟ್ ಮಾಡಿದ್ದು, ಯಾರು ಈ ಕೃತ್ಯ ಎಸಗಿದರೆಂಬ ಬಗ್ಗೆ ಪೋಲಿಸರು ತನಿಖೆ ಆರಂಭಿಸಿದ್ದಾರೆ. ಸಿಐಡಿ ಅಧಿಕಾರಿಗಳು ಕಾಲ್ತುಳಿತ ಘಟನೆ ವೇಳೆ ಸ್ಥಳ ಮತ್ತು ಸುತ್ತಮುತ್ತಲ ಪ್ರದೇಶಗಳ ಪರಿಶೀಲನೆ ನಡೆಸಿದರು. ಈ ಮಧ್ಯೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಅಧ್ಯಕ್ಷ ಹಾಗೂ ಮಾಜಿ ಕ್ರಿಕೆಟಿಗ ರಘುರಾಮ್ ಭಟ್, ಕಾರ್ಯದರ್ಶಿ ಎ.ಶಂಕರ್ ಸೇರಿದಂತೆ ಕೆಲವರಿಗೆ ಸಿಐಡಿ ನೋಟಿಸ್ ನೀಡಿದೆ. ಸಂಸ್ಥೆ ಪದಾಧಿಕಾರಿ ಗಳು ನ್ಯಾಯಾ ಲಯದಿಂದ ಪ್ರಕರಣ ಸಂಬಂಧ ಸಂಭವನೀಯ ಬಂಧನದಿಂದ ವಿನಾಯಿತಿ ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ತನಿಖಾಧಿಕಾರಿಗಳು ಇವರನ್ನು ಘಟನೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ ಮಾಹಿತಿ ಪಡೆಯಬಹುದೇ ಹೊರತು ಬಂಧಿಸುವಂತಿಲ್ಲ.

ರಾಜ್ಯ ಸರ್ಕಾರ ಸಹಕರಿಸಬೇಕಷ್ಟೆ

ಕೇಂದ್ರಗಳಲ್ಲಿ ಪ್ರವಾಸಿ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ಕಾರಣಕ್ಕೆ ಎಲೆಕ್ಟ್ರಿಕ್ ಬಸ್‌ಗಳನ್ನು ಬಿಡುವ ಅಗತ್ಯವಿದ್ದು, ಅದಕ್ಕೆ ಕೂಡ ಕ್ರಮ ವಹಿಸಲಾಗಿದೆ ಎಂದು ಹೇಳಿದರು.

ಮೈಸೂರು ಮಹಾರಾಜರು, ಸರ್ ಎಂ.ವಿಶ್ವೇಶ್ವರಯ್ಯ ಹೆಸರು ಉಳಿಸುತ್ತೇವೆ: ಭದ್ರಾವತಿಯ ಸರ್ ಎಂ.ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಪುನಶ್ಚೇತನಕ್ಕೆ ಈಗಾಗಲೇ ಪ್ರಯತ್ನ ಮಾಡುತ್ತಿದ್ದೇವೆ. 15ರಿಂದ 18 ಸಾವಿರ ಕೋಟಿ ರೂಪಾಯಿ ವೆಚ್ಚ ಮಾಡಿ ಕಾರ್ಖಾನೆಯನ್ನು ಪುನರಾರಂಭಿಸಲಿದ್ದೇವೆ. ಆ ಮೂಲಕ ಮೈಸೂರು ಮಹಾರಾಜರು, ಸರ್ ಎಂ.ವಿಶ್ವೇಶ್ವರಯ್ಯ ಅವರ ಹೆಸರನ್ನು ನಾವು ಉಳಿಸುತ್ತೇವೆ. ಹಾಗೆಯೇ ಹೆಚ್‌ಎಂಟಿ ಉಳಿಸುವ ಪ್ರಯತ್ನಕ್ಕೂ ಕೈ ಹಾಕಿದ್ದೇವೆ. ಅದಕ್ಕೆ ರಾಜ್ಯ ಸರ್ಕಾರ ನಾನಾ ರೀತಿಯಲ್ಲಿ ಅಡ್ಡಿ ಮಾಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧಿಪತಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಶ್ರೀಮಠದ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಸಾಹಿತಿ ಪ್ರೊ.ಕೃಷ್ಣೇಗೌಡ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕ ಹೆಚ್.ಟಿ.ಮಂಜು, ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರ, ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್ (ನಾಗೇಶ್), ನಿವೃತ್ತ ಅಧಿಕಾರಿ ಡಾ.ರಾಜಣ್ಣ ಇನ್ನಿತರರು ಉಪಸ್ಥಿತರಿದ್ದರು.

ಧಮ್‌ಇದ್ರೆ ಸಿದ್ದರಾಮಯ್ಯ, ಡಿಕೆಶಿ ರಾಜೀನಾಮೆ ಪಡೆಯಿರಿ

ಬೆಂಗಳೂರು, ಜೂ.7–ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಸಂಭ್ರಮಾಚರಣೆ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕೈಗೆ ರಕ್ತ ಅಂಟಿದೆ ಎಂದು ಟೀಕಿಸಿದ್ದಾರೆ.

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಜೂನ್ 4 ರಂದು ನಡೆದ ಕಾಲ್ತುಳಿತದಲ್ಲಿ 11 ಜನರು ಸಾವನ್ನಪ್ಪಿದ್ದು, ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ನೇರ ಹೊಣೆಗಾರರಾಗಿದ್ದು, ಅವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಪೊಲೀಸ್ ಆಯುಕ್ತ ಬಿ. ದಯಾನಂದ ಮತ್ತು ಇತರ ನಾಲ್ವರು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಿದ್ದಕ್ಕಾಗಿ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಶೋಭಾ ಕರಂದ್ಲಾಜೆ, ಸತ್ಯ ಹೊರಬರಲು ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.



ಘಟನೆಯ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಮತ್ತು ಪಕ್ಷದ ನಾಯಕ ರಾಹುಲ್ ಗಾಂಧಿಯವರ ಮೌನವನ್ನು ಪ್ರಶ್ನಿಸಿದ ಶೋಭಾ ಕರಂದ್ಲಾಜೆ, ಧಮ್ ಇದ್ದರೆ ಸಿಎಂ ಮತ್ತು ಉಪಮುಖ್ಯಮಂತ್ರಿ ರಾಜೀನಾಮೆ ಪಡೆಯಲಿ ಎಂದು ಸವಾಲು ಹಾಕಿದರು.

ಕಾಲ್ತುಳಿತದಲ್ಲಿ ಮಕ್ಕಳನ್ನು ಕಳೆದುಕೊಂಡ ಪೋಷಕರು ಕಣ್ಣೀರು ಹಾಕ್ತಿದ್ದಾರೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವ'ಕುಮಾರ್ ಕೈಯಲ್ಲಿ ರಕ್ತ ಅಂಟಿದೆ. ತಮ್ಮ ಕೈಯಲ್ಲಿರುವ ರಕ್ತವನ್ನು ಪೊಲೀಸರ ಮೂತಿಗೆ ಒರೆಸ್ತಿದ್ದಾರೆ. ಒಬ್ಬ ಪ್ರಾಮಾಣಿಕ ಕಮಿಷನರ್ ಅನ್ನು ಸಸ್ಪೆಂಡ್ ಮಾಡಿದ್ದಾರೆ. ಬೆಂಗಳೂರಿನ ಇತಿಹಾಸದಲ್ಲೇ ಇದೊಂದು ಕಪ್ಪು ಚುಕ್ಕೆ ಎಂದು ಶೋಭಾ ಕರಂದ್ಲಾಜೆ ಕಿಡಿಕಾರಿದರು.

ಕಾಂಗ್ರೆಸ್ ಹೈಕಮಾಂಡ್‌ಗೆ ಕೇಂದ್ರ ಸಚಿವೆ ಶೋಭಾ ಸವಾಲು

ಕರ್ನಾಟಕ ಕಾಂಗ್ರೆಸ್ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಹೊರತುಪಡಿಸಿ ಬೇರೆ ನಾಯಕರಿಂದ ದಿವಾಳಿಯಾಗಿದೆಯೇ? ಈ ಇಬ್ಬರೂ ತನಿಖೆ ಎದುರಿಸಲಿ. ಇತರರನ್ನು ಸಿಎಂ ಮತ್ತು ಡಿಸಿಎಂ ಮಾಡಲಿ. ಕರ್ನಾಟಕ ಕಾಂಗ್ರೆಸ್ ಸರ್ಕಾರವು ದೆಹಲಿ ಹೈಕಮಾಂಡ್‌ಗೆ ಎಟಿಎಂ ಆಗಿರುವುದರಿಂದ ಈ ವಿಷಯದ ಬಗ್ಗೆ ಮೌನವಾಗಿದ್ದಾರೆ ಎಂದು ಆರೋಪಿಸಿದರು.

ಕಾಲ್ತುಳಿತ ಪ್ರಕರಣದಲ್ಲಿ ಸಿದ್ದು, ಡಿಕೆಶಿ, ಪರಂ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕು

ಮೈಸೂರಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಕಿಡಿನುಡಿ


ಭಾಸ್ಕರ್ ರಾವ್

ಮೈಸೂರು, ಜೂ.7 (ಆರ್‌ಕೆ)– ಆರ್‌ಸಿಬಿ ತಂಡದ ಗೆಲುವಿನ ವಿಜಯೋತ್ಸವ ಕಾರ್ಯಕ್ರಮದಲ್ಲಿ ಉಂಟಾದ ಕಾಲ್ತುಳಿತಕ್ಕೆ 11 ಮಂದಿ ಬಲಿಯಾದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹಾಗೂ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕು ಎಂದು ನಿವೃತ್ತ ಐಪಿಎಸ್ ಅಧಿಕಾರಿಯೂ ಆದ ಬಿಜೆಪಿ ಮುಖಂಡ ಭಾಸ್ಕರ್ ರಾವ್ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ತ್ಯಾಗರಾಜ ರಸ್ತೆಯ ಕಲ್ಯಾಣ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ತಮ್ಮ ನಿರ್ಲಕ್ಷ್ಯದಿಂದಾಗಿ ನಡೆದ ಘಟನೆಗೆ ಕೇಂದ್ರ ಸರ್ಕಾರ ನೀಡಿರುವ ಕಾನೂನನ್ನು ದುರುಪಯೋಗಪಡಿಸಿಕೊಂಡು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ ಎಂದು ಅವರು ತಿಳಿಸಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮೊದಲ ಅವಧಿಯಲ್ಲಿ ಬಹಳ ಸ್ಟ್ರಾಂಗ್ ಆಗಿದ್ದರು. ಈಗ ಸಂಪೂರ್ಣವಾಗಿ ಆ ದೃಢತೆಯನ್ನು ಕಳೆದುಕೊಂಡಿದ್ದಾರೆ. ತಪ್ಪು ಮಾಡಿರುವುದು ಯಾರೇ ಇರಲಿ ಕಾನೂನು ರೀತಿಯ ಕ್ರಮವಾಗಬೇಕು, ನಿಮಗೆ ಅಧಿಕಾರ ಕೊಟ್ಟಿರುವುದು ದಬ್ಬಾಳಿಕೆ ಮಾಡಿ ಎಂದಲ್ಲ ಎಂದು ಭಾಸ್ಕರ್ ರಾವ್ ಇದೇ ವೇಳೆ ನುಡಿದರು.

ಅಮಾನತು ಮಾಡಿರುವುದು ಕೇವಲ ದಯಾನಂದರಿಗೆ ಮಾತ್ರ ಸೀಮಿತವಲ್ಲ, ಇಡೀ ಪೊಲೀಸ್ ಇಲಾಖೆಗೆ ಮಾಡಿದ ಅವಮಾನ. ಆದರಿಂದ ಸಿದ್ದರಾಮಯ್ಯ ಪೊಲೀಸರ ನೈತಿಕ ಸ್ಥೈರ್ಯವನ್ನೇ ಕುಗ್ಗಿಸಿದ್ದಾರೆ ಎಂದರು.

ನೀವೇ ಮಾಡಿದ ತಪ್ಪಿಗೆ ದಯಾನಂದರನ್ನು ಅವಮಾನ ಮಾಡಿದ್ದೀರಿ. ಅವರ ಮೇಲೆ ನಿಮಗೆ ಕೋಪವಿದ್ದಿದ್ದರೆ ವರ್ಗಾವಣೆ ಮಾಡಬಹುದಿತ್ತು ಅಥವಾ ಕಡ್ಡಾಯ ರಜೆ ಮೇಲೆ ಕಳುಹಿಸಬಹುದಿತ್ತು. ಅದನ್ನು ಬಿಟ್ಟು ಒಬ್ಬ ನಿಷ್ಠಾವಂತ ಪೊಲೀಸ್ ಅಧಿಕಾರಿಯನ್ನು ಅಮಾನತು ಗೊಳಿಸಿರುವುದು ಸರಿಯಲ್ಲ ಎಂದರು.

ಐಪಿಎಲ್ ಏನು ರಾಜ್ಯ ಅಥವಾ ದೇಶದ ಪಂದ್ಯಾವಳಿನಾ? ಅದೊಂದು ಕ್ಲಬ್ ಪಂದ್ಯಾವಳಿ. ಅದಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೋಗಿದ್ದೇನು... ಟ್ರೋಫಿಗೆ ಮುತ್ತಿಕ್ಕಿದ್ದೇನು.... ಬಾವುಟ ಹಿಡಿದಿದ್ದೇನು ಇದೆಲ್ಲಾ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿಲ್ಲವೇ? ಎಂದು ಪ್ರಶ್ನಿಸಿದ ಭಾಸ್ಕರ್‌ರಾವ್, ಕಾಂಗ್ರೆಸ್ ಹೈಕಮಾಂಡ್ ಬಗ್ಗೆ ಗೌರವವಿದ್ದರೆ ಸಿಎಂ, ಡಿಸಿಎಂ, ಗೃಹ ಸಚಿವರನ್ನು ಅಧಿಕಾರದಿಂದ ಕೆಳಗಿಳಿಸಬೇಕು ಎಂದು ಒತ್ತಾಯಿಸಿದರು.

ಪಂದ್ಯ ಪ್ರಾರಂಭಕ್ಕೆ ಮೊದಲೇ ನಾವು ಗೆಲ್ತೇವೆ ಅಂತಾ ವಿಜಯೋತ್ಸವಕ್ಕೆ ಅನುಮತಿ ಕೇಳಿದ್ದ ಆರ್‌ಸಿಬಿ!

●ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಚ್ಚರಿ ಹೇಳಿಕೆ ●ಗೆಲ್ಲುತ್ತೇವೆ ಎಂದು ಆರ್‌ಸಿಬಿಗೆ ಕನಸು ಬಿದ್ದಿತ್ತೇ ಎಂದು ಪ್ರಶ್ನೆ ●ದುರಂತದ ಹೊಣೆ ಸಿಎಂ, ಡಿಸಿಎಂ, ಗೃಹ ಸಚಿವರು ಹೊರಲೇಬೇಕು



ಬೆಂಗಳೂರು, ಜೂ.7– ಫೈನಲ್ ಪಂದ್ಯ ಆರಂಭವಾಗುವುದಕ್ಕೆ ಮೊದಲೇ ಆರ್‌ಸಿಬಿ ಆಡಳಿತ ಮಂಡಳಿ ವಿಜಯೋತ್ಸವ ಮಾಡುತ್ತೇವೆ ಎಂದು ನಗರ ಪೊಲೀಸರಿಗೆ ಅರ್ಜಿ ಸಲ್ಲಿಸಿದ್ದ ಬಗ್ಗೆ ತೀವ್ರ ಅಚ್ಚರಿ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಗೆಲ್ಲುತ್ತೇವೆ ಎಂದು ಆರ್‌ಸಿಬಿ ತಂಡಕ್ಕೆ ಕನಸು ಬಿದ್ದಿತ್ತಾ ಎಂದು ಪ್ರಶ್ನಿಸಿದ್ದಾರೆ.

ಕಾಲ್ತುಳಿತ ಪ್ರಕರಣದ ಹಿನ್ನೆಲೆಯಲ್ಲಿ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಸಚಿವರು; ಅಹಮದಾಬಾದ್‌ನಲ್ಲಿ ಫೈನಲ್ ಪಂದ್ಯ ಆರಂಭವಾಗಿದ್ದು ಏಳೂವರೆ ಗಂಟೆಗೆ. ಇಲ್ಲಿ ನೋಡಿದರೆ ಆರು ಗಂಟೆಗೆಲ್ಲ ವಿಜಯೋತ್ಸವ ಮಾಡುತ್ತೇವೆ, ನಮಗೆ ಅನುಮತಿ ಕೊಡಿ ಎಂದು ಪೊಲೀಸರಿಗೆ ಆರ್‌ಸಿಬಿಯವರು ಅರ್ಜಿ ಕೊಡುತ್ತಾರೆ! ಅದೂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ಮಾಡುತ್ತೇವೆ ಎಂದು ಅರ್ಜಿ ಹಾಕಿದ್ದಾರೆ. ಇದು ಹೇಗೆ ಸಾಧ್ಯ? ಪಂದ್ಯ ಆರಂಭಕ್ಕೆ ಮೊದಲೇ ಆರ್‌ಸಿಬಿ ಆಡಳಿತ ಮಂಡಳಿಗೆ ತಮ್ಮ ತಂಡ ಗೆಲ್ಲುತ್ತದೆ ಎಂದು ಹೇಗೆ ಗೊತ್ತು? ಎಂದು ಸುದ್ದಿಗಾರರೊಂದಿಗೆ ಮಾತನಾಡುತ್ತ ಪ್ರಶ್ನಿಸಿದರು.

ನಾವು ಗೆಲ್ಲುತ್ತೇವೆ ಎಂದು ಇವರಿಗೇನು ಕನಸು ಬಿದ್ದಿತ್ತಾ? ಫೈನಲ್ ಗೆಲ್ತೀವಿ ಅಂತ ಮೊದಲೇ ಗೊತ್ತಿತ್ತಾ? ಇನ್ನು ಫೈನಲ್ ಮ್ಯಾಚ್ ಶುರುನೇ ಆಗದೇ ಇವರು ಅರ್ಜಿ ಕೊಡುತ್ತಾರೆ. ಇನ್ನೊಂದು ಅರ್ಜಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (DPR)ಗೆ ಕೊಟ್ಟು ವಿಧಾನಸೌಧದ ಮುಂಭಾಗದಲ್ಲಿ ಕಾರ್ಯಕ್ರಮ ಮಾಡೋಕೆ ಅವಕಾಶ ಕೊಡಿ ಎಂದು ಕೇಳುತ್ತಾರೆ. ಇದು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಈ ಎಲ್ಲಾ ಪತ್ರಗಳನ್ನು ಯಾರು ಬರೆದಿದ್ದರು, ಪಂದ್ಯ ಮುಗಿದ ಮರುದಿನ ಬೆಳಗ್ಗೆ 7.30ಕ್ಕೆ ಪೊಲೀಸ್ ಕಮೀಷನರ್ ಮೇಲೆ ಒತ್ತಡ ಹಾಕಿದ್ದು ಯಾರು ಎನ್ನುವುದು ಗೊತ್ತಿದೆ. ಅದನ್ನೇ ಹೇಳಿದ್ದೇನೆ. ನಾನು ವಾಸ್ತವಾಂಶ ತಿಳಿದು ಮಾತಾಡಿದ್ದೇನೆ. ಅಸೂಯೆಯಿಂದ, ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ನಾನು ಮಾತನಾಡಿಲ್ಲ ಎಂದು ಕೇಂದ್ರ ಸಚಿವರು ಸ್ಪಷ್ಟಪಡಿಸಿದರು.

ಸರ್ಕಾರಕ್ಕೆ ಕೊನೆಗೂ ಜ್ಞಾನೋದಯವಾಗಿದೆ: ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ಗೋವಿಂದ ರಾಜು ಅವರನ್ನು ಕಿತ್ತು ಹಾಕಿರುವುದು ಒಳ್ಳೆಯ ಕ್ರಮ ಎಂದು ಹೇಳಿದ ಕುಮಾರಸ್ವಾಮಿ, ಈ ಅಸೂಕ್ಷ್ಮ ಸರ್ಕಾರಕ್ಕೆ ಜ್ಞಾನೋದಯವಾಗಿರೋದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ, ಐವರು ಪೊಲೀಸ್ ಅಧಿಕಾರಿಗಳ ಅಮಾನತು ಮಾಡಿದ್ದು ಸರಿಯಲ್ಲ. ಈ ಅಮಾನತು ಅವಶ್ಯಕತೆ ಇರಲಿಲ್ಲ. ಈ ರೀತಿ ಸರ್ಕಾರ ನಡೆದುಕೊಂಡರೆ ಅಧಿಕಾರಿಗಳು ಕೆಲಸ ಮಾಡುವುದು ಸಾಧ್ಯವಿಲ್ಲ. ಅವರ ತಪ್ಪುಗಳನ್ನು ಮುಚ್ಚಿಕೊಳ್ಳೋಕೆ ಅಧಿಕಾರಿಗಳ ತಲೆದಂಡ ಮಾಡಿರುವುದು ಸರಿಯಲ್ಲ. ಸರ್ಕಾರ ಸೂಕ್ಷ್ಮವಾಗಿ ಯೋಚನೆ ಮಾಡಬೇಕಿತ್ತು. ಈ ಘಟನೆಯ ಮೂಲ ಕಾರಣಗಳೇ ಬೇರೆ. ಆ ಕಾರಣಗಳನ್ನು ಸರ್ಕಾರ ಮರೆಮಾಚುತ್ತಿದೆ ಎಂದು ಕುಮಾರಸ್ವಾಮಿ ಕಟುವಾಗಿ ಟೀಕಿಸಿದರು.

ಹೆಣದ ಮೇಲೆ ಬಿಜೆಪಿ–ಜೆಡಿಎಸ್ ರಾಜಕೀಯ ಮಾಡುತ್ತಿವೆ ಎಂದು ಸಿಎಂ, ಡಿಸಿಎಂ ಹೇಳಿಕೆಗಳ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಕೇಂದ್ರ ಸಚಿವರು; ಹೆಣದ ಮೇಲೆ ರಾಜಕೀಯ ಮಾಡುವ ಅವಶ್ಯಕತೆ ನಮಗೆ ಇಲ್ಲ. ಇದ್ದ ವಿಷಯವನ್ನೇ ನಾನು ಹೇಳಿದ್ದೇನೆ. ನನ್ನ ಮಿತ್ರ ಪಕ್ಷವೂ ಹೇಳಿದೆ. ನಡೆದಿರುವುದನ್ನು ಹೇಳಿದ್ದೇವೆ. ಇದರಲ್ಲಿ ರಾಜಕೀಯ ಏನಿದೆ? ಕ್ರೀಡಾಂಗಣದ ಮುಂದೆ ಮೃತದೇಹಗಳು ಬಿದ್ದ ಮೇಲೆಯೂ ಕ್ರೀಡಾಂಗಣಕ್ಕೆ ಹೋಗಿ ಕಪ್‌ಗೆ ಮುತ್ತಿಕ್ಕಿ ಶೋ ಮಾಡಿದ್ದು ಯಾರು? ಜನರೇ ಎಲ್ಲವನ್ನೂ ನೋಡಿದ್ದಾರೆ. ಮಾಧ್ಯಮಗಳು ಎಲ್ಲವನ್ನೂ ಪ್ರಸಾರ ಮಾಡಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

> **ಡಾ.ರಾಜ್ ಅವರ ನಿಧನದ ದಿನಕ್ಕೆ ಹೋಲಿಸುವುದು ಸರಿಯಲ್ಲ**
>
> "ವರನಟ ಡಾ.ರಾಜ್‌ಕುಮಾರ್ ಅವರ ನಿಧನದ ಸಂದರ್ಭದಲ್ಲಿ ಏನೇನು ನಡೆಯಿತು ಎನ್ನುವುದನ್ನು ಈಗಾಗಲೇ ಹೇಳಿದ್ದೇನೆ. ಈ ಸರ್ಕಾರ ಅಣ್ಣಾವ್ರ ನಿಧನದ ವಿಷಯ ಇಟ್ಟುಕೊಂಡು ಕಾಲ್ತುಳಿತ ಪ್ರಕರಣದಲ್ಲಿ ರಕ್ಷಣೆ ಪಡೆಯೋದು ಬೇಡ. ರಾಜ್‌ಕುಮಾರ್ ನಿಧನರಾದ ಸಂದರ್ಭದಲ್ಲಿ ಅಶಾಂತಿ ಉಂಟು ಮಾಡಲು ನಿರ್ದಿಷ್ಟವಾಗಿ ಕೆಲವರು ಪ್ರಯತ್ನಪಟ್ಟರು. ಸೀಮೆಎಣ್ಣೆ, ಪೆಟ್ರೋಲ್ ತಂದು ಬೆಂಗಳೂರು ನಗರದಲ್ಲಿ ಶಾಂತಿಯುತವಾಗಿ ನಡೆಯಬೇಕಿದ್ದ ವರನಟರ ಅಂತಿಮಯಾತ್ರೆ, ಅಂತ್ಯ ಸಂಸ್ಕಾರದಲ್ಲಿ ಅಶಾಂತಿ ಸೃಷ್ಟಿಸುವ ಕೆಲಸವನ್ನು ಕೆಲವರು ವ್ಯವಸ್ಥಿತವಾಗಿ ಮಾಡಿದರು. ಆಗ ಗೋಲಿಬಾರ್ ಆಯಿತು. ಇಬ್ಬರು ಸಾವನ್ನಪ್ಪಿದರು. ಅದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆ ಘಟನೆಗೂ ಕಾಲ್ತುಳಿತಕ್ಕೆ ಹೋಲಿಕೆ ಮಾಡಬಾರದು. –ಹೆಚ್.ಡಿ.ಕುಮಾರಸ್ವಾಮಿ

ಸಿಎಂ, ಡಿಸಿಎಂ, ಗೃಹ ಸಚಿವರೇ ಹೊಣೆ ಹೊರಬೇಕು: ಚಿನ್ನಸ್ವಾಮಿ ಕ್ರೀಡಾಂಗಣ ಕಾಲ್ತುಳಿತ ಪ್ರಕರಣದ ಸಂಪೂರ್ಣ ಹೊಣೆಯನ್ನು ಸಿಎಂ, ಡಿಸಿಎಂ, ಗೃಹ ಸಚಿವರೇ ತೆಗೆದುಕೊಳ್ಳಬೇಕು. ಈ ಮೂವರದು ಕೂಡ ತಪ್ಪಿದೆ. ಪಂದ್ಯ ಗೆದ್ದ 24 ಗಂಟೆ ಒಳಗೆ ಆತುರಾತುರವಾಗಿ ಸನ್ಮಾನ ಮಾಡೋದು ಏನಿತ್ತು? ಹೋಗಲಿ, ಸನ್ಮಾನವನ್ನಾದರೂ ಸರಿಯಾಗಿ ಮಾಡಿದ್ರಾ? ಕಾಟಾಚಾರಕ್ಕೆ ಮಾಡಿದರು. ಆಟಗಾರರನ್ನು ಕೂಡ ಸರಿಯಾಗಿ ನಡೆಸಿಕೊಳ್ಳಲಿಲ್ಲ. ಇವರು ಕೊಟ್ಟ ಶಾಲು, ಟ್ರೋಫಿ ಎಲ್ಲವನ್ನು ಅವರು ತಗೊಂಡು ಹೋದರೋ ಬಿಸಾಡಿ ಹೋದರೋ ಗೊತ್ತಿಲ್ಲ. ಈ ಪುರುಷಾರ್ಥಕ್ಕೆ ತರಾತುರಿಯಲ್ಲಿ ಕಾರ್ಯಕ್ರಮ ಬೇಕಿತ್ತಾ ಎಂದು ಕೇಂದ್ರ ಸಚಿವರು ಬೇಸರ ವ್ಯಕ್ತಪಡಿಸಿದರು.

ನೈತಿಕತೆ ಇದ್ದರೆ ಸಿಎಂ, ಡಿಸಿಎಂ, ಗೃಹ ಸಚಿವರು ರಾಜೀನಾಮೆ ಕೊಡಬೇಕು. ಈಗಿನ ಕಾಲದಲ್ಲಿ ನಾವು ರಾಜಕಾರಣಿಗಳು ಭಂಡರು ಅಂತ ತೋರಿಸಿಕೊಂಡಿದ್ದೇವೆ. ಅವರಿಂದ ರಾಜೀನಾಮೆ ನಿರೀಕ್ಷೆ ಮಾಡೋಕೆ ಆಗುವುದಿಲ್ಲ. ವಿರೋಧ ಪಕ್ಷವಾಗಿ ನಾವು ಒತ್ತಾಯ ಮಾಡಿದ್ದೇವೆ. ಹೆಣದ ಮೇಲೆ ರಾಜಕೀಯ ಮಾಡೋ ದುರ್ಗತಿ ನಮಗೆ ಬಂದಿಲ್ಲ. ಅದು ಬರೋದು ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸದನದಲ್ಲಿ ಎಲ್ಲರ ಕಾಲದಲ್ಲಿ ಆಗಿದ್ದು ಮಾತಾಡ್ತೀನಿ ಎಂಬ ಡಿಕೆಶಿ ಹೇಳಿಕೆ ವಿಚಾರಕ್ಕೆ ಲೇವಡಿ ಮಾಡಿದ ಸಚಿವರು; ಸದನದಲ್ಲಿ ಅವರು ಏನು ಮಾತನಾಡುತ್ತಾರೆ. ತಮ್ಮ ಬಳಿ ಏನು ದಾಖಲೆ ಇದೆ ಎನ್ನುವುದನ್ನು ಇಡಲಿ. ಹಿಂದೆ ನಡೆದ ಕಲಾಪಗಳಲ್ಲಿ ಅವರು ಏನೇನು ಮಾಡಿದ್ದರು ಎಂಬುದು ಗೊತ್ತಿದೆ. ಏನ್ ಸಾಧನೆ ಮಾಡಿದ್ದೀನಿ ಅಂತ ಸದನದಲ್ಲಿ ಮಾತಾಡ್ತಾರೆ. ಈ ಘಟನೆ ಬಿಡಿ ಎರಡು ವರ್ಷಗಳಲ್ಲಿ ಇವರ ಸಾಧನೆ ಏನು, ಬೆಂಗಳೂರು ನಗರಕ್ಕೆ, ರಾಜ್ಯಕ್ಕೆ ಇವರ ಕೊಡುಗೆ ಏನು ಎಂದು ಅವರು ಪ್ರಶ್ನಿಸಿದರು.

ದುರಂತದಲ್ಲಿ ಮೃತಪಟ್ಟವರಿಗೆ ಕಡಿಮೆ ಮೊತ್ತದ ಪರಿಹಾರ ನೀಡಲಾಗಿದೆ ಎಂದು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಸಚಿವರು; ಜೀವ ಕಳೆದುಕೊಂಡವರು ವಾಪಸ್ ಬರುವುದಿಲ್ಲ. ದುಡ್ಡಿನ ಮೇಲೆ ಜೀವಕ್ಕೆ ಬೆಲೆ ಕಟ್ಟಲು ಆಗಲ್ಲ. ಸರ್ಕಾರ ಅನೇಕ ಸಮಯದಲ್ಲಿ ವಿಶೇಷ ಪ್ರಕರಣ ಅಂತ ಪರಿಹಾರ ಕೊಟ್ಟಿದೆ. ಇದು ಸರ್ಕಾರವೇ ಎಸಗಿದ ತಪ್ಪು. ಕುಟುಂಬಗಳಿಗೆ ಆಗಿರುವ ದುಃಖವನ್ನು ನೀಗಿಸಲು ಸಾಧ್ಯವಿಲ್ಲ. ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸರ್ಕಾರ ಹೆಚ್ಚು ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಕೆ.ಎಸ್.ಶಿವರಾಮುಗೆ ಪ್ರಶಸ್ತಿ ಪ್ರದಾನ...



ಸಮಾಜ ಸೇವೆಯನ್ನು ಪರಿಗಣಿಸಿ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಅವರಿಗೆ ಮೈಸೂರು ಜಿಲ್ಲಾಡಳಿತದಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕನ್ನಡ–ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್‌ರೆಡ್ಡಿ, ಕನ್ನಡ–ಸಂಸ್ಕೃತಿ ಇಲಾಖೆ ಉಪನಿರ್ದೇಶಕ ಡಾ.ಸುದರ್ಶನ್ ಇನ್ನಿತರರು ಉಪಸ್ಥಿತರಿದ್ದರು.

ಛಲವಾದಿ ನಾರಾಯಣಸ್ವಾಮಿಗೆ ಸನ್ಮಾನ...



ವಿಧಾನಪರಿಷತ್ ವಿರೋಧ ಪಕ್ಷದ ನಾಯಕರೂ ಆದ ಬಿಜೆಪಿಯ ಕೋರ್ ಕಮಿಟಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅವರನ್ನು ಬೆಂಗಳೂರಿನಲ್ಲಿ ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಮೈಸೂರು ಪೇಟ ತೊಡಿಸಿ, ಸನ್ಮಾನಿಸಿದರು. ಈ ವೇಳೆ ಮಾಜಿ ಸಚಿವ ಎನ್.ಮಹೇಶ್, ಮಾಜಿ ಸಂಸದ ಮುನಿಸ್ವಾಮಿ, ಮಹೇಶ್ ಇದ್ದರು.

ಮೈಸೂರಲ್ಲಿ ಕೃಷಿ ಮೇಳಕ್ಕೆ ಚಾಲನೆ



ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಆಯೋಜಿಸಿರುವ ಎರಡು ದಿನಗಳ ಕೃಷಿ ಮೇಳಕ್ಕೆ ಪದ್ಮಶ್ರೀ ಪುರಸ್ಕೃತ ಡಾ.ಖಾದರ್ ವಲ್ಲಿ ಚಾಲನೆ ನೀಡಿದರು.

ಮೈಸೂರು, ಜೂ.7(ಜಿಎ)–ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಬಾಲಾಜಿ ಪ್ರಾವೀಷನ್ ಸ್ಟೋರ್ ವತಿಯಿಂದ ಆಯೋಜಿಸಿರುವ ಎರಡು ದಿನಗಳ ಕೃಷಿ ಮೇಳಕ್ಕೆ ಪದ್ಮಶ್ರೀ ಪುರಸ್ಕೃತ ಡಾ.ಖಾದರ್ ವಲ್ಲಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಇಂದು ಆಹಾರ ಪದಾರ್ಥಗಳು ವ್ಯಾಪಾರೀಕರಣಗೊಂಡಿರುವುದರಿಂದ ಸರಿಯಾದ ಪೌಷ್ಟಿಕಾಂಶಗಳು, ಆರೋಗ್ಯ ನೀಡುವ ಅಂಶಗಳನ್ನು ದೂರ ಮಾಡಿಕೊಂಡಿದ್ದೇವೆ. ಕಳೆದ 40 ವರ್ಷಗಳಿಂದ ಮೈಸೂರಲ್ಲಿ ಸಹಜ ಸಿದ್ಧ ಆಹಾರ ಬಗ್ಗೆ ಅನೇಕ ಅಯಾಮಗಳಲ್ಲಿ ಕೆಲಸ ಮಾಡಲಾಗುತ್ತದೆ. ಈ ಹಿಂದೆ ಹಿರಿಯರು ನಾರಿನ ಅಂಶಗಳನ್ನು ಹೆಚ್ಚು ಸೇವಿಸುತ್ತಿದ್ದರು ಎಂದರು.

> **ಮೇಳದಲ್ಲಿ ಮಾವಿನಹಣ್ಣು, ಹಲಸಿನ ಹಣ್ಣು, ಸಿರಿಧಾನ್ಯ, ಹಣ್ಣಿನ ಸಸಿಗಳು, ಶುದ್ಧ ಹಸುವಿನ ಬೆಣ್ಣೆ, ತುಪ್ಪ, ಬಗೆ ಬಗೆಯ ತಿಂಡಿಗಳು, ಕೆಂಪು ಅಕ್ಕಿ, ಪಾಲಿಷ್‌ರಹಿತ ಅಕ್ಕಿ, ಗಾಣದ ಎಣ್ಣೆ, ಪಂಚಗವ್ಯ ಪದಾರ್ಥಗಳು ಲಭ್ಯವಿದೆ.**

ಪ್ರತಿಯೊಂದು ಪದಾರ್ಥಗಳಿಗೆ ರಾಸಾಯನಿಕ ಅಂಶಗಳನ್ನು ಸಿಂಪಡಿಸುತ್ತಿರುವುದರಿಂದ ಸಿಪ್ಪೆ ತೆಗೆದು ಸೇವಿಸುತ್ತಿರುವ ಪ್ರವೃತ್ತಿ ಆರಂಭವಾಗಿದೆ. ಆದರೆ, ಇತ್ತೀಚೆಗೆ ಔಷಧಿಯುಕ್ತ ಆಹಾರದಿಂದ ಮರಳಿ ಸಾವಯವ ಆಹಾರದ ಕಡೆಗೆ ಚಿಂತನೆ ಮಾಡಲಾಗುತ್ತಿರುವುದು ಸಂತಸದ ಸಂಗತಿ ಎಂದರು.

ಭಾರತೀಯ ಗೃಹ ವಿಜ್ಞಾನ ಸಂಘದ ಮೈಸೂರು ಪ್ರಾದೇಶಿಕ ಚಾಪ್ಟರ್ ಉದ್ಘಾಟನೆ

ಮೈಸೂರು, ಜೂ.7(ಎಂಕೆ)– ಭಾರತೀಯ ಗೃಹ ವಿಜ್ಞಾನ ಸಂಘ(ಹೆಚ್‌ಎಸ್‌ಎಐ)ದ ಮೈಸೂರು ಪ್ರಾದೇಶಿಕ ಚಾಪ್ಟರ್ ಅನ್ನು ಉದ್ಘಾಟಿಸಲಾಯಿತು.

ಮೈಸೂರು ವಿವಿ ಮಾನಸಗಂಗೋತ್ರಿಯಲ್ಲಿರುವ ಆಹಾರ ವಿಜ್ಞಾನ ಮತ್ತು ಪೋಷಣ ಅಧ್ಯಯನ ವಿಭಾಗದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಹೆಚ್‌ಎಸ್‌ಎಐ ಮೈಸೂರು ಚಾಪ್ಟರ್ ಅನ್ನು ಉದ್ಘಾಟಿಸಿದರು.

ಇದೇ ವೇಳೆ ಹೆಚ್‌ಎಸ್‌ಎಐನ ಮಾರ್ಗದರ್ಶಕರೂ ಆದ ಲೇಖಕಿ ಪ್ರೊ.ಜಮುನಾ ಪ್ರಕಾಶ್ ಸಂಪಾದಿತ 'ಹ್ಯಾಂಡ್ ಬುಕ್ ಆಫ್ ಫುಡ್ ಅಂಡ್ ನ್ಯೂಟ್ರಿಷನ್' ಕೃತಿಯನ್ನು ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಗೃಹ ವಿಜ್ಞಾನವು ಆಹಾರ ವಿಜ್ಞಾನ, ವ್ಯಕ್ತಿತ್ವ ವಿಕಾಸ ಹಾಗೂ ಆಹಾರ ತಂತ್ರಜ್ಞಾನವನ್ನು ಒಳಗೊಂಡಿದ್ದು, ಗೃಹ ವಿಜ್ಞಾನದ ವಿಷಯವು ಮನೆಯಿಂದ ಆರಂಭವಾಗುತ್ತದೆ. ಸ್ವಾಮಿನಾಥನ್ ಅವರು ಆಹಾರ ವಿಜ್ಞಾನ, ಪೌಷ್ಟಿಕಾಂಶದ ಕುರಿತು ಬೆಳಕು ಚೆಲ್ಲುವ ಪುಸ್ತಕ ಬರೆದಿದ್ದು, ಅದರ ಓದಿನಿಂದ ಅನೇಕ ಮಾಹಿತಿ ದೊರೆಯುತ್ತದೆ ಎಂದರು.

ವಿದ್ಯಾರ್ಥಿಗಳು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಗೂಗಲ್ ಹಾಗೂ ಇಂಟರ್‌ನೆಟ್‌ನಲ್ಲಿ ದೊರೆಯುವ ಮಾಹಿತಿಗಿಂತ ಹೆಚ್ಚಿನ ಜ್ಞಾನ ಪುಸ್ತಕದಲ್ಲಿ ದೊರೆಯುತ್ತದೆ. ಓದಿನಿಂದಾಗಿ ತಾಳ್ಮೆ ಹಾಗೂ ನೆನಪಿನ ಶಕ್ತಿ ಹೆಚ್ಚುತ್ತದೆ. ಮೊಬೈಲ್ ಮುಂತಾದ ಆಧುನಿಕ ವಿಚಾರಗಳ ನಡುವೆಯೂ ಬೌದ್ಧಿಕ ಜ್ಞಾನಕ್ಕೆ ಓದುವ ಹವ್ಯಾಸ ರೂಢಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಮೈಸೂರು ವಿವಿ ಕುಲಪತಿ ಎನ್.ಕೆ. ಲೋಕನಾಥ್ ಮಾತನಾಡಿ, ಆಹಾರ, ಪೌಷ್ಟಿಕಾಂಶ ಹಾಗೂ ಗೃಹ ವಿಜ್ಞಾನದ ವಿಷಯಗಳು ಮುಂದುವರೆಯುತ್ತಿರುವ ಸಮಾಜಕ್ಕೆ ಅತಿ ಅಗತ್ಯವಾಗಿದೆ. ಇದರ ಬಗ್ಗೆ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು, ಈ ವಿಭಾಗದ ಪ್ರಾಮುಖ್ಯತೆಯನ್ನು ಅರಿತು ಸಮಾಜಕ್ಕೆ ಕೊಡುಗೆ ನೀಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದಿ ಬೆಂಗಳೂರು ಪ್ರಕಾಶನದ ನಿರ್ದೇಶಕ ಎ.ಹೆಚ್.ವಿಷ್ಣು, ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ಅಧ್ಯಯನ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಕೋಮಲಾ, ಹೆಚ್‌ಎಸ್‌ಎಐ ಮೈಸೂರು ಚಾಪ್ಟರ್ ಕಾರ್ಯದರ್ಶಿ ಶ್ರದ್ಧಾ ಮತ್ತಿತರರು ಉಪಸ್ಥಿತರಿದ್ದರು.



ಭಾರತೀಯ ಗೃಹ ವಿಜ್ಞಾನ ಸಂಘ(ಹೆಚ್‌ಎಸ್‌ಎಐ)ದ ಮೈಸೂರು ಪ್ರಾದೇಶಿಕ ಚಾಪ್ಟರ್ ಅನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಲೇಖಕಿ ಪ್ರೊ.ಜಮುನಾ ಪ್ರಕಾಶ್, ದಿ ಬೆಂಗಳೂರು ಪ್ರಕಾಶನದ ನಿರ್ದೇಶಕ ಎ.ಹೆಚ್.ವಿಷ್ಣು, ಆಹಾರ ವಿಜ್ಞಾನ–ಪೌಷ್ಟಿಕಾಂಶ ಅಧ್ಯಯನ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಕೋಮಲಾ ಮತ್ತಿತರರಿದ್ದರು.

ಶಿಮ್ಲಾದ ಇಂದಿರಾ ಗಾಂಧಿ ಆಸ್ಪತ್ರೆಯಲ್ಲಿ ಸೋನಿಯಾಗೆ ಚಿಕಿತ್ಸೆ



ಶಿಮ್ಲಾ, ಜೂ.7– ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ದಿಢೀರ್ ಅಸ್ವಸ್ಥತೆಯಿಂದ ಶನಿವಾರ ಶಿಮ್ಲಾದ ಆಸ್ಪತ್ರೆಗೆ ದಾಖಲಾದರು. ಪುತ್ರಿ ಪ್ರಿಯಾಂಕಾ ವಾದ್ರಾ ಜತೆ ಶಿಮ್ಲಾ ಪ್ರವಾಸದಲ್ಲಿದ್ದ ಸೋನಿಯಾ ಅವರಿಗೆ ರಕ್ತದೊತ್ತಡದಲ್ಲಿ ದಿಢೀರ್ ಏರಿಕೆ ಕಂಡುಬಂತು.

ಕೂಡಲೇ ಅವರನ್ನು ಶಿಮ್ಲಾದ ಇಂದಿರಾಗಾಂಧಿ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು. ರಕ್ತದೊತ್ತಡ ಸೇರಿದಂತೆ ಹಲವು ಪರೀಕ್ಷೆಗಳ ಬಳಿಕ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು. ಅವರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯಕೀಯ ಕಾಲೇಜಿನ ಉಪ ಅಧೀಕ್ಷಕ ಡಾ.ಅಮನ್ ಹೇಳಿದ್ದಾರೆ.

ತೇಜಸ್ವಿ ಯಾದವ್ ಬೆಂಗಾವಲು ವಾಹನಕ್ಕೆ ಟ್ರಕ್ ಡಿಕ್ಕಿ: ಮೂವರು ಭದ್ರತಾ ಸಿಬ್ಬಂದಿಗೆ ಗಾಯ



ಬಿಹಾರ, ಜೂ.7– ರಾಷ್ಟ್ರೀಯ ಜನತಾ ದಳ ನಾಯಕ ತೇಜಸ್ವಿ ಯಾದವ್ ಅವರ ಬೆಂಗಾವಲಿನ ಎರಡು ವಾಹನಗಳಿಗೆ ವೇಗವಾಗಿ ಬಂದ ಟ್ರಕ್ ಡಿಕ್ಕಿ ಹೊಡೆದಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆಯಲ್ಲಿ ಮೂವರು ಭದ್ರತಾ ಸಿಬ್ಬಂದಿಗೆ ಗಾಯಗಳಾಗಿವೆ. ಬಿಹಾರದ ವೈಶಾಲಿ ಜಿಲ್ಲೆಯಲ್ಲಿ ಈ ಅಪಘಾತ ಸಂಭವಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಪಾಟ್ನಾ–ಮುಜಾಫರ್‌ಪುರ್ ರಾಷ್ಟ್ರೀಯ ಹೆದ್ದಾರಿಯ ಗೋರೌಲ್‌ನಲ್ಲಿ ಟೀ ಕುಡಿಯುವುದಕ್ಕಾಗಿ ಬೆಂಗಾವಲು ವಾಹನಗಳನ್ನು ನಿಲ್ಲಿಸಿದ್ದಾಗ ಮುಂಜಾನೆ 12.30ರ ಸುಮಾರಿನಲ್ಲಿ ಈ ದುರ್ಘಟನೆ ನಡೆದಿದೆ. ಮಧೇಪುರದಿಂದ ಪಾಟ್ನಾಕ್ಕೆ ತೇಜಸ್ವಿ ಹಿಂತಿರುಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಪ್ರಾಣಾಪಾಯದಿಂದ ಯಾದವ್ ಪಾರಾಗಿದ್ದಾರೆ. ಮೂರು ಭದ್ರತಾ ಸಿಬ್ಬಂದಿಗೆ ತೀವ್ರವಾದ ಗಾಯಗಳಾಗಿದ್ದು, ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ. ಯಾದವ್ ಆಸ್ಪತ್ರೆಗೆ ಭೇಟಿ ನೀಡಿದ್ದು, ಗಾಯಾಳುಗಳ ಆರೋಗ್ಯ ವಿಚಾರಿಸಿದ್ದಾರೆ. ಟ್ರಕ್ ಹಾಗೂ ಅದರ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧದ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ದೇಶ – ವಿದೇಶ

2026ರ ಏಪ್ರಿಲ್‌ನಲ್ಲಿ ಬಾಂಗ್ಲಾದಲ್ಲಿ ಸಾರ್ವತ್ರಿಕ ಚುನಾವಣೆ




ಡಾಕಾ: ಬಾಂಗ್ಲಾದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳು 2026ರ ಏಪ್ರಿಲ್ ಮಧ್ಯಭಾಗದಲ್ಲಿ ನಡೆಸಲಾಗುವುದು ಎಂದು ಮಧ್ಯಂತರ ಸರ್ಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನಸ್ ಘೋಷಿಸಿದ್ದಾರೆ ಈದ್–ಉಲ್–ಅಝಾ ಮುನ್ನಾ ದಿನದಂದು ರಾಷ್ಟ್ರೀಯವಾಗಿ ದೂರದರ್ಶನದಲ್ಲಿ ಭಾಷಣ ಮಾಡಿದ ಮುಹಮ್ಮದ್ ಯೂನಸ್, ಚುನಾವಣಾ ಆಯೋಗವು ಶೀಘ್ರದಲ್ಲೇ ವಿವರವಾದ ಮಾರ್ಗಸೂಚಿ ಪ್ರಕಟಿಸಲಿದೆ ಎಂದಿದ್ದಾರೆ. ದೇಶದ ಇತಿಹಾಸದಲ್ಲಿ ಅತ್ಯಂತ ಮುಕ್ತ, ನ್ಯಾಯಯುತ, ಸ್ಪರ್ಧಾತ್ಮಕ ಮತ್ತು ಸ್ವೀಕಾರಾರ್ಹ ಎಂದು ಖಚಿತಪಡಿಸಿಕೊಳ್ಳಲು ಸರ್ಕಾರವು ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚಿಸಿದೆ ಎಂದರು. ಚುನಾವಣಾ ಸಮಯದ ಕುರಿತು ತಿಂಗಳುಗಳ ಕಾಲ ನಡೆದ ಊಹಾಪೋಹ ಮತ್ತು ರಾಜಕೀಯ ಜಗಳವನ್ನು ಈ ಘೋಷಣೆ ಕೊನೆಗೊಳಿಸಿದೆ. ಅಧಿಕಾರಕ್ಕಾಗಿ ಪೈಪೋಟಿ ನಡೆಸುತ್ತಿರುವ ರಾಜಕೀಯ ಪಕ್ಷಗಳು ಯೂನಸ್ ಅವರನ್ನು ಚುನಾವಣಾ ವೇಳಾಪಟ್ಟಿಯನ್ನು ನಿಗದಿಪಡಿಸುವಂತೆ ಪದೇ ಪದೆ ಒತ್ತಾಯಿಸುತ್ತಿವೆ. ಆದರೆ ಹಸೀನಾ ಅವರ ಅಧಿಕಾರಾವಧಿ ನಂತರ ದೇಶವು ತನ್ನ ಪ್ರಜಾಪ್ರಭುತ್ವ ಸಂಸ್ಥೆಗಳ ಕೂಲಂಕಷ ಪರೀಕ್ಷೆಯ ಅಗತ್ಯವಿರುವುದರಿಂದ ಸಮಯದ ಅಗತ್ಯವಿದೆ ಎಂದು ಅವರು ಹೇಳಿದ್ದಾರೆ.

ಬ್ಯಾಗ್‌ನಲ್ಲಿ 10 ಬಂದೂಕು ಹೊಂದಿದ್ದ ಫುಡ್ ಡೆಲಿವರಿ ಏಜೆಂಟ್ ಬಂಧನ



ಮುಜಫರ್‌ನಗರ: ಹರಿಯಾಣದಲ್ಲಿ ಜನಪ್ರಿಯ ಆಹಾರ ವಿತರಣಾ ಅಪ್ಲಿಕೇಶನ್‌ನ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ ಮೀರತ್‌ನ 23 ವರ್ಷದ ವ್ಯಕ್ತಿಯೊಬ್ಬ ಅಕ್ರಮವಾಗಿ ಬಂದೂಕುಗಳನ್ನು ಹೊಂದಿದ್ದ ಆರೋಪದ ಮೇಲೆ ಉತ್ತರಪ್ರದೇಶದ ಮುಜಫರ್‌ನಗರ ಜಿಲ್ಲೆಯಲ್ಲಿ ಪೊಲೀಸರು ಬಂಧಿಸಿದ್ದಾರೆ. ಅಧಿಕಾರಿಗಳು ಡೆಲಿವರಿ ಬ್ಯಾಗ್‌ನಲ್ಲಿ ಅಡಗಿಸಿಟ್ಟಿದ್ದ ದೇಶಿ ನಿರ್ಮಿತ 10 ಪಿಸ್ತೂಲ್‌ಗಳು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತ ಆರೋಪಿಯನ್ನು ಸುಧಾಂಶುಕುಮಾರ್ ಎಂದು ಗುರುತಿಸಲಾಗಿದ್ದು, ದೆಹಲಿ, ಹರಿಯಾಣ, ಪಂಜಾಬ್ ಮತ್ತು ಉತ್ತರಪ್ರದೇಶ ಸೇರಿದಂತೆ ಹಲವಾರು ರಾಜ್ಯಗಳಿಗೆ ಅಕ್ರಮವಾಗಿ ಬಂದೂಕುಗಳನ್ನು ಕಳ್ಳಸಾಗಣೆ ಮಾಡಲು ತನ್ನ ಫುಡ್ ಡೆಲಿವರಿ ಏಜೆಂಟ್ ಕೆಲಸವನ್ನು ಬಳಸುತ್ತಿದ್ದ. ಆತನಿಗೆ ಕ್ರಿಮಿನಲ್ ಇತಿಹಾಸವಿದ್ದು, ಆತನ ವಿರುದ್ಧ ಐದು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದು ಮುಜಫರ್‌ನಗರ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಸಂಜಯ್‌ಕುಮಾರ್ ಹೇಳಿದ್ದಾರೆ. ವಿಚಾರಣೆಯ ಸಮಯದಲ್ಲಿ, ಸುಧಾಂಶು ಅಕ್ರಮ ಶಸ್ತ್ರಾಸ್ತ್ರ ವ್ಯಾಪಾರದಲ್ಲಿ ಇತರ 6 ಜನರ ಭಾಗಿಯಾಗಿರುವುದನ್ನು ಬಹಿರಂಗಪಡಿಸಿದ್ದಾನೆ. ಈ ಶಂಕಿತರನ್ನು ಪತ್ತೆಹಚ್ಚಲು ಮತ್ತು ಬಂಧಿಸಲು ಪೊಲೀಸರು ವಿಶೇಷ ತಂಡ ರಚಿಸಿದ್ದಾರೆ.

ಭಾರತಕ್ಕೆ ನಾಲ್ಕನೇ ಪತ್ರ ಬರೆದ ಪಾಕಿಸ್ತಾನ: ಸಿಂಧೂ ಜಲ ಒಪ್ಪಂದ ಮರುಸ್ಥಾಪಿಸಲು ಒತ್ತಾಯ



ಇಸ್ಲಾಮಾಬಾದ್: ಸಿಂಧೂ ಜಲ ಒಪ್ಪಂದವನ್ನು ತಡೆಹಿಡಿಯುವ ನಿರ್ಧಾರವನ್ನು ಮರುಪರಿಶೀಲಿಸುವಂತೆ ಪಾಕಿಸ್ತಾನ ಭಾರತಕ್ಕೆ 4ನೇ ಬಾರಿ ಪತ್ರ ಬರೆದಿದೆ. ಏ.22ರಂದು ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ 26 ನಾಗರಿಕರು ಮೃತಪಟ್ಟ ನಂತರ ಸಿಂಧೂ ಜಲ ಒಪ್ಪಂದವನ್ನು ರದ್ದು ಮಾಡಲಾಗಿದೆ. ಪಾಕಿಸ್ತಾನ ತೀವ್ರ ಜಲ ಬಿಕ್ಕಟ್ಟನ್ನು ಎದುರಿಸುತ್ತಿದ್ದು ಹತಾಶವಾದಂತೆ ಕಾಣುತ್ತಿದೆ.

ಪಾಕಿಸ್ತಾನದ ಜಲಸಂಪನ್ಮೂಲ ಸಚಿವಾಲಯದ ಕಾರ್ಯದರ್ಶಿ ಸೈಯದ್ ಅಲಿ ಮುರ್ತಾಜಾ ಕಳುಹಿಸಿರುವ ನಾಲ್ಕು ಪತ್ರಗಳನ್ನು, ಜಲಶಕ್ತಿ ಸಚಿವಾಲಯಕ್ಕೆ ಕಳುಹಿಸಲಾಗಿದೆ, ಅವುಗಳನ್ನು ವಿದೇಶಾಂಗ ಸಚಿವಾಲಯಕ್ಕೆ ರವಾನಿಸಿದೆ ಎಂದು ಮೂಲಗಳು ಸೂಚಿಸಿವೆ. ಪತ್ರಗಳಲ್ಲಿ ಮುರ್ತಾಜಾ ಒಪ್ಪಂದವನ್ನು ಮರುಸ್ಥಾಪಿಸುವಂತೆ ಭಾರತವನ್ನು ಒತ್ತಾಯಿಸಿದ್ದಾರೆ. ತನ್ನ ರಾಷ್ಟ್ರೀಯ ಭದ್ರತಾ ಅಧಿಕಾರಗಳನ್ನು ಬಳಸಿಕೊಂಡು ಪಾಕಿಸ್ತಾನ ಗಡಿಯಾಚೆಗಿನ ಭಯೋತ್ಪಾದನೆಯನ್ನು ವಿಶ್ವಾಸಾರ್ಹವಾಗಿ ಮತ್ತು ಶಾಶ್ವತವಾಗಿ ಬೆಂಬಲಿಸುವುದನ್ನು ನಿಲ್ಲಿಸುವವರೆಗೆ ಒಪ್ಪಂದವನ್ನು ರದ್ದುಗೊಳಿಸಲಾಗುವುದು ಎಂದು ಭಾರತ ಹೇಳಿದೆ.

ಭೂಕುಸಿತದಲ್ಲಿ ಸಿಲುಕಿದ್ದ 76 ಸೇನಾ ಸಿಬ್ಬಂದಿ ರಕ್ಷಣೆ



ಗ್ಯಾಂಗ್ಟೋಕ್: ಸಿಕ್ಕಿಂನ ಛಾಟೆನ್ ಬಳಿಯ ಸೇನಾ ಶಿಬಿರದ ಬಳಿ ಸಂಭವಿಸಿದ ಭೂಕುಸಿತದಲ್ಲಿ ಸಿಲುಕಿದ್ದ 76 ಸೇನಾ ಸಿಬ್ಬಂದಿಯನ್ನು ಏರ್ ಲಿಫ್ಟ್ ಮಾಡಲಾಗಿದೆ. ಭಾರಿ ಮಳೆಯಿಂದಾಗಿ ಹಲವಾರು ಭೂಕುಸಿತಗಳು ಸಂಭವಿಸಿವೆ. ರಸ್ತೆ ಸಂಪರ್ಕ ಕಡಿತಗೊಂಡಿದ್ದು, ಅಲ್ಲಿ ಸಿಲುಕಿಕೊಂಡಿದ್ದ ಎಲ್ಲಾ ಪ್ರವಾಸಿಗರನ್ನು ರಕ್ಷಿಸಿ ಸ್ಥಳಾಂತರಿಸುವ ಪ್ರಯತ್ನಗಳು ಪೂರ್ಣಗೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಒಟ್ಟಾರೆಯಾಗಿ 76 ಸೇನಾ ಸಿಬ್ಬಂದಿಯನ್ನು ಮೂರು MI-17 ಹೆಲಿಕಾಪ್ಟರ್‌ಗಳ ಮೂಲಕ ಕರೆತರಲಾಯಿತು. ಇಂದು ಹೆಲಿಕಾಪ್ಟರ್‌ಗಳು ಸೇನಾ ಸಿಬ್ಬಂದಿಯನ್ನು ಚಾಟೆನ್‌ನಿಂದ ಪಾಕ್ಯೊಂಗ್ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣಕ್ಕೆ ಸಾಗಿಸುವುದರೊಂದಿಗೆ ರಕ್ಷಣಾ ಕಾರ್ಯಾಚರಣೆ ಪೂರ್ಣಗೊಂಡಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ರಾಜ್ಯ ಸರ್ಕಾರವು ಒಟ್ಟಾರೆ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಇದೆ. ವಿಪತ್ತು ಪೀಡಿತ ಪ್ರದೇಶದಲ್ಲಿ ಅಗತ್ಯವಿರುವ ಎಲ್ಲಾ ಬೆಂಬಲವನ್ನು ಒದಗಿಸಲು ಮತ್ತು ನೈಸರ್ಗಿಕ ವಿಕೋಪಗಳಿಂದ ಪೀಡಿತರಿಗೆ ಸಹಾಯ ಮಾಡಲು ಬದ್ಧವಾಗಿದೆ ಎಂದು ಮತ್ತೊಬ್ಬ ಅಧಿಕಾರಿ ಹೇಳಿದ್ದಾರೆ.

ಟ್ರಂಪ್–ಮಸ್ಕ್ ಗುದ್ದಾಟ: ಟೆಸ್ಲಾ ಷೇರು ಭಾರೀ ಕುಸಿತ



ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಮತ್ತು ಟೆಸ್ಲಾ ಸಂಸ್ಥಾಪಕ ಎಲೋನ್ ಮಸ್ಕ್ ನಡುವಿನ ಸಂಬಂಧದಲ್ಲಿ ಬಿರುಕು ಮೂಡಿದ್ದು, ಸಾಮಾಜಿಕ ಜಾಲತಾಣದಲ್ಲಿ ಇಬ್ಬರು ಪರಸ್ಪರ ಟೀಕಿಸಿಕೊಳ್ಳುತ್ತಿದ್ದಾರೆ. ಈ ಇಬ್ಬರ ನಡುವಿನ ಕದನದ ಪರಿಣಾಮ ಟೆಸ್ಲಾ ಷೇರು ಶೇ.14ರಷ್ಟು ಕುಸಿದಿದೆ. ಈ ಮೂಲಕ ವಾಲ್ ಸ್ಟ್ರೀಟ್ ಕೂಡಾ ಕುಸಿತ ಕಂಡಿದೆ.

ಡೌನ್ ಜೋನ್ಸ್ ಇಂಡಸ್ಟ್ರಿಯಲ್ 0.3ರಷ್ಟು ಕುಸಿದಿದ್ದು, ಬ್ರೋಡ್ ಬೇಸ್ಡ್ ಎಸ್ ಅಂಡ್ ಪಿ 500 ಸೂಚ್ಯಂಕವೂ 0.5ರಷ್ಟು ಕುಸಿದಿದ್ದು 5,939.30ಕ್ಕೆ ಇಳಿಕೆ ಕಂಡಿದೆ. ಟೆಕ್ ದಿಗ್ಗಜ ನಾಸ್ಡಾಕ್ ಕಾಂಪೊಸಿಟ್ ಸೂಚ್ಯಂಕ 0.8ರಷ್ಟು ಕುಸಿತ ಕಂಡು 19,298.45ಕ್ಕೆ ಇಳಿದಿದೆ. ಟೆಸ್ಲಾ ಷೇರು ಶೇ.14ರಷ್ಟು ಕುಸಿಯುವ ಮೂಲಕ 100 ಬಿಲಿಯನ್ ಡಾಲರ್ ನಷ್ಟ ಅನುಭವಿಸಿದೆ. ಇದರಿಂದಾಗಿ ಟೆಸ್ಲಾ ಮಾರುಕಟ್ಟೆ ಮೇಲೆ ವಿಶೇಷವಾಗಿ ಗ್ರಾಹಕ ವಲಯದಲ್ಲಿ ಹೆಚ್ಚಿನ ಪರಿಣಾಮ ಬೀರಲಿದೆ ಎಂದು ಪ್ಯಾಟ್ರಿಕ್ ಒ ಹ್ಯಾರೆ ತಿಳಿಸಿದ್ದಾರೆ. ಷೇರು ಕುಸಿತದ ಬಳಿಕವೂ ಮಾರುಕಟ್ಟೆಯಲ್ಲಿ ಟೆಸ್ಲಾ ಬಲಿಷ್ಠವಾಗಿಯೇ ಇದೆ. ಯಾವುದೇ ಹೊಸ ನಕಾರಾತ್ಮಕ ಪರಿಣಾಮ ಬೀರಿಲ್ಲ ಎಂದು ಹೇಳಿದ್ದಾರೆ.

ಕಾಡಾನೆ ದಾಳಿಗೆ ಕಾಫಿ ಬೆಳೆಗಾರನ ಬಲಿ



ಪುರುಷೋತ್ತಮ



ಶಾಸಕ ಪೊನ್ನಣ್ಣ ಕಾಡಾನೆಗಳನ್ನು ಮರಳಿ ಅರಣ್ಯಕ್ಕೆ ಅಟ್ಟುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಡಿಕೇರಿ, ಜೂ.7–ಮನೆಯ ಸಮೀಪದಲ್ಲಿರುವ ಕಾಫಿ ತೋಟಕ್ಕೆ ಹೋಗಿದ್ದ ಬೆಳೆಗಾರನ ಮೇಲೆ ಕಾಡಾನೆ ದಾಳಿ ಮಾಡಿ ಬಲಿ ತೆಗೆದುಕೊಂಡ ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದಿದೆ.

ಕರಡಿಗೋಡು ಗ್ರಾಮದ ನಿವಾಸಿ ಕುಕ್ಕುನೂರು ಪುರುಷೋತ್ತಮ (78) ಎಂಬವರೇ ಕಾಡಾನೆ ದಾಳಿಗೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟವರಾಗಿದ್ದಾರೆ. ಬೆಳಿಗ್ಗೆ ತೋಟಕ್ಕೆ ತೆರಳಿ ಸಂಜೆ ಮನೆಗೆ ಹಿಂತಿರುಗುತ್ತಿದ್ದ ವೇಳೆ ಏಕಾಏಕಿ ಎದುರಿಗೆ ಬಂದ ಕಾಡಾನೆ ಪುರುಷೋತ್ತಮ ಮೇಲೆ ದಾಳಿಗೆ ಮುಂದಾಗಿದೆ. ಆದರೆ ದಾಳಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಪುರುಷೋತ್ತಮ ದಾಳಿಯಿಂದ ಗಂಭೀರ ಗಾಯಗೊಂಡು ಸ್ಥಳದಲ್ಲೇ ಮೃತ ಪಟ್ಟಿದ್ದಾರೆ.

ಪತ್ನಿಯೊಂದಿಗೆ ವಾಸವಾಗಿದ್ದ ಇವರು ತೋಟಕ್ಕೆ ತೆರಳಿ ರಾತ್ರಿ ಒಂಬತ್ತು ಗಂಟೆಯಾದರೂ ಮನೆಗೆ ಬಾರದಿದ್ದಾಗ ಸಂಬಂಧಿಕರಿಗೆ ಮಾಹಿತಿ ನೀಡಿ ಹುಡುಕಾಟ ಪ್ರಾರಂಭಿಸಿದಾಗ ಮನೆಯ ಸಮೀಪದ ಕಾಫಿ ತೋಟದಲ್ಲಿ ಕಾಡಾನೆ ದಾಳಿಯಿಂದ ಗಂಭೀರ ಗಾಯಗಳಾಗಿ ರಕ್ತದ ಮಡುವಿನಲ್ಲಿದ್ದ ಮೃತದೇಹ ಪತ್ತೆಯಾಗಿದೆ.

ಶಾಸಕರಿಂದ ಸಾಂತ್ವನ : ಶಾಸಕ ಎ.ಎಸ್. ಪೊನ್ನಣ್ಣ ಇಂದು ಕರಡಿಗೋಡಿನಲ್ಲಿರುವ ಸಂತ್ರಸ್ತರ ಮನೆಗೆ ತೆರಳಿ, ಅಂತಿಮ ದರ್ಶನ ಪಡೆದು, ಮನೆ ಮಂದಿಗೆ ಸಾಂತ್ವನ ಹೇಳಿ, ಕರಡಿಗೋಡು ಗ್ರಾಮ ವ್ಯಾಪ್ತಿಯ ತೋಟಗಳಲ್ಲಿರುವ ಕಾಡಾನೆಗಳನ್ನು ಮರಳಿ ಅರಣ್ಯಕ್ಕೆ ಅಟ್ಟುವಂತೆ ಅರಣ್ಯ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿದರು. ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಆರ್.ಎಫ್.ಓ. ಶಿವರಾಂ ಮತ್ತಿತರರು ಶಾಸಕರೊಂದಿಗಿದ್ದರು. ಸ್ಥಳಕ್ಕೆ ವಲಯ ಅರಣ್ಯ ಅಧಿಕಾರಿ ಶಿವರಾಮ್, ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ, ಸಿದ್ದಾಪುರ ವಲಯ ಕಾಂಗ್ರೆಸ್ ಅಧ್ಯಕ್ಷ ಪ್ರತೀಶ ಮತ್ತಿತರರು ಹಾಜರಿದ್ದರು.

ತಿಂಗಳಲ್ಲೇ 3 ಸಾವು : ಸಿದ್ದಾಪುರ ವ್ಯಾಪ್ತಿಯಲ್ಲಿ ಕಾಡಾನೆ ದಾಳಿಯಿಂದ ಒಂದು ತಿಂಗಳಿನಲ್ಲೇ ಮೂವರ ಸಾವಾಗಿದ್ದು, ಆತಂಕಗೊಂಡಿರುವ ಗ್ರಾಮಸ್ಥರು ತಕ್ಷಣ ಆನೆಯನ್ನು ಸೆರೆ ಹಿಡಿಯಬೇಕೆಂದು ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

7 ವರ್ಷಗಳ ಹಿಂದೆ ಅಣ್ಣನ ಬಲಿ : ಇದೇ ರೀತಿ ಇವರ ಅಣ್ಣ ಮೋಹನ್ ದಾಸ್ 7 ವರ್ಷಗಳ ಹಿಂದೆ ಕಾಫಿ ತೋಟಕ್ಕೆ ತೆರಳಿ ವಾಪಸ್ ಬರುತ್ತಿದ್ದ ಸಮಯದಲ್ಲಿ ಕಾಡಾನೆ ದಾಳಿ ಮಾಡಿ ಅದೇ ಸ್ಥಳದಲ್ಲಿ ಬಲಿ ತೆಗೆದುಕೊಂಡಿತ್ತು.

ಅಪಾರ ಪ್ರಮಾಣದ ಕೃಷಿ ಫಸಲು ನಾಶ ಮಾಡುವುದರ ಮೂಲಕ ಕಾರ್ಮಿಕರು ಬೆಳೆಗಾರರಲ್ಲಿ ಆತಂಕ ಸೃಷ್ಟಿಯಾಗಿ ಅಮಾಯಕ ಜೀವಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದರೂ ಅರಣ್ಯ ಇಲಾಖೆ ಕಾಡು ಪ್ರಾಣಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಕಾರ್ಯಯೋಜನೆ ರೂಪಿಸದೆ ನಿರ್ಲಕ್ಷಿಸುತ್ತಿರುವ ಪರಿಣಾಮವೇ ಆನೆ ಮಾನವ ಸಂಘರ್ಷ ಮುಂದುವರೆದಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ವಿರಾಜಪೇಟೆಯಲ್ಲಿ ಸಂಭ್ರಮದ ಬಕ್ರೀದ್ ಆಚರಣೆ



ಮುಸ್ಲಿಂ ಮಹಿಳೆಯರು ನಮಾಜ್ ಮಾಡುವ ಮೂಲಕ ಬಕ್ರೀದ್ ಹಬ್ಬವನ್ನು ಆಚರಿಸಿದರು.

ವಿರಾಜಪೇಟೆ: ಪ್ರವಾದಿ ಇಬ್ರಾಹಿಂ ಹಾಗೂ ಪುತ್ರ ಇಸ್ಮಾಯಿಲ್‌ರವರ ತ್ಯಾಗಮಯ ಜೀವನದ ಮತ್ತು ಪವಿತ್ರ ಮಕ್ಕಾದಲ್ಲಿ ನಡೆಯುವ ಹಜ್ಜ್ ಸಮಾವೇಶಕ್ಕೆ ಭಾವೈಕ್ಯವನ್ನು ಪ್ರದರ್ಶಿಸುವ ಸಲುವಾಗಿ ಆಚರಿಸುವ ಮುಸಲ್ಮಾನ್ ಬಾಂಧವರು ಬಕ್ರೀದ್ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸಿದರು.

ಹಿಂದಿನ ದಿನಗಳ ಹಿಂದೆ ಇದ್ದ ಮಳೆಯ ವಾತಾವರಣದಿಂದ ತಿರುಗಿದ ಬಿಸಿಲಿನ ನಡುವೆಯೂ ನಗರದ ವಿವಿಧ ಮಸೀದಿಗಳಲ್ಲಿ ವಿಶೇಷ ಈದ್ ನಮಾಜ್ ಹಾಗೂ ಪ್ರವಚನ ಆಲಿಸಲು ಹೆಚ್ಚಿನ ಸಂಖ್ಯೆಯ ಮುಸ್ಲಿಂ ಬಾಂಧವರು ಬೆಳಿಗ್ಗೆಯಿಂದಲೇ ಅತಿ ಉತ್ಸಾಹದಿಂದ ಸೇರಿದ್ದರು. ಮುಖ್ಯ ರಸ್ತೆಯ ಶಾಫಿ ಜುಮಾ ಮಸೀದಿಯಲ್ಲಿ ಮೌ॥ ಹಾರಿಸ್ ಬಾಖವಿ, ಖಾಸಗಿ ಬಸ್ ನಿಲ್ದಾಣದ ಶಾದುಲಿ ಜುಮಾ ಮಸೀದಿಯಲ್ಲಿ ಮೌ॥ ಶುಹೈಬ್ ಫೈಝಿ, ಬಂಗಾಳಿ ಬೀದಿಯ ಮಸ್ಜಿದ್–ಎ–ಅಝುಮ್‌ನಲ್ಲಿ ಮೌ॥.ಹಸೀಬ್ ಶರೀಫ್, ಸುಣ್ಣದ ಬೀದಿಯ ಮದೀನಾ ಮಸೀದಿಯಲ್ಲಿ ಮೌ॥. ಮುಝುಮ್ಮಿಲ್, ಕ್ಲಾಕ್ ಟವರ್ ಸಮೀಪದ ಮುರುಡೇಶ್ವರ್ ನವಾಯತ್ ಮಸೀದಿಯಲ್ಲಿ ಮೌ॥. ಮಖ್ಸೂದ್ ಅಹಮದ್, ಅಪ್ಪಯ್ಯಸ್ವಾಮಿ ರಸ್ತೆಯ ಜಾಮಿಯಾ ಮಸೀದಿಯಲ್ಲಿ ಮೌ॥ಝಾಹಿದ್, ನೆಹರು ನಗರ ರಸ್ತೆಯ ಮಸ್ಜಿದ್–ಎ–ರಹೀಲ್‌ನಲ್ಲಿ ಮೌ॥. ಅಬೂತಾಲಿಬ್, ಕಲ್ಲುಬಾಣೆಯ ಬದ್ರಿಯಾ ಜುಮಾ ಮಸೀದಿಯಲ್ಲಿ ಮೌ॥ಹನೀಫ್ ಫೈಝಿ ನೇತೃತ್ವ ನೀಡಿದರು.

ಗೋಣಿಕೊಪ್ಪ ರಸ್ತೆಯ ವಿದ್ಯಾನಗರದ ಬ್ರೈಟ್ ಕ್ಯಾಂಪಸ್‌ನ ಈದ್‌ಗಾಹ್‌ನಲ್ಲಿ ಮೌ॥ಅಬ್ದುಲ್ ರೆಹೆಮಾನ್.ಪಿ.ಬಿ, ಮಲಬಾರ್ ರಸ್ತೆಯ ಸಲಫಿ ಜುಮಾ ಮಸೀದಿಯಲ್ಲಿ ಮುಹಮ್ಮದ್ ಅಸ್ಲಮ್ ಮೌಲ್ವಿ ಪ್ರವಚನ ನೀಡಿದರು. ಹೆಚ್ಚಿನ ಸಂಖ್ಯೆಯ ಮಹಿಳೆಯರು ಮಕ್ಕಳು ಪಾಲ್ಗೊಂಡಿದ್ದುದು ವಿಶೇಷವಾಗಿತ್ತು. ನಮಾಜ್ ನಂತರ ಸಮುದಾಯ ಬಾಂಧವರು ಪರಸ್ಪರ ಶುಭಾಶಯ ಕೋರಿ ಮೆರವಣಿಗೆಯಲ್ಲಿ ತೆರಳಿ ಖಬರಸ್ಥಾನದಲ್ಲಿ ಅಗಲಿದ ಹಿರಿಯರಿಗೆ ಗೌರವ ಸಲ್ಲಿಸಿದರು. ಹನಫಿ ಹಾಗೂ ಶಾಫಿ ವಿಭಾಗದವರು ಒಂದೇ ದಿನ ಹಬ್ಬ ಆಚರಿಸಿದ್ದುದು ವಿಶೇಷವಾಗಿತ್ತು. ಅಹಿತಕರ ಘಟನೆಗಳು ಉಂಟಾಗದಂತೆ ಸೂಕ್ತ ಪೋಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಎಂಬಿಎ, ಎಂಸಿಎ ಪ್ರವೇಶ ಪರೀಕ್ಷೆಗಳಿಗೆ ನಾಳೆಯಿಂದ ಎಂಐಟಿಯಲ್ಲಿ ಮಾಕ್ ಟೆಸ್ಟ್



ಸುದ್ದಿಗೋಷ್ಠಿಯಲ್ಲಿ ಎಂಐಟಿಯ ಹೆಚ್ಒಡಿ ಪ್ರೊ.ಮಂಜುನಾಥ್.ಬಿ. ಮಾತನಾಡಿದರು.

ಮಡಿಕೇರಿ: ಸ್ನಾತಕೋತ್ತರ ಎಂಬಿಎ, ಎಂಸಿಎ ಪ್ರವೇಶ ಪರೀಕ್ಷೆಗಳಿಗೆ ಪೂರ್ವಭಾವಿಯಾಗಿ ಆಸಕ್ತ ವಿದ್ಯಾರ್ಥಿಗಳಿಗೆ ಮೈಸೂರಿನ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ(ಎಂಐಟಿ)ದ ಕ್ಯಾಂಪಸ್‌ನಲ್ಲಿ ಜೂ.9ರಿಂದ 11ರವರೆಗೆ ಮೂರು ದಿನಗಳ ತರಬೇತಿ ಮತ್ತು ಮಾಕ್ ಟೆಸ್ಟ್ ಆಯೋಜಿಸಲಾಗಿದೆ ಎಂದು ಎಂಐಟಿಯ ಎಂಸಿಎ ವಿಭಾಗದ ಹೆಚ್ಒಡಿ ಪ್ರೊ.ಮಂಜುನಾಥ್.ಬಿ. ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಇದೇ ಜೂ.22 ರಂದು ಎಂಬಿಎ ಮತ್ತು ಎಂಸಿಎಗೆ ಪ್ರವೇಶ ಪರೀಕ್ಷೆಗಳು ನಡೆಯಲಿದೆ. ಈ ಪರೀಕ್ಷೆಯನ್ನು ತೆಗೆದುಕೊಳ್ಳಲು ಬಯಸುವ ಬಿಬಿಎ, ಬಿಕಾಂ, ಬಿಎಸ್ಸಿ, ಬಿಸಿಎ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಮೂರು ದಿನಗಳ ತರಬೇತಿ ಸಂಪೂರ್ಣ ಉಚಿತವಾಗಿದ್ದು, ಇದರಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳ ವಾಸ್ತವ್ಯ, ಊಟೋಪಚಾರಗಳ ವ್ಯವಸ್ಥೆಯನ್ನು ಸಂಸ್ಥೆ ಮಾಡಿಕೊಡಲಿದೆ. ಈ ಬಾರಿ 100ರಿಂದ 150 ವಿದ್ಯಾರ್ಥಿಗಳು ತರಬೇತಿಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇರುವುದಾಗಿ ತಿಳಿಸಿದರು.

ಆನ್‌ಲೈನ್ ಮಾಕ್ ಟೆಸ್ಟ್: ಕೊಡಗಿನ ಫೀ.ಮಾ. ಕಾರ್ಯಪ್ಪ ಕಾಲೇಜು ಮತ್ತು ಗೋಣಿಕೊಪ್ಪಲು ಕಾವೇರಿ ಕಾಲೇಜಿನ ವಿದ್ಯಾರ್ಥಿಗಳಿಗೆ ತರಬೇತಿಯ ಅವಧಿಯಲ್ಲಿ ಪರೀಕ್ಷೆಗಳು ಎದುರಾಗುತ್ತಿದೆ. ಇದರಿಂದ ಆ ವಿದ್ಯಾರ್ಥಿಗಳಿಗೆ ತರಬೇತಿಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿರುವುದನ್ನು ಮನಗಂಡು ಆ ಕಾಲೇಜುಗಳ ಆಸಕ್ತ ವಿದ್ಯಾರ್ಥಿಗಳಿಗೆ ಜೂ.21 ರಂದು ಆನ್‌ಲೈನ್ ಮೂಲಕ ಮಾಕ್ ಟೆಸ್ಟ್ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ ಎಂದು ಪ್ರೊ.ಮಂಜುನಾಥ್ ತಿಳಿಸಿದರು. ತರಬೇತಿಯ ಕುರಿತಾದ ಹೆಚ್ಚಿನ ಮಾಹಿತಿಗಳಿಗಾಗಿ ಮೊ.9620228022, 9620228107, 9620228199ನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಎಂಐಟಿ ಮೈಸೂರಿನ ಎಂಸಿಎ ಅಸಿಸ್ಟೆಂಟ್ ಪ್ರೊಫೆಸರ್ ಕಾಂಚನ ಕಾವೇರಿ, ಎಂಬಿಎ ವಿಭಾಗದ ಡಾ.ರಾಜು ಮತ್ತು ಡಾ.ಇಂಪ ಬೆಳ್ಳಿಯಪ್ಪ ಉಪಸ್ಥಿತರಿದ್ದರು.

ನಾಲ್ಕು ನಾಡು ವ್ಯಾಪ್ತಿಯಲ್ಲಿ ಬಕ್ರೀದ್ ಆಚರಣೆ

ನಾಪೋಕ್ಲು, ಜೂ.7– ತ್ಯಾಗ ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಇಂದು ನಾಲ್ಕುನಾಡು ವ್ಯಾಪ್ತಿಯ ವಿವಿಧೆಡೆ ಮುಸಲ್ಮಾನ ಬಾಂಧವರು ಸಡಗರ ಸಂಭ್ರಮದಿಂದ ಆಚರಿಸಿದರು.

ನಾಪೋಕ್ಲು, ಎಮ್ಮೆಮಾಡು, ಕೊಳಕೇರಿ, ಕುಂಜಿಲ, ಹಳೆತಾಲೂಕು, ಕೊಟ್ಟಮುಡಿ, ಪಡಿಯಾಣಿ, ಚೇರಿಯಪರಂಬು ಸೇರಿದಂತೆ ವಿವಿಧ ಜುಮಾ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿದರು..

ಸಮೀಪದ ಕೊಳಕೇರಿ ಸುನ್ನಿ ಮುಸ್ಲಿಂ ಜಮಾಯತ್ ವತಿಯಿಂದ ಬಕ್ರೀದ್ ಹಬ್ಬದ ಆಚರಣೆ ಮಸೀದಿಯ ಕತೀಬರಾದ ಅಶ್ರಫ್ ಅಹ್ಸನಿ ಉಸ್ತಾದ್ ರಬಕ್ರೀದ್ ನಮಾಜ್‌ನ ನೇತೃತ್ವ ವಹಿಸಿ ಪ್ರಾರ್ಥನೆ ಮಾಡಿ ಬಕ್ರೀದ್ ಹಬ್ಬದ ಮಹತ್ವವನ್ನು ಅರಿವು ಮೂಡಿಸಿದರು. ಈ ಸಂದರ್ಭ ಜಮಾಯತ್ ಅಧ್ಯಕ್ಷ ಅಶ್ರಫ್ ಎ.ಎ, ಕಾರ್ಯದರ್ಶಿ ರಫೀಕ್.ಎಂ.ಹೆಚ್., ಜಮಾಯತ್ ಆಡಳಿತ ಮಂಡಳಿಯವರು ಮತ್ತು ಮತ ಬಾಂಧವರು ಆಧಿಕ ಸಂಖ್ಯೆಯಲ್ಲಿ ಸೇರಿದ್ದರು. ನಮಾಜ್ ಮುಗಿದ ನಂತರ ಸಿಹಿ ತಿಂಡಿ ಪಾನೀಯಗಳನ್ನು ಹಂಚಿ ತಮ್ಮ ತಮ್ಮ ಕುಟುಂಬದವರೊಂದಿಗೆ ಹಬ್ಬ ಆಚರಿಸಿದರು.



ಬಕ್ರೀದ್ ನಮಾಜ್ ಆಚರಿಸಿ ಹೊರಬರುತ್ತಿರುವ ಮುಸ್ಲಿಂ ಬಾಂಧವರು.

ಕೊಡಗು ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆ



ಕೊಡಗು ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.

ಮಡಿಕೇರಿ, ಜೂ. 7– ಕೊಡಗು ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಎನ್‌ಸಿಸಿ ಘಟಕ, ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳೊಂದಿಗೆ ಅರಣ್ಯ ಇಲಾಖೆಯ ಸಹಯೋಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಾಲುಮರದ ತಿಮ್ಮಕ್ಕ ಉದ್ಯಾನವನದಲ್ಲಿ ಗಿಡ ನೆಟ್ಟರು.

ಶಾಲೆಯ ಪ್ರಾಂಶುಪಾಲೆ ಸುಮಿತ್ರ ಕೆ.ಎಸ್., ಆಡಳಿತಾಧಿಕಾರಿ ರವಿ ಪಿ., ಎನ್‌ಸಿಸಿ ಅಧಿಕಾರಿ ಮೇಜರ್ ದಾಮೋದರ್, ಅರಣ್ಯಾಧಿಕಾರಿ ಅಭಿಷೇಕ್ (ಐಎಫ್‌ಎಸ್) ಹಾಗೂ ಲತಾ (ಎಸಿಎಫ್), ಎನ್‌ಸಿಸಿ ಸಿಬ್ಬಂದಿ ರಮೇಶ್ ಮತ್ತು ಶಾಲಾ ಶಿಕ್ಷಕ ವೃಂದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾಲ್ತುಳಿತ ಸಾವಿನ ಪ್ರಕರಣ ಖಂಡಿಸಿ ಬಿಜೆಪಿ ಪ್ರತಿಭಟನೆ



ಆರ್‌ಸಿಬಿ ವಿಜಯೋತ್ಸವ ಕಾಲ್ತುಳಿತ ಸಾವಿನ ಪ್ರಕರಣ ಖಂಡಿಸಿ ಜಿಲ್ಲಾ ಬಿಜೆಪಿ ನಗರದ ಭುವನೇಶ್ವರಿ ವೃತ್ತದಲ್ಲಿ ಪ್ರತಿಭಟನೆ ನಡೆಸಿತು.

ಚಾಮರಾಜನಗರ, ಜೂ.7–ಆರ್‌ಸಿಬಿ ವಿಜಯೋತ್ಸವದಲ್ಲಿ ಕಾಲ್ತುಳಿತ ಸಾವಿನ ಪ್ರಕರಣ ಖಂಡಿಸಿ ಜಿಲ್ಲಾ ಬಿಜೆಪಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಶ್ರೀ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆತಡೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮಾತನಾಡಿ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಆರ್‌ಸಿಬಿ ವಿಜಯೋತ್ಸವದ ಕಾಲ್ತುಳಿತ ಪ್ರಕರಣದ ನೇರ ಹೊಣೆಯನ್ನು ರಾಜ್ಯ ಸರ್ಕಾರ ಹೊತ್ತುಕೊಳ್ಳಬೇಕು. ಯಾವುದೇ ಮುನ್ಸೂಚನೆ ಇಲ್ಲದೆ ಪೊಲೀಸ್ ಅನುಮತಿ ಇಲ್ಲದೆ ಸ್ವಾರ್ಥಕ್ಕಾಗಿ ಸರ್ಕಾರ ತರಾತುರಿಯಲ್ಲಿ ಆರ್‌ಸಿಬಿ ವಿಜಯೋತ್ಸವ ಆಚರಣೆ ಮಾಡಿದ್ದು, ಕಾಲ್ತುಳಿತದಲ್ಲಿ 11 ಮಂದಿ ಅಮಾಯಕರನ್ನು ಬಲಿಪಡೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹಸಚಿವ ಡಾ.ಜಿ. ಪರಮೇಶ್ವರ್ ರಾಜೀನಾಮೆ ನೀಡಬೇಕು. ಅಮಾಯಕ ಪೊಲೀಸ್ ಅಧಿಕಾರಿಗಳ ಅಮಾನತು ಆದೇಶವನ್ನು ಹಿಂಪಡೆಯಬೇಕು. ಮೃತರ ಕುಟುಂಬಗಳಿಗೆ ಹೆಚ್ಚಿನ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹದೇವಸ್ವಾಮಿ ಮಾತನಾಡಿ, ಪೊಲೀಸ್ ಅಧಿಕಾರಗಳ ಅಮಾನತು ಆದೇಶವನ್ನು ಹಿಂಪಡೆಯಬೇಕು ಇಲ್ಲದಿದ್ದರೆ ಬಿಜೆಪಿ ಉಗ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಮಾಜಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಮಂಡಲ ಅಧ್ಯಕ್ಷ ಶಿವರಾಜ್, ಅರಕಲವಾಡಿ ಮಹೇಶ್, ಚೂಡಾ ಮಾಜಿ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ, ನಗರಸಭಾ ಸದಸ್ಯ ಮನೋಜ್ ಪಾಟೀಲ್, ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಕೂಸಣ್ಣ, ಮಾಜಿ ನಗರಸಭಾ ಸದಸ್ಯ ಶಿವಣ್ಣ, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಲೆಯೂರು ಕಮಲಮ್ಮ, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೈಲಾ, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ, ಜಿಲ್ಲಾ ಮಾಧ್ಯಮ ವಕ್ತಾರ ಕಾಡಳ್ಳಿ ಕುಮಾರ್, ಜಿಲ್ಲಾ ಉಪಾಧ್ಯಕ್ಷ ವಿರಾಟ್ ಶಿವು, ಅರಕಲವಾಡಿ ನಾಗೇಂದ್ರ, ಕಾರ್ಯದರ್ಶಿ ನಟರಾಜ್, ಎಸ್‌ಟಿ ಮೋರ್ಚಾದ ರಾಜ್ಯ ರಾಜಕಾರಣಿ ಸದಸ್ಯ ಅಗರರಾಜು, ದೊಡ್ಡರಾಯಪೇಟೆ ಮಹೇಶ್ವರಿ, ಜಯಶ್ರೀ, ವನಜಾಕ್ಷಮ್ಮ, ಜಿಲ್ಲಾ ಮಾಧ್ಯಮ ಸಂಚಾಲಕ ವೀರೇಂದ್ರ ಮಾಧ್ಯಮ ಸಹ ವಕ್ತಾರ ಮಂಜುನಾಥ್, ಜಿಲ್ಲಾ ಮಾಧ್ಯಮ್ ಪ್ರಮುಖ್ ರಾಮಸಮುದ್ರ ಶಿವಣ್ಣ ಮಂಡಲ ಮಾಜಿ ಅಧ್ಯಕ್ಷ ನಾಗರಾಜು, ಹೈಟೆಕ್ ಶಿವು, ಮುಖಂಡ ಕಪನಿ ನಾಯಕ, ಭೃಂಗೇಶ್, ರಾಜಪ್ಪ, ಕಿರಣ್, ಭಾಸ್ಕರ್, ರುದ್ರ, ರಾಜೇಂದ್ರ, ಇತರರು ಭಾಗವಹಿಸಿದ್ದರು.

ಚಾಮರಾಜನಗರ ನಗರಸಭೆ: 4.25 ಕೋಟಿ ಕ್ರಿಯಾ ಯೋಜನೆಗೆ ಅನುಮೋದನೆ

ಚಾಮರಾಜನಗರ, ಜೂ.7– ನಗರಸಭೆಯ 15ನೇ ಹಣಕಾಸು ಆಯೋಗದ 4.25 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿತು.



ಸುರೇಶ್ ಅಧ್ಯಕ್ಷತೆಯಲ್ಲಿ ನಗರಸಭೆಯ ವಿಶೇಷ ಸಾಮಾನ್ಯ ಸಭೆ ನಡೆಯಿತು.

ನಗರಸಭೆ ಅಧ್ಯಕ್ಷ ಸುರೇಶ್ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಘನತ್ಯಾಜ್ಯ ನಿರ್ವಹಣೆ –ಶೇ.30 ನೈರ್ಮಲ್ಯ ಮತ್ತು ಘನತ್ಯಾಜ್ಯ ನಿರ್ವಹಣೆ ಹಾಗೂ ವಸತಿ ನಗರ ವ್ಯವಹಾರಗಳ ಮಂತ್ರಾಲಯದಿಂದ ಅಭಿವೃದ್ಧಿ ಪಡಿಸಿರುವ ಸ್ಟಾರ್ ರೇಟಿಂಗ್‌ಗಳ ಸಾಧನೆ ಶೇ.30.(127.50 ಲಕ್ಷಗಳು) ಅನಿರ್ಬಂಧಿತ ಅನುದಾನ ಹಂಚಿಕೆಯಾದ ಒಟ್ಟು ಮೊತ್ತ ಶೇ.40ರಷ್ಟು ರೂ.170 ರಷ್ಟು, ಮಳೆ ನೀರು, ಚರಂಡಿ, ಬೀದಿದೀಪ, ಸ್ಮಶಾನ, ಚಿತಾಗಾರ, ಪಾರ್ಕ್‌ಗಳ ನಿರ್ಮಾಣಕ್ಕೆ ಅನುಮೋದನೆ ನೀಡಿತು.

ಆಷಾಢಮಾಸದಲ್ಲಿ ಚಾಮರಾಜೇಶ್ವರ ರಥೋತ್ಸವ ಇರುವುದರಿಂದ ಚಾಮರಾಜೇಶ್ವರ ದೇವಸ್ಥಾನ, ಉದ್ಯಾನವನದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಕ್ಷಣ ಮಾಡಬೇಕು ಎಂದರು. ರಾಮಸಮುದ್ರದ 27ನೇ ವಾರ್ಡಿನಲ್ಲಿ ಕುಡಿಯುವ ನೀರಿನ ಕಾಮಗಾರಿ ಪೂರ್ಣವಾಗಿದೆ ಇನ್ನೂ ಕೆಲ ದಿನಗಳಲ್ಲಿ ನೀರು ಬಿಡುವುದಾಗಿ ಹೇಳಿದಾಗ ಇನ್ನೂ ನೀರು ಬಿಟ್ಟಿಲ್ಲ ಕಾಮಗಾರಿ ವಿಳಂಬವಾಗುತ್ತಿದೆ ಎಂದು ಸದಸ್ಯ ಆರ್.ಪಿ. ನಂಜುಂಡಸ್ವಾಮಿ ಸಭೆಯ ಗಮನಕ್ಕೆ ತಂದರು. ಆಗ ಇನ್ನು ಸ್ವಲ್ಪ ಮನೆಗಳಿಗೆ ನಲ್ಲಿ ಅಳವಡಿಸಿಲ್ಲ. ಪ್ರೇಜರ್ ಚೆಕ್ ಮಾಡಿ ಕಾಮಗಾರಿ ಪೂರ್ಣಗೊಳಿಸಿಕೊಡುವುದಾಗಿ ತಿಳಿಸಿದ್ದಾರೆ ಎಂದು ಪೌರಾಯುಕ್ತರು ಉತ್ತರಿಸಿದರು. ಇನ್ನೂ ಕೆಲವು ವಾರ್ಡ್‌ಗಳಲ್ಲಿ ಹಸಿಕಸ, ಒಣಕಸಬುಟ್ಟಿ ವಿತರಿಸಿಲ್ಲ ಎಂದು ಸದಸ್ಯರು ಪ್ರಶ್ನಿಸಿದಾಗ ಪೌರಾಯುಕ್ತ ರಾಮದಾಸ್ ಆದಷ್ಟು ಬೇಗ ವಿತರಿಸಲಾಗುತ್ತದೆ ಎಂದರು.

ಸಭೆಯಲ್ಲಿ ಉಪಾಧ್ಯಕ್ಷೆ ಮಮತ ಬಾಲಸುಬ್ರಹ್ಮಣ್ಯಂ, ಪೌರಾಯುಕ್ತ ರಾಮದಾಸ್, ಸದಸ್ಯರು ಅಧಿಕಾರಿಗಳು ಭಾಗವಹಿಸಿದ್ದರು. ಪಶುಪಾಲನಾ ಇಲಾಖೆ ಉಪನಿರ್ದೇಶಕ ಹನುಮೇಗೌಡ ಮಾತನಾಡಿ, ಇತ್ತೀಚಿನ ದಿನಮಾನಗಳಲ್ಲಿ ಇತರೇ ಕೃಷಿ ಆಧಾರಿತ ಕಸುಬುಗಳಲ್ಲಿ ಒಂದಾದ ಕೋಳಿ ಸಾಕಣೆ ಲಾಭದಾಯಕ ಕಸುಬಾಗಿದೆ. ಕೋಳಿ ಸಾಕಣೆದಾರರು, 5 ವಾರಗಳ ಕಾಲ ಜೋಪಾನವಾಗಿ ಕಾಪಾಡಬೇಕು, ಮುಖ್ಯವಾಗಿ ಅವುಗಳ ಆರೋಗ್ಯದ ಬಗ್ಗೆ ಗಮನ ಹರಿಸಬೇಕು ಎಂದರು.

ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಕೋಡಿಮೋಳೆ ಗೋವಿಂದಶೆಟ್ಟಿ, ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಜನಾರ್ಧನ್, ವೈದ್ಯರಾದ ಮೂರ್ತಿ, ಮನೋಹರ್, ಮುಖಂಡ ಜೆ.ಬಿ.ಖಾನ್ ಹಾಜರಿದ್ದರು.

ಕೋಳಿಗಳ ಆರೋಗ್ಯದ ಬಗ್ಗೆ ಎಚ್ಚರವಹಿಸಿ: ಶಾಸಕ ಪುಟ್ಟರಂಗಶೆಟ್ಟಿ




ವಿವಿಧ ಗ್ರಾಮಗಳ ಫಲಾನುಭವಿಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಕೋಳಿಮರಿ ವಿತರಿಸಿದರು.

ಚಾಮರಾಜನಗರ, ಜೂ.7– ಕೋಳಿಮರಿ ಪಡೆದ ಫಲಾನುಭವಿಗಳು ಅವುಗಳ ಆರೋಗ್ಯದ ಬಗ್ಗೆ ಎಚ್ಚರವಹಿಸಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ಪಶುವೈದ್ಯಕೀಯ ಸೇವಾ ಇಲಾಖೆ ಹಾಗೂ ಮೈಸೂರಿನ ಸಹಕಾರ ಕುಕ್ಕುಟ ಮಹಾಮಂಡಲ ವತಿಯಿಂದ ನಗರದ ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ಆವರಣದಲ್ಲಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ 121 ಮಂದಿ ಫಲಾನುಭವಿಗಳಿಗೆ ತಲಾ 20 ಕೋಳಿಮರಿ ವಿತರಿಸಿ ಮಾತನಾಡಿದರು.

ಗಿರಿರಾಜ ಕೋಳಿಮರಿಗಳನ್ನು ಈಚಿನ ದಿನಗಳಲ್ಲಿ ಮಹಿಳೆಯರು ಕೃಷಿ, ತೋಟಗಾರಿಕೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ಆರ್ಥಿಕವಾಗಿ ಸದೃಢರಾಗುವ ನಿಟ್ಟಿನಲ್ಲಿ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಮಾಡಿದೆ. ಮಹಿಳೆಯರು ಸರ್ಕಾರದ ಸವಲತ್ತುಗಳನ್ನು ಪಡೆದು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರಾಗಬೇಕು, ತಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕೆ ಅವರಿಗೆ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ಪತ್ನಿ ಕೊಚ್ಚಿ ಹಾಕಿದ್ದ ಪತಿ ಬಂಧನ



ಆರೋಪಿ ಗಿರೀಶ್

ಚಾಮರಾಜನಗರ: ಪತ್ನಿಯನ್ನು ಹತ್ಯೆಗೈದು ತಲೆಮರೆಸಿಕೊಂಡಿದ್ದ ಪತಿಯನ್ನು ಪೊಲೀಸರು ಬಂಧಿಸಿದ್ದಾರೆ. ಸೋಮವಾರಪೇಟೆಯ ಗಿರೀಶ್ ಬಂಧಿತ ಆರೋಪಿ.

ಜೂ.3 ರಂದು ಚಾಮರಾಜ ನಗರ ಪೊಲೀಸ್ ಠಾಣೆಯಿಂದ ಕೂಗಳತೆ ದೂರದಲ್ಲಿಯೇ ಗಿರೀಶ್ ತನ್ನ ಪತ್ನಿ ವಿದ್ಯಾಳನ್ನು ಕುಡುಗೋಲಿನಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿ ಹತ್ಯೆ ಮಾಡಿ ಪರಾರಿಯಾಗಿದ್ದನು. ಮೂರು ದಿನಗಳಿಂದ ತಲೆಮರೆಸಿಕೊಂಡಿದ್ದ ಈತನನ್ನು ಇಂದು ಪೊಲೀಸರು ಬಂಧಿಸಿದ್ದಾರೆ.

ಕೊಳ್ಳೇಗಾಲದ ಮುಸ್ಲಿಂ ಬಾಂಧವರಿಂದ ಸಡಗರ–ಸಂಭ್ರಮದ ಬಕ್ರೀದ್ ಆಚರಣೆ



ಮುಸ್ಲಿಂ ಸಮಾಜದ ಮುಖಂಡರು ಈದ್ಗಾ ಮೈದಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಕೊಳ್ಳೇಗಾಲ: ತ್ಯಾಗ, ಬಲಿದಾನಗಳ ಪ್ರತೀಕ ಎಂದು ಹೇಳಲಾಗುವ ಬಕ್ರೀದ್ ಹಬ್ಬವನ್ನು ಪಟ್ಟಣದಲ್ಲಿ ಸಡಗರದಿಂದ ಆಚರಿಸಲಾಯಿತು. ಮುಸ್ಲಿಮರ ಪವಿತ್ರ ಹಬ್ಬವಾದ ಈದ್–ಉಲ್–ಅಝಾವನ್ನು ಸಡಗರ, ಸಂಭ್ರಮದಿಂದ ಮುಸ್ಲಿಂ ಸಮಾಜದ ಬಂಧುಗಳು ಆಚರಿಸಿದರು.

ಮುಸ್ಲಿಂ ಬಾಂಧವರು ಖುದ್ದೂಸಿಯ ಮಸೀದಿ ವೃತ್ತದಲ್ಲಿ ಜಮಾವಣೆಗೊಂಡು ಅಲ್ಲಿಂದ ಮೆರವಣಿಗೆ ಹೊರಟು ರಸ್ತೆಯುದ್ದಕ್ಕೂ ಅಲ್ಲಾಹನ ಸ್ಮರಣೆಯ ವಾಕ್ಯಗಳನ್ನು ಪಠಿಸುತ್ತಾ ಈದ್ಗಾ ಮೈದಾನಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಧರ್ಮಗುರುಗಳಾದ ಹಜರತ್ ಅಬ್ದುಲ್ ತವಾಬ್ ಸಾಮೂಹಿಕ ನಮಾಜ್ ನೆರವೇರಿಸಿ ಕೊಟ್ಟರು. ಬಳಿಕ ಧರ್ಮ ಗುರುಗಳಾದ ಮೌಲಾನ ಅಂಜದ್ ಅಹಮದ್ ಧರ್ಮ ಪ್ರವಚನ ಬೋಧಿಸಿದರು. ಪ್ರಾರ್ಥನೆ ಬಳಿಕ ಮುಸ್ಲಿಮ್ ಬಂಧುಗಳು ತಮ್ಮ ಹಿತೈಷಿಗಳು, ಬಂಧುಗಳೊಂದಿಗೆ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ತಮ್ಮನ್ನು ಅಗಲಿದ ಪೂರ್ವಿಕರ ಸಮಾದಿಗಳಿಗೆ ಇದೆ ವೇಳೆ ಪುಷ್ಪಗಳನ್ನು ಚೆಲ್ಲಿ ಅವರ ಮುಕ್ತಿಗಾಗಿ ಅಲ್ಲಾನಲ್ಲಿ ಪ್ರಾರ್ಥಿಸಿದರು.

ಕಟ್ಟೆಯೊಳಗೆ ಬಿದ್ದು ಬೈಕ್ ಸವಾರ ಸಾವು

ಬೇಗೂರು: ಚಿಕ್ಕಹುಂಡಿ ಗೇಟ್ ಬಳಿಯ ಕಟ್ಟೆಯೊಳಗೆ ಬೈಕ್ ಸವಾರ ಬಿದ್ದ ಪರಿಣಾಮ ಸಾವನ್ನಪ್ಪಿರುವ ಘಟನೆ ನಿನ್ನೆ ನಡೆದಿದೆ. ಕೇರಳ ಪಾಲಕ್ಕಾಡ್ ಜಿಲ್ಲೆಯ ಮನ್ನಾರ್ ಕಾಡಿನ ನಿವಾಸಿ ಸೈಯದ್ ಸಲಿಂ ಪಾಷ (44) ಸಾವನ್ನಪ್ಪಿರುವ ದುರ್ದೈವಿ. ನಂಜನ ಗೂಡು ಕಡೆಯಿಂದ ಬೈಕ್‌ನಲ್ಲಿ ಬರುತ್ತಿದ್ದಾಗ ಮುಂಜಾನೆ ಚಿಕ್ಕಹುಂಡಿ ಗೇಟ್ ಬಳಿಯ ಕಟ್ಟೆಯೊಳಗೆ ಹೋಗಿ ಬಿದ್ದಿದ್ದಾನೆ. ಈ ವಿಷಯ ತಿಳಿದ ಬೇಗೂರು ಪೊಲೀಸರು ಸ್ಥಳಕ್ಕಾಗಮಿಸಿ ಶವವನ್ನು ಆಸ್ಪತ್ರೆಯ ಶವಾಗಾರದಲ್ಲಿ ಇರಿಸಿದ್ದಾರೆ.

ಜೂ.10 ರಂದು ತಾಪಂ ಕೆಡಿಪಿ ಸಭೆ

ಚಾಮರಾಜನಗರ: ತಾಲೂಕು ಮಟ್ಟದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆಯಲ್ಲಿ ಜೂ.10ರ ಬೆಳಿಗ್ಗೆ 10.30ಕ್ಕೆ ತಾಪಂ ಸಭಾಂಗಣದಲ್ಲಿ ನಡೆಯಲಿದೆ ಎಂದು ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

ಚಾಮರಾಜನಗರದಾದ್ಯಂತ ಶ್ರದ್ಧಾ ಭಕ್ತಿಯಿಂದ ಬಕ್ರೀದ್ ಆಚರಣೆ



ಚಾಮರಾಜನಗರದ ಮುಸ್ಲಿಂ ಬಾಂಧವರಿಂದ ಬಕ್ರೀದ್ ಹಬ್ಬವನ್ನು ಆಚರಿಸಲಾಯಿತು.

ಚಾಮರಾಜನಗರ: ತ್ಯಾಗ, ಬಲಿದಾನದ ಪ್ರತೀಕವಾದ ಬಕ್ರೀದ್ ಹಬ್ಬವನ್ನು ಜಿಲ್ಲೆಯಾದ್ಯಂತ ಶನಿವಾರ ಮುಸ್ಲಿಂ ಬಾಂಧವರು ಸಡಗರ ಸಂಭ್ರಮದಿಂದ ಆಚರಿಸಿದರು.

ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕು ಕೇಂದ್ರಗಳು ಸೇರಿದಂತೆ ಇತರೆ ಹೋಬಳಿ, ಗ್ರಾಮಗಳಲ್ಲಿ ಈದ್ಗಾ ಮೈದಾನಕ್ಕೆ ತೆರಳಿದ ಮುಸ್ಲಿಂ ಬಾಂಧವರು ಆಯಾಯ ಕೇಂದ್ರಗಳಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.


ನಗರದ ಸೋಮವಾರಪೇಟೆ ಹಾಗೂ ಪಾಲಿಟೆಕ್ನಿಕ್ ಕಾಲೇಜು ಹಿಂಭಾಗದಲ್ಲಿರುವ ಈದ್ಗಾ ಮೈದಾನಗಳಲ್ಲೂ ಶನಿವಾರ ಬೆಳಗ್ಗೆ ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ಇಸ್ಲಾಂ ಧರ್ಮೀಯರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಬಳಿಕ, ಒಬ್ಬರಿಗೊಬ್ಬರು ಅಪ್ಪಿಕೊಂಡು, ಕೈ–ಕೈ ಕುಲುಕುವ ಮೂಲಕ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರೆ, ಹೊಸಬಟ್ಟೆ ತೊಟ್ಟು ಕಂಗೊಳಿಸುತ್ತಿದ್ದ ಚಿಣ್ಣರು ಪರಸ್ಪರ ಅಪ್ಪಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು.

ಹಿರಿಯರು– ಕಿರಿಯರು ಎಂಬ ಭೇದವಿಲ್ಲದೆ ಮಸೀದಿ ಹಾಗೂ ಈದ್ಗಾ ಮೈದಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಪ್ರಾರ್ಥನೆ ಮುಗಿಸಿ ಬಂದ ನಂತರ ಹಿರಿಯರನ್ನು ಸ್ಮರಿಸಿದರು. ಹಬ್ಬದ ಅಂಗವಾಗಿ ನಗರದ ಈದ್ಗಾ ಮೈದಾನಕ್ಕೆ ಶಾಸಕಸಿ. ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಮುಸ್ಲಿಂ ಬಾಂಧವರಿಗೆ ಹಬ್ಬದ ಶುಭಾಶಯವನ್ನು ಕೋರಿದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 08-06-2025

ನಗರ ಬದುಕಿನ ರೂಪಕ ಮುಂಬೈ ಜಾತಕ





ಹಸನ್ಮುಖದ ಹಳ್ಳಿಗಳು ಮರೆಯಾಗುತ್ತಿವೆ. ಜೀವಕೋಶವಷ್ಟೇ ಉಳಿದು ಭಾವಕೋಶ ಬರಿದಾಗುತ್ತಿದೆ. ಗಿಡ-ಮರಗಳು ಧರೆಗೆ ಉರುಳುತ್ತಿವೆ. ಮಳೆ ಬಿದ್ದ ನೆಲದಲ್ಲಿ ಕೆರೆಗಳೇ ನಿರ್ಮಾಣವಾಗುತ್ತಿವೆ. ಕರುಳ ರಸಬಳ್ಳಿ ಕೃತಕವಾಗುತ್ತಿದೆ. ಕೇವಲ ಹೊಣೆಗಾರಿಕೆಯಿಂದ ಪೋಷಕರನ್ನು ಕಾಪಾಡುವಿಕೆ, ಅಂತೆಯೇ ನಮ್ಮ ಸುತ್ತಲಿನ ಇಟ್ಟಿಗೆ ಕಟ್ಟಡಗಳು ಎಲ್ಲವನ್ನೂ ನುಂಗಿಬಿಡುತ್ತಿವೆ. ಆಕಾಶದಲ್ಲಿ ಸೂರ್ಯನ ನಗು ಕಾಣದಾಗಿದೆ, ಚಂದ್ರ ಕಳೆಗುಂದಿದ್ದಾನೆ. ಮತ್ತು ಬೆಳಕಿನ ಬದುಕು ಬಣಗುಡುತ್ತಿದೆ. ಮೋಡಗಳು ನಿರ್ದಿಷ್ಟ ದಿಕ್ಕಿಲ್ಲದೆ ಅಲೆಯುತ್ತಿವೆ, ಹಾಗೆಯೇ ನಗರಗಳು ತಲೆ ಎತ್ತಿ, ತಮ್ಮ ವಿಸ್ತಾರಕ್ಕೆ ತಾವೇ ಬೀಗುತ್ತಿವೆ. ನಮ್ಮ ಕಣ್ಣಾಯಿಸಿದ ಕಡೆಯೆಲ್ಲ ರಸ್ತೆಗಳು ಸತ್ತ ಹೆಣಗಳಂತೆ ಚಾಚಿಕೊಂಡಿವೆ. ಹಸಿರನ್ನು ಉಸಿರು ಎಂದು ಭಾವಿಸಿ, ಆ ಜೀವಾಮೃತವನ್ನು ಹೀರಿಕೊಳ್ಳಲು ಬಾಯಿ ತೆರೆದರೆ, ಕಾಂಕ್ರೀಟ್ ಎಂಬ ಶತ್ರು ಕತ್ತು ಹಿಸುಕಿ ಕೊಂದೇ ಬಿಡುತ್ತದೆ. ಪಾಪದ ಗರಿಕೆ ಹುಟ್ಟುವಾಗಲೇ ತನ್ನ ಮರಣವನ್ನು ಕಾಣುತ್ತಿದೆ. ಬಿಸಿಲು ಮೈಕೊಡವಿ ಬೀಗಿದಾಗ, ಅದೇ ಬಿಸಿಲು ಧರೆಯನ್ನು ಹಬೆಯಾಡುವ ಹೊಗೆಯನ್ನಾಗಿಸುತ್ತದೆ. ನಗರಗಳ ಈ ವಿಸ್ತಾರದ ಧೂಳು ಉತ್ತರಿಸಲಾಗದಂತಹ ಗೋಳನ್ನು ಸೃಷ್ಟಿಸಿದೆ.

ನಗರವೆಂದರೆ ನರಕವನ್ನು ಸಂಪಾದಿಸುವ ಆರೋಗ್ಯ ಕೇಂದ್ರ ಎಂಬಂತಾಗಿದೆ. ಬೀದಿ-ಬೀದಿಗೂ, ಹೆಜ್ಜೆ-ಹೆಜ್ಜೆಗೂ ವಿಷವನ್ನು ಉಣಿಸುವ ಭವ್ಯ ಭವನಗಳು ಮತ್ತು ಅನ್ನಪೂರ್ಣೇಶ್ವರಿಯ ಕುಟೀರಗಳು ಎದ್ದು ನಿಂತಿವೆ. ಕಣ್ಣಾಯಿಸಿದಷ್ಟು ಬರೀ ಬೃಹತ್ ಮನೆಗಳು, ಭಾರವಾಗುವ ಭಾವನೆಗಳನ್ನು ಮೂಡಿಸುತ್ತವೆ. ಗಿಡ-ಮರಗಳು ತಮ್ಮ ಪಾತ್ರಗಳಿಂದ ಛಿದ್ರಗೊಂಡು ಭೀಕರವಾಗಿ ನರಳಿ ಸಾಯುತ್ತಿವೆ. ಪ್ರತಿಯೊಂದು ಬಾಗಿಲಿಗೂ ಬೀಗದ ಮುದ್ರೆ ಬಿದ್ದಿದೆ. ಲಕ್ಷಗಟ್ಟಲೆ ಸಂಪಾದಿಸಿದರೂ, ಅದನ್ನೇ ಅಲಕ್ಷ್ಯದಿಂದ ಖರ್ಚು ಮಾಡಿದರೂ ನೆಮ್ಮದಿಯ ನಿದ್ರೆ ಬರುವುದಿಲ್ಲ. ಅಪನಂಬಿಕೆಗಳು ಬುಸುಗುಡುತ್ತಿವೆ, ಅಪಪ್ರಚಾರಗಳು ವ್ಯಾಪಕವಾಗಿ ಹರಡುತ್ತಿವೆ. ಶ್ವಾಸದಲ್ಲಿ ವಿಶ್ವಾಸ ಉಳಿದಿಲ್ಲ, ಭಾವಕೋಶವು ಸಮಾಧಿಯೇರಿದೆ. ನಗರಕ್ಕೂ ನರಕಕ್ಕೂ ಭೇದವಿಲ್ಲವಾಗಿದೆ.

ಭೂಮಾತೆಯ ಗರ್ಭದಲ್ಲಿ ಮನುಷ್ಯನೆಂಬ ಶನಿಸಂತಾನ ಹುಟ್ಟಿದ್ದು, ಮಾಡಬಾರದ ಘನಘೋರ ಕೃತ್ಯಗಳನ್ನು ಎಸಗುತ್ತಿದ್ದಾನೆ. ಇಲ್ಲಿ ಭರವಸೆಯಾದರೂ ಎಲ್ಲಿದೆ? ಮೀನು ನೀರನ್ನು ಅಗಲಿ ಹೇಗೆ ಉಸಿರಾಡಲು ಸಾಧ್ಯವಿಲ್ಲವೋ, ಅದೇ ರೀತಿ ಮನುಷ್ಯನ ನಿಜವಾದ ಬದುಕು ಪ್ರಕೃತಿಯಿಂದ ದೂರಾಗಿ ಅನಾಥವಾಗಿದೆ. ಈ ಎಲ್ಲಾ ಬಗೆಯ ಸಂಗತಿಗಳನ್ನು ಧಾರಣೆಯಾಗಿಸಿಕೊಂಡು ರಚನೆಯಾಗಿರುವ ಅದ್ಭುತವಾದ ಕವಿತೆ ಎಂದರೆ 'ಮುಂಬೈ ಜಾತಕ'. ಕನ್ನಡ ಜೀವಚೈತನ್ಯಕ್ಕೆ ವರವಾಗಿ ದೊರೆತ ಕವಿಹೃದಯ ಡಾ.ಜಿ.ಎಸ್. ಶಿವರುದ್ರಪ್ಪ ಅವರದ್ದು. ಗೇಯತೆ ಮಾಧುರ್ಯತೆ ಭಾವಕೋಶದಿಂದ ಕವಿತೆಗಳ ಕಡೆದು ಕವಿಭಾವದಿಂದ ಸಹೃದಯರ ಹೃದಯ ಗರ್ಭದಲ್ಲಿ ನೆಲೆಗೊಂಡಿದ್ದಾರೆ. ಸಾಹಿತ್ಯ ಬೇರೆ ಬೇರೆ ಪ್ರಕಾರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕನ್ನಡದ ಸಾಹಿತ್ಯ ಕಣಜವನ್ನು ಸಮೃದ್ಧಗೊಳಿಸಿದ ಹಿರಿಮೆ ಅವರದಾಗಿದೆ. ಅವರು ನಮ್ಮ ಕನ್ನಡದ ಕವಿ, ಜನಮಿಡಿತದ ಕವಿ, ಮನಮಿಡಿತಕ್ಕೆ ಅಕ್ಷರಗಳ ಪೋಣಿಸಿ ಭಾವದ ಕಡಲನ್ನು ಹರಿಸಿದ ಕವಿ, ಎಲ್ಲಕ್ಕೂ ಕಿರೀಟ ಪ್ರಾಯವಾಗಿ ನಿಲ್ಲುವ ರಾಷ್ಟ್ರಕವಿ ಎಂಬ ಬಿರುದನ್ನು ಧಾರಣೆ ಮಾಡಿಕೊಂಡಿರುವ ಕವಿಯಾಗಿದ್ದಾರೆ.

ಇಂತಹ ಶ್ರೇಷ್ಠಭಾವದಿಂದ ಸಮನ್ವಯ ಕವಿ ಎಂದು ಕರೆಸಿಕೊಂಡಿರುವ ಡಾ. ಜಿ.ಎಸ್. ಶಿವರುದ್ರಪ್ಪನವರ 'ಮುಂಬೈ ಜಾತಕ' ಕವಿತೆಯು ಆಧುನಿಕ ನಗರ ಜೀವನದ ಯಾಂತ್ರಿಕತೆ, ಕೈಗಾರೀಕೀಕರಣ, ಮಾನವ ಸಂಬಂಧಗಳ ಸಂಕೀರ್ಣತೆ ಮತ್ತು ಕಳೆಗುಂದಿದ ವ್ಯಕ್ತಿತ್ವದ ಸ್ಥಿತಿಗತಿಗಳನ್ನು ಅತ್ಯಂತ ಸೂಕ್ಷ್ಮವಾಗಿ, ಮಾರ್ಮಿಕವಾಗಿ ಮತ್ತು ವಾಸ್ತವಿಕ ನೆಲೆಯಲ್ಲಿ ಚಿತ್ರಿಸಿರುವ ಕವಿತೆಯಾಗಿದೆ. ಇಡೀ ಕವಿತೆಯು ಅರ್ಜಿ ನಮೂನೆಯಲ್ಲಿದ್ದು, ಯಾರಾದರೂ ಆಗಬಹುದಾದ, ಯಾರಿಗಾದರೂ ಅನ್ವಯಕೆ ಒಳಗು ಮಾಡಬಹುದಾದ ಬದುಕಿನ ಅನಾವರಣವಾಗಿದೆ.

'ಮುಂಬೈ ಜಾತಕ' ಕವಿತೆಯು ಮುಂಬೈ ನಗರದಂತಹ ಮಹಾನಗರದಲ್ಲಿ ಬದುಕುವ ಒಂದು ಕುಟುಂಬದ, ವಿಶೇಷವಾಗಿ ಒಂದು ಮಗುವಿನ ದೃಷ್ಟಿಕೋನದಿಂದ, ನಗರ ಜೀವನದ ಕಠಿಣ ವಾಸ್ತವಗಳನ್ನು ಅನಾವರಣಗೊಳಿಸುತ್ತದೆ. ಇಲ್ಲಿ ಪೋಷಕರು ತಮ್ಮ ಕೆಲಸದ ನಿಮಿತ್ತ ಅತಿಯಾಗಿ ತೊಡಗಿಸಿಕೊಂಡು, ಮಕ್ಕಳೊಂದಿಗೆ ಸಮಯ ಕಳೆಯಲು ಸಾಧ್ಯವಾಗದ ಸ್ಥಿತಿಯನ್ನು ಕಾಣಬಹುದು. ಮಗುವಿನ ಶಿಕ್ಷಣ, ಪೋಷಕರ ಕೃತಕ ಜವಾಬ್ದಾರಿಗಳು, ಮತ್ತು ಯಾಂತ್ರಿಕ ಬದುಕಿನಿಂದಾಗಿ ಕಳೆದು ಹೋಗುವ ಬಾಲ್ಯ, ಪ್ರಕೃತಿಯೊಂದಿಗಿನ ಸಂಬಂಧ, ಮತ್ತು ನಿಜವಾದ ಮಾನವೀಯ ಮೌಲ್ಯಗಳ ಕುರಿತು ಕವಿ ಆಳವಾಗಿ ಚಿಂತಿಸಿದ್ದಾರೆ.

ನಗರೀಕರಣದ ವಿಡಂಬನೆ: ಕವಿತೆಯು ನಗರಕ್ಕೆ ವಲಸೆ ಬರುವವರ ಸಂಖ್ಯೆ ಹೆಚ್ಚುತ್ತಿರುವ ಇಂದಿನ ದಿನಮಾನಗಳಿಗೆ ಹೆಚ್ಚು ಪ್ರಸ್ತುತವಾಗಿದೆ. ಪ್ರಕೃತಿಯಿಂದ ದೂರ ಸರಿದು, ಕೃತಕವಾದ ನಗರ ಜೀವನಕ್ಕೆ ಹೊಂದಿಕೊಳ್ಳುವ ಅನಿವಾರ್ಯತೆ, ಮತ್ತು ಅದರ ಪರಿಣಾಮವಾಗಿ ನಾಗರಿಕರ ಬದುಕು ಹೇಗೆ ನಿಸ್ಸಾರವೂ, ನಿರ್ವೀರ್ಯವೂ ಆಗುತ್ತದೆ ಎಂಬುದನ್ನು ಕವಿ ದೃಶ್ಯವತ್ತಾಗಿ ಕಟ್ಟಿಕೊಡುತ್ತಾರೆ. ನಗರದಲ್ಲಿನ ಭಾಷಾ ವಲಯದ ಕುಗ್ಗುವಿಕೆ, ಜನಸಮೂಹದಿಂದ ವ್ಯಕ್ತಿಗಳು ದೂರವಾಗುವ ಸೈಬರ್ ಬದುಕು ಇತ್ಯಾದಿಗಳನ್ನು ಕವಿತೆ ಸೂಚಿಸುತ್ತದೆ. ಅಂತೆಯೇ ದಿಢೀರ್ ಬದುಕಲ್ಲಿ ದಿಢೀರ್ ಆಹಾರದ ಮೋಹ ಪಾಶಕ್ಕೆ ಸಿಲುಕಿ, ದಿಢೀರ್ ಬಂದು ಎರಗುವ ಕಾಲರಾಯನ ಬಾಯಿಗೆ ಆಹಾರವಾಗುತ್ತಾ-ಸಾವಿನ ದವಡೆಗೆ ತುತ್ತಾಗುವ ಪರಿ ಆಧುನಿಕತೆಗೆ ಬಡಿದ ಗರವಾಗಿದೆ... ಧನ ಉಂಟು ಇಂಧನವಿಲ್ಲದ ಹೀನ ಸ್ಥಿತಿಯಂತೆ ಹಣವುಂಟು ಅನ್ನವಿಲ್ಲವಾಗಿ ಅನ್ನಕ್ಕಾಗಿ ಕಿತ್ತು ತಿನ್ನುವ ದಿನಗಳ ಎಣಿಕೆಯಲ್ಲಿ ನರನು ಇರುವುದು ಶೋಚನೀಯ. ಮೊದಲ ಸಾಲುಗಳಲ್ಲಿ ಬರಗಾಲ ಪೀಡಿತದ ಬಯಲಲ್ಲಿ ಹಸಿವು ನೀಗಿಸಿಕೊಳ್ಳಲು ನಿಂತ ರಣಹದ್ದು ಒಂದು ಕಡೆಯಾದರೆ ಹಸಿವಿನಿಂದ ಕಂಗಾಲಾಗಿರುವ ಪುಟಾಣಿ ಬಾಲಕನೇ ರಣಹದ್ದಿಗೆ ಆಹಾರದ ರೂಪು ಧರಿಸಿರುವ ಹೀನಸ್ಥಿತಿ ಕರುಳನ್ನು ಹಿಂಡುವುದಾಗಿದೆ.

ಯಾಂತ್ರಿಕ ಬದುಕು ಮತ್ತು ಮಾನವ ಸಂಬಂಧಗಳ ಸವೆತ: ಕವಿತೆಯಲ್ಲಿ ಚಿತ್ರಣಗೊಂಡಿರುವ ಮಗುವಿನ ತಂದೆ-ತಾಯಿಗಳು ತಮ್ಮ 'ಕೃತಕ ಜವಾಬ್ದಾರಿ'ಗಳನ್ನು ನಿರ್ವಹಿಸುವ ಯಂತ್ರಗಳಂತಿದ್ದಾರೆ. 'ಮಗು ಏಳುವ ಮೊದಲೇ ಮನೆಬಿಟ್ಟು ಕೆಲಸಕ್ಕೆ ತೆರಳಿದವನು, ಮಗು ಮಲಗಿದ ಮೇಲೆ ಮನೆ ಸೇರುವವನು ತಂದೆ' ಎಂಬಂತಹ ಸಾಲುಗಳು, ಪೋಷಕರ ಬದುಕಿನ ನಿರಂತರ ಓಟವನ್ನು ಮತ್ತು ಮಕ್ಕಳೊಂದಿಗೆ ವಾತ್ಸಲ್ಯಭರಿತ ಒಡನಾಟದ ಕೊರತೆಯನ್ನು ಎತ್ತಿ ತೋರಿಸುತ್ತವೆ. ಹಣ ಗಳಿಕೆ ಮತ್ತು ಉದ್ಯೋಗವೇ ಪ್ರಧಾನವಾದಾಗ, ಕುಟುಂಬ ಸಂಬಂಧಗಳು ಹೇಗೆ ತೆಳುವಾಗುತ್ತವೆ ಎಂಬುದರ ಕುರಿತು ಇದು ಪ್ರಬಲವಾದ ಟೀಕೆಯಾಗಿದೆ.

ಬಾಲ್ಯದ ನಿರ್ಜೀವೀಕರಣ: ನಗರದ ಮಕ್ಕಳು 'ಶಾಲಾ-ಕಾಲೇಜುಗಳು ಕಲಿಸಿದ್ದು, ಬೀದಿ ಬದಿಯ ಜಾಹೀರಾತು ತಲೆಗೆ ತುರುಕಿದ್ದು, ರೇಡಿಯೋ ಸಿಲೋನ್ ವಿಭಾಗದ ಶಿಫಾರಸ್ಸು ಬಿಟ್ಟರೆ ಮಗು ತಾನಾಗಿ ಕಲಿತಿದ್ದು ಕಡಿಮೆ' ಎಂಬ ಮಾತು, ಮಕ್ಕಳು ತಮ್ಮ ಸಹಜ ಕುತೂಹಲ, ಆಲೋಚನಾ ಶಕ್ತಿ ಮತ್ತು ಸ್ವಯಂ ಕಲಿಕೆಯ ಅವಕಾಶಗಳನ್ನು ಕಳೆದುಕೊಂಡು, ಒಂದು ಕೃತಕ ವ್ಯವಸ್ಥೆಯ ಉತ್ಪನ್ನಗಳಾಗಿ ಬೆಳೆಯುವುದನ್ನು ಸೂಚಿಸುತ್ತದೆ. ಇದು ಮಕ್ಕಳಲ್ಲಿ ಸ್ವಂತಿಕೆ ಮತ್ತು ಸೃಜನಶೀಲತೆಯ ಅಭಾವವನ್ನು ಎತ್ತಿ ತೋರಿಸುತ್ತದೆ.

> **ನಗರವೆಂದರೆ ನರಕವನ್ನು ಸಂಪಾದಿಸುವ ಆರೋಗ್ಯ ಕೇಂದ್ರ ಎಂಬಂತಾಗಿದೆ. ಬೀದಿ-ಬೀದಿಗೂ, ಹೆಜ್ಜೆ-ಹೆಜ್ಜೆಗೂ ವಿಷವನ್ನು ಉಣಿಸುವ ಭವ್ಯ ಭವನಗಳು ಮತ್ತು ಅನ್ನಪೂರ್ಣೇಶ್ವರಿಯ ಕುಟೀರಗಳು ಎದ್ದು ನಿಂತಿವೆ. ಕಣ್ಣಾಯಿಸಿದಷ್ಟು ಬರೀ ಬೃಹತ್ ಮನೆಗಳು, ಭಾರವಾಗುವ ಭಾವನೆಗಳನ್ನು ಮೂಡಿಸುತ್ತವೆ. ಗಿಡ-ಮರಗಳು ತಮ್ಮ ಪಾತ್ರಗಳಿಂದ ಛಿದ್ರಗೊಂಡು ಭೀಕರವಾಗಿ ನರಳಿ ಸಾಯುತ್ತಿವೆ. ಪ್ರತಿಯೊಂದು ಬಾಗಿಲಿಗೂ ಬೀಗದ ಮುದ್ರೆ ಬಿದ್ದಿದೆ. ಲಕ್ಷಗಟ್ಟಲೆ ಸಂಪಾದಿಸಿದರೂ, ಅದನ್ನೇ ಅಲಕ್ಷ್ಯದಿಂದ ಖರ್ಚು ಮಾಡಿದರೂ ನೆಮ್ಮದಿಯ ನಿದ್ರೆ ಬರುವುದಿಲ್ಲ. ಅಪನಂಬಿಕೆಗಳು ಬುಸುಗುಡುತ್ತಿವೆ, ಅಪಪ್ರಚಾರಗಳು ವ್ಯಾಪಕವಾಗಿ ಹರಡುತ್ತಿವೆ. ಶ್ವಾಸದಲ್ಲಿ ವಿಶ್ವಾಸ ಉಳಿದಿಲ್ಲ, ಭಾವಕೋಶವು ಸಮಾಧಿಯೇರಿದೆ. ನಗರಕ್ಕೂ ನರಕಕ್ಕೂ ಭೇದವಿಲ್ಲವಾಗಿದೆ.**

ಆಧುನಿಕ ಶಿಕ್ಷಣ ವ್ಯವಸ್ಥೆಯ ವಿಡಂಬನೆ: ಕವಿತೆಯು ಆಧುನಿಕ ಶಿಕ್ಷಣ ವ್ಯವಸ್ಥೆಯ ಸೀಮಿತತೆಗಳನ್ನು ಪ್ರಶ್ನಿಸುತ್ತದೆ. ಪಠ್ಯಪುಸ್ತಕಗಳ ಜ್ಞಾನ ಮತ್ತು 'ತಲೆಗೆ ತುಂಬಿಸುವ' ಮಾಹಿತಿ, ಮಕ್ಕಳನ್ನು ನಿಜವಾದ ಜೀವನದಿಂದ ದೂರ ಮಾಡುತ್ತದೆ ಎಂದು ಕವಿ ಆತಂಕ ವ್ಯಕ್ತಪಡಿಸುತ್ತಾರೆ. ಇದು ಕಲಿಕೆಯು ಬದುಕಿನ ಅನುಭವಗಳಿಂದ ದೂರ ಸರಿದು, ಕೇವಲ ಯಾಂತ್ರಿಕವಾಗುವುದರ ದುರಂತ ಪರಿಣಾಮವನ್ನು ಸೂಚಿಸುತ್ತದೆ.

ಸಮನ್ವಯತೆ ಮತ್ತು ಮಾನವೀಯ ಸ್ಪರ್ಶ: ಜಿ.ಎಸ್.ಶಿವರುದ್ರಪ್ಪನವರು 'ಸಮನ್ವಯ ಕವಿ' ಎಂದೇ ಹೆಸರಾದವರು. ಅವರ ಕವಿತೆಗಳಲ್ಲಿ ಕಾವ್ಯದ ಗೇಯತೆ ಮತ್ತು ಗಟ್ಟಿತನ ಎರಡೂ ಮೇಳೈಸುತ್ತವೆ. 'ಮುಂಬೈ ಜಾತಕ' ಕವಿತೆಯು ಓದುಗರ ಮನಸ್ಸನ್ನು ತಟ್ಟುವಂತಹ ಸರಳ ಭಾಷೆ ಮತ್ತು ಪ್ರಬಲವಾದ ದೃಶ್ಯಾವಳಿಗಳನ್ನು ಒಳಗೊಂಡಿದೆ. ನಗರದ ಯಾಂತ್ರಿಕ ಬದುಕಿನ ಕಠಿಣತೆಯನ್ನು ಚಿತ್ರಿಸುವಾಗಲೂ, ಮಾನವೀಯ ಸ್ಪರ್ಶವನ್ನು ಕವಿ ಮರೆತಿಲ್ಲ.

'ಮುಂಬೈ ಜಾತಕ' ಕವಿತೆಯು ಡಾ. ಜಿ.ಎಸ್.ಶಿವರುದ್ರಪ್ಪನವರ ಕಾವ್ಯದ ಆಳ, ಸಾಮಾಜಿಕ ಪ್ರಜ್ಞೆ ಮತ್ತು ಬದುಕಿನ ವಾಸ್ತವಗಳನ್ನು ನಿರರ್ಗಳವಾಗಿ ಕಟ್ಟಿಕೊಡುವ ಸಾಮರ್ಥ್ಯಕ್ಕೆ ಉತ್ತಮ ಉದಾಹರಣೆಯಾಗಿದೆ. ಇದು ಕೇವಲ ಮುಂಬೈ ನಗರದ ಜಾತಕವಲ್ಲ, ಬದಲಿಗೆ ಆಧುನಿಕ ಜಗತ್ತಿನ ಯಾವುದೇ ಮಹಾನಗರದ ಜಾತಕವೂ ಆಗಬಹುದು. ನಗರೀಕರಣದ ಅನಿವಾರ್ಯತೆ, ಅದರೊಂದಿಗೆ ಬರುವ ಸವಾಲುಗಳು, ಮತ್ತು ಮಾನವ ಸಂಬಂಧಗಳ ಮೇಲೆ ಅದು ಬೀರುವ ಪರಿಣಾಮಗಳ ಕುರಿತು ಕವಿ ಆಳವಾದ ವಿಮರ್ಶೆ ನೀಡಿದ್ದಾರೆ. ಕವಿತೆಯು ಓದುಗರಿಗೆ ತಮ್ಮ ಬದುಕಿನ ಆಯ್ಕೆಗಳು, ಸಂಬಂಧಗಳು ಮತ್ತು ಮೌಲ್ಯಗಳ ಕುರಿತು ಮರುಚಿಂತಿಸುವಂತೆ ಪ್ರೇರೇಪಿಸುತ್ತದೆ. ಇದು ಶಿವರುದ್ರಪ್ಪನವರ ಶ್ರೇಷ್ಠ ಕವಿತೆಗಳಲ್ಲಿ ಒಂದಾಗಿದ್ದು, ಇಲ್ಲಿಯ ಎಲ್ಲಾ ಸಂಗತಿಗಳು ಕೇವಲ ಮುಂಬೈನಂತಹ ಬೃಹತ್ ನಗರಗಳಿಗೆ ಸೀಮಿತವಾಗಿರದೆ ನಮ್ಮ ಕರ್ನಾಟಕದ ಬೆಂಗಳೂರು, ಮೈಸೂರಿನಂತಹ ನಗರಗಳಿಗೂ ಅನ್ವಯವಾಗುವ ವಾಸ್ತವತೆಯ ಕಿನೆರಳು ಹೃದಯಂಗಮವಾಗಿ ಮೂಡಿ ಬಂದಿದೆ. ಕವಿತೆಯ ಪ್ರಸ್ತುತತೆ ವಿಸ್ತಾರವಾಗಿದೆ.



ಪರಮೇಶ ಕೆ.ಉತ್ತನಹಳ್ಳಿ
ಹವ್ಯಾಸಿ ಬರಹಗಾರರು
ಮೊ.: 7795862281

ಮಕ್ಕಳ ಚಿತ್ರಕಥೆ: ಗೋಡೆಗೆ ಹೊಡೆದ ಮೊಳೆಗಳು

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಮಾತು ಮಾತಿಗೂ "ಕೋಪ ಬರುತ್ತಿದೆ" ಎನ್ನುತ್ತಿದ್ದ ಮಗನ ಮುಂಗೋಪ ಕಂಡು ಚಿಂತಿತನಾಗಿದ್ದ ತಂದೆ ತಲೆ ಮೇಲೆ ಕೈ ಹೊತ್ತು ಕುಳಿತುಬಿಡುತ್ತಿದ್ದ. ಆಗ ತಂದೆಗೆ ದೀರ್ಘಕಾಲ ಯೋಚಿಸಿದ ನಂತರ ಸಮಸ್ಯೆಗೆ ಪರಿಹಾರ ಹೊಳೆಯಿತು.




ಮಾರನೇ ದಿನ ಮಗನಿಗೆ ತಂದೆಯು ಕೆಲವು ಮೊಳೆಗಳನ್ನು ಕೊಟ್ಟು "ನಿನಗೆ ನಿತ್ಯವೂ ಎಷ್ಟು ಮಂದಿಯ ಮೇಲೆ ಕೋಪ ಬರುತ್ತದೆಯೋ ಅಷ್ಟು ಮೊಳೆಗಳನ್ನು ಗೋಡೆಗೆ ಹೊಡಿ" ಎಂದು ಹೇಳುತ್ತಾನೆ.




ಮೊದಲ ದಿನ 20, ಬಳಿಕ 15, ಮಾರನೇ ದಿನ 10...ಹೀಗೆ ತನ್ನ ಕೈಯಲ್ಲಿರುವ ಮೊಳೆಗಳನ್ನೆಲ್ಲಾ ಹೊಡೆದು ಮುಗಿಸಿಬಿಟ್ಟ ಮಗ. ನಂತರ ತಂದೆಯ ಬಳಿ ಬಂದು "ಅಪ್ಪಾ... ನೀವು ಕೊಟ್ಟ ಮೊಳೆಗಳೆಲ್ಲಾ ಮುಗಿದು ಹೋದವು" ಎಂದ.



ಆಗ ತಂದೆಯು " ಓ...ಅಂದರೆ....ತುಂಬ ಮಂದಿಯ ಮೇಲೆ ಕೋಪ ಬಂದಂತಿದೆ...ಇನ್ಮುಂದೆ ನೀನು ಪ್ರತಿನಿತ್ಯವೂ ಗೋಡೆಗೆ ಹೊಡೆದಿದ್ದ ಮೊಳೆಗಳನ್ನೆಲ್ಲಾ ಹೊರ ತೆಗೆದುಬಿಡು" ಎಂದು ಮಗನಿಗೆ ಹೇಳುತ್ತಾನೆ.



ಬಹಳ ಕಷ್ಟಪಟ್ಟು ಗೋಡೆಗೆ ಹೊಡೆದಿದ್ದ ಮೊಳೆಗಳನ್ನೆಲ್ಲಾ ತೆಗೆದ ಮಗ, ಕೆಲವು ಮೊಳೆಗಳನ್ನು ತೆಗೆಯಲು ಬಹಳ ಕಷ್ಟಪಟ್ಟಿದ್ದ. ನಂತರ ತಂದೆಯ ಬಳಿಗೆ ಹೋಗಿ "ಗೋಡೆಗೆ ಹೊಡೆದಿದ್ದ ಮೊಳೆಗಳನ್ನೆಲ್ಲಾ ತೆಗೆದುಬಿಟ್ಟೆ ಅಪ್ಪಾ..!!!" ಎಂದ. ತಕ್ಷಣ ತಂದೆ "ಹಾಗಿದ್ದರೆ ಈಗ ಗೋಡೆಯು ಹೇಗಿದೆ...?" ಎಂದು ಪ್ರಶ್ನಿಸಿದ.ಆಗ ಮಗ "ಮೊಳೆಗಳನ್ನೇನೋ ತೆಗೆದುಬಿಟ್ಟೆ.. ಆದರೆ ಇದರಿಂದ ಗೋಡೆಗೆ ಆದ ರಂಧ್ರಗಳು ಮಾತ್ರ ಹಾಗೆಯೇ ಇವೆ' ಎಂದ.



ಅದಕ್ಕೆ ತಂದೆ,"ನೋಡಿದೆಯಾ.... ಮೊಳೆಗಳನ್ನು ಹೊಡೆಯುವಾಗ ಸುಲಭವಾಗಿ ಹೊಡೆದೆ..ತೆಗೆಯುವಾಗ ಬಹಳ ಕಷ್ಟಪಟ್ಟೆ ಜೊತೆಗೆ ರಂಧ್ರಗಳು ಮಾತ್ರ ಹಾಗೆಯೇ ಉಳಿದುಕೊಂಡಿವೆ ಅಂದರೆ... ನಮಗೆ ಜನರ ಮೇಲೆ ಕೋಪ ಬರುತ್ತದೆ. ಆಗ ಅವರ ಮನಸ್ಸನ್ನು ಘಾಸಿಪಡಿಸುತ್ತೇವೆ (ಅಂದರೆ, ಮೊಳೆ ಹೊಡೆಯುತ್ತೇವೆ) ಬಳಿಕ "ಸಾರಿ" ಹೇಳುತ್ತೇವೆ (ಅಂದರೆ, ಹೊಡೆದ ಮೊಳೆಗಳನ್ನು ತೆಗೆಯುತ್ತೇವೆ) ಆದರೆ "ಸಾರಿ" ಹೇಳಿದ ಮಾತ್ರಕ್ಕೆ ಅವರ ಮನಸ್ಸಿಗೆ ಆದ ಗಾಯ (ಅಂದರೆ, ರಂಧ್ರಗಳನ್ನು) ಮಾತ್ರ ಮಾಸದು.

ನೀತಿ :- ಹಾಗಾಗಿಯೇ ಮಾತುಗಳು ಬುಲೆಟ್‌ನಂತೆ.. ಯಾವಾಗಲೂ ಅಳೆದು, ತೂಗಿ ಮಾತನಾಡಬೇಕು... ಇತರರಿಗೆ ನೋವಾಗದಂತೆ ಮಾತನಾಡಬೇಕು. ಯಾವಾಗಲೂ ಪ್ರೀತಿಯಿಂದ ಮಾತನಾಡೋಣ...!!!

ವಾರಭವಿಷ್ಯ



8.6.2025 ರಿಂದ 14.6.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ-ವೃಷಭ, ಚಂದ್ರ-ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಜ-ಸಿಂಹ, ಬುಧ-ಮಿಥುನ, ಗುರು-ಮಿಥುನ, ಶುಕ್ರ-ಮೇಷ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.


ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ನಿಮ್ಮ ರಾಶಿಯ ಮೇಲೆ ಬೀಳುವ ಚಂದ್ರ ಗ್ರಹದ ದೃಷ್ಟಿಯ ಫಲವಾಗಿ ಮೈ-ಮನಗಳಲ್ಲಿ ಉತ್ಸಾಹ, ಹುರುಪುಗಳು ಉಂಟಾಗಲಿವೆ. ಸಂತಸ ನೀಡುವ ಹಲವು ಘಟನೆಗಳು ನಿಮ್ಮನ್ನು ಪುಳಕಿತಗೊಳಿಸುತ್ತವೆ. ಕ್ಷೀರ ಜನಿತ ವಸ್ತು ವ್ಯಾಪಾರ, ಹತ್ತಿ ವಸ್ತ್ರ ವ್ಯಾಪಾರಗಳಿಂದ ಹೆಚ್ಚಿನ ಧನಾದಾಯ, ಸರ್ಕಾರಿ ಕಚೇರಿ ಕೆಲಸಗಳು ಕುಂಠಿತಗೊಳ್ಳುವುದು. ಕಫ ಸಂಬಂಧಿ ಅನಾರೋಗ್ಯ ಕಾಡುವುದು.

ಶ್ರೀ ಕಾರ್ತಿಕೇಯ ಪೂಜೆ. ಶುಭ ಸಂಖ್ಯೆ-1



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದ ಪೂರ್ವಾರ್ಧಕ್ಕೆ ಆಸ್ತಿ ವಿಚಾರಗಳು ನಿಮಗೆ ಪೂರಕವಾಗಿದೆ. ಸ್ಥಿರಾಸ್ತಿ ವ್ಯಾಪಾರದಿಂದಲೂ ಧನಾಗಮವಾಗಲಿದೆ. ನಿರೀಕ್ಷಿತ ಹಣ ಕೈಸೇರುವುದು. ಹೊಸ ಹೂಡಿಕೆಗಳನ್ನು ಮಾಡಬಹುದು. ಕುಟುಂಬದಲ್ಲಿ ಉಂಟಾಗಿದ್ದ ಆತಂಕದ ವಾತಾವರಣ ತಿಳಿಯಾಗುವುದು. ಮಹತ್ವದ ಕಾರ್ಯ ಕಲಾಪಗಳಲ್ಲಿ ಮನೆಯ ಹಿರಿಯರ ಮಾರ್ಗದರ್ಶನದಿಂದ ಅನುಕೂಲವಾಗುವುದು.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-2



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಆದಿಗೆ ಇಷ್ಟ ಕಾರ್ಯ ಸಿದ್ಧಿ, ಧನಲಾಭ, ತೇಜೋವೃದ್ಧಿ, ಪ್ರಭಾವಿಗಳೆನಿಸಿ ಬಯಸಿದ್ದನ್ನು ಪಡೆಯುವಿರಿ. ಕ್ಷೀರಾನ್ನ, ಮಧುರ ಪದಾರ್ಥ ಭಕ್ಷಣೆ. ನೀವು ಮಾಡುವ ಕಸುಬಿನಲ್ಲಿ ಪ್ರತಿಸ್ಪರ್ಧಿಗಳು ವೃದ್ಧಿಸುವರು. ಸ್ವಂತ ಜನರಿಂದಲೇ ವ್ಯಾಕುಲತೆಗೆ ಗುರಿಯಾಗುವಿರಿ. ಗೋವು ಸಮುದಾಯದಿಂದ ನಷ್ಟ, ಪ್ರಯಾಣಗಳಲ್ಲಿ ಅಪಾಯ ಎದುರಿಸಬೇಕಾಗುವುದು.

ಶ್ರೀ ಸತ್ಯನಾರಾಯಣ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-5



ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ಹೆಚ್ಚಿನ ಗ್ರಹಗಳು ನಿಮ್ಮ ಬಗ್ಗೆ ಮುನಿಸಿಕೊಂಡಿವೆ. ಕೆಲ ಸಮಯ ನೀವು ದುಡುಕದೆ ತಾಳ್ಮೆಯಿಂದ ಇರುವುದೇ ಲೇಸು. ಸಾಂಸಾರಿಕವಾಗಿಯೂ, ವೃತ್ತಿ ರಂಗದಲ್ಲೂ ಸಂಕಷ್ಟಗಳು ಎದುರಾಗಲಿದೆ. ಯಾವುದೇ ಸಮಸ್ಯೆ ಇದ್ದರೂ ರಾಜೀ ಮಾರ್ಗದಿಂದ ಬಗೆಹರಿಸಿಕೊಳ್ಳಿ. 'ಗ್ರಹಾಧೀನಂ ಜಗತ್ಸರ್ವಂ' ಬುದ್ಧಿವಂತಿಕೆಗಿಂತ ವಿಧಿಯಾಟವೇ ಮೇಲು. ವಾರಾಂತ್ಯಕ್ಕೆ ಮನೆದೇವರ ದರ್ಶನದಿಂದ ಮನಃಶಾಂತಿ.

ಶ್ರೀ ಶಿವ ಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-6



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಶ್ರೀ ಗುರುವಿನ ಅನುಗ್ರಹದಿಂದ ನಿಮ್ಮ ಜೀವನದಲ್ಲಿ ಎದುರಾಗುವ ಹೊಸ ಸವಾಲುಗಳನ್ನು ಸಮರ್ಥವಾಗಿ ಎದುರಿಸುವಿರಿ. ನೂತನ ಗೃಹ, ನಿವೇಶನ, ವಾಹನಾದಿ ಖರೀದಿಗೆ ಸಮಯ ಅನುಕೂಲವಾಗುವುದು. ಶುಭ ಚಂದ್ರನ ಸಂಚಾರದಿಂದ ನಿಮ್ಮಲ್ಲಿ ಉತ್ಸಾಹ, ಹುಮ್ಮಸ್ಸುಗಳು ತೋರುವುದು. ಹಲವರಿಗೆ ದವಾಖಾನೆಯಿಂದ ಡಿಸ್ಚಾರ್ಜ್.


ಪುಣ್ಯ ಕ್ಷೇತ್ರ ಪ್ರವಾಸ, ಪುಣ್ಯ ನದಿ ಸ್ನಾನ. ಶ್ರೀ ಗುರು ಸ್ತುತಿ. ಶುಭ ಸಂಖ್ಯೆ-3



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಈ ವಾರದಲ್ಲಿ ಹೊಸ ಆರ್ಥಿಕ ಯೋಜನೆಗಳು, ವ್ಯವಹಾರಗಳು ಸಾಕಾರಗೊಳ್ಳುವ ಸಮಯ. ಶುಭ ಚಂದ್ರನಿಂದ ಸಂಬಂಧಗಳಲ್ಲಿ ಉಂಟಾಗಿದ್ದ ಒತ್ತಡಗಳು ನಿವಾರಣೆ ಆಗುವುದು. ವ್ಯಾಪಾರ ನಿಮಿತ್ತ ಪ್ರವಾಸಗಳನ್ನು ಕೈಗೊಳ್ಳುವಿರಿ. ನಿಮ್ಮ ವಿರೋಧಿಗಳ ಸದ್ದಡಗಿಸುವಿರಿ. ಶಾರೀರಿಕ ಬಲಹೀನತೆ ಕಾಡಿಸಬಹುದು. ವಾರಾಂತ್ಯಕ್ಕೆ ಆರೋಗ್ಯ ಮರುಕಳಿಸುವುದು. ಧೈರ್ಯದಿಂದ ಪ್ರಯತ್ನ ಕಾರ್ಯಗಳನ್ನು ಪೂರೈಸಿಕೊಳ್ಳುವಿರಿ.

ಶ್ರೀ ವಿಷ್ಣು ಸ್ತುತಿ. ಶುಭ ಸಂಖ್ಯೆ-6



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸದಾ ಕ್ರಿಯಾಶೀಲರಾದ ನಿಮಗೆ ನಿಮ್ಮ ರಾಶಿಗೆ ಚಂದ್ರನ ಪ್ರವೇಶದಿಂದ ಬಿಡುವಿಲ್ಲದ ವಾರವೆನಿಸುವುದು. ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬರುವುದು. ಶ್ರೀ ಶನಿದೇವ ಶುಭನಿದ್ದು ಪ್ರಮುಖ ವಿಷಯಗಳಲ್ಲಿ ಶತ್ರು ನಿಗ್ರಹ, ಋಣ ಮುಕ್ತಿಗಳಂತಹ ಪ್ರಸಂಗಗಳು ಸಂಭವಿಸಬಹುದು. ಸಜ್ಜನರ ಸಹವಾಸ, ದಾನ-ಧರ್ಮ ಬುದ್ಧಿ. ಹಲವರಿಗೆ ಆಸ್ಪತ್ರೆಯಿಂದ ಬಿಡುಗಡೆ ಉಂಟಾಗಲಿದೆ.

ಶ್ರೀ ಗುರ್ವಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-9



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದಾರಂಭ ಶುಭವಿದೆ. ದಾಸೀ, ಭೃತ್ಯ, ಜನಲಾಭ. ನಿತ್ಯ ಮೃಷ್ಟಾನ್ನ ಭೋಜನ. ಮನಸ್ಸಿಗೆ ಸುಖವು. ಅಭೀಷ್ಟ ಸಿದ್ಧಿ. ದೇಹದಾರ್ಢ್ಯ, ಶರೀರ ಪೋಷಣೆ ಮಾಡಿಕೊಳ್ಳುವಿಕೆ. ವಾರದ ಉತ್ತರಾರ್ಧಕ್ಕೆ ರಾಜ ಭಯ, ಸರ್ಕಾರಕ್ಕೆ ದಂಡ ಪಾವತಿ. ಪಂಚಮ ಶನಿ ಪ್ರಭಾವದಿಂದ ಸತಿ-ಸುತರಲ್ಲಿ ವಿರಸ ಉಂಟಾಗಬಹುದು. ವಾಹನ ಚಲಿಸುವಾಗ ಅತೀ ವೇಗ ಒಳ್ಳೆಯದಲ್ಲ.

ಶ್ರೀ ಗಣಪತಿ ಉಪಾಸನೆ. ಶುಭ ಸಂಖ್ಯೆ-4



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಆರಂಭಕ್ಕೆ ನಿಮ್ಮ ಪ್ರಯತ್ನಗಳಿಗೆ ಗುರು, ಜನರ ಮಾರ್ಗದರ್ಶನ ಲಭಿಸುವುದು. ಅಧಿಕಾರಿಗಳ ಸಹಕಾರದಿಂದ ಸರ್ಕಾರಿ ಕೆಲಸಗಳು ಸುಗಮವಾಗಿ ಸಾಗುವುದು. ನಿಮ್ಮ ರಾಶ್ಯಾಧಿಪತಿ ಶ್ರೀ ಗುರುವಿನ ಶುಭ ದೃಷ್ಟಿಯ ಫಲವಾಗಿ ಮನೆಯಲ್ಲಿ ಶುಭ ಕಾರ್ಯಗಳು ಜರುಗುವುದು. ವಿವಾಹ ಯೋಗ್ಯರಿಗೆ ಸೂಕ್ತ ವಧು-ವರರು ದೊರಕುವ ಸಂಭವವಿದೆ. ಸಣ್ಣಪುಟ್ಟ ಅನಾರೋಗ್ಯ ಕಾಡುವುದು.

ಶ್ರೀ ದತ್ತರಾಜ ಆರಾಧನೆ. ಶುಭ ಸಂಖ್ಯೆ-7



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭ ಚೆನ್ನಾಗಿದ್ದರೂ ಗುರು ಬಲದ ಕೊರತೆಯಿಂದ ಮಾಡುವ ಕೆಲಸಗಳಲ್ಲಿ ಎಡವಟ್ಟುಗಳು ಉಂಟಾಗುವುದು. ಕೈಗೆ ಬಂದ ತುತ್ತು ಬಾಯಿಗಿಲ್ಲದಂತಹ ಪರಿಸ್ಥಿತಿ. ಯಾರನ್ನೂ ಅತಿಯಾಗಿ ನಂಬದಿರಿ. ಯಂತ್ರ-ಶಸ್ತ್ರಗಳಿಂದ ಎಚ್ಚರವಾಗಿರಿ. ಸಪ್ತಾಹದ ಕಡೆಗೆ ಧನ-ಧಾನ್ಯ ಲಾಭ, ವಸ್ತ್ರಾಭರಣ ಪ್ರಾಪ್ತಿ. ಪ್ರಿಯ ಜನರ ಮಿಲನದಿಂದ ಮನಃಸಂತೋಷ.

ಕುಟುಂಬ ಸಮೇತ ಪುಣ್ಯಕ್ಷೇತ್ರ ಸಂದರ್ಶನ.
ಶ್ರೀ ಶನೇಶ್ವರ ಮೂಲಮಂತ್ರ ಪಠಿಸಿ. ಶುಭ ಸಂಖ್ಯೆ-2.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಯಶಸ್ಸಿನ ಗುಟ್ಟು, ನಿರಂತರ ಪ್ರಯತ್ನ, ಫಲವನ್ನು ದೈವದ ಮೇಲೆ ಬಿಡಿ. ಸಾಡೇಸಾತಿಯ ಹೊರತಾಗಿಯೂ ಗುರುಬಲ ಇರುವ ಕಾರಣ ಬ್ಯಾಲೆನ್ಸ್ ಆಗುತ್ತಲಿದೆ. ಹಣಕಾಸಿನ ಪರಿಸ್ಥಿತಿ ಗಣನೀಯವಾಗಿ ಸುಧಾರಿಸುವುದು. ಮನೆಯಲ್ಲಿ ಮಂಗಳ ಕಾರ್ಯ ನಡೆಯುವುದು. ಹಲವರಿಗೆ ವಿದೇಶ ಪ್ರಯಾಣ ಯೋಗವಿದೆ. ನೆಂಟರಿಷ್ಟರಲ್ಲಿ ಕ್ಲೇಶಗಳು ಉಂಟಾಗದಂತೆ ನಡೆದುಕೊಳ್ಳಿ. ಮನದಲ್ಲಿ ಪಾಪ ಚಿಂತನೆ ಮೂಡಬಹುದು.

ಶ್ರೀ ರಾಘವೇಂದ್ರಸ್ವಾಮಿ ಪ್ರಾರ್ಥನೆ. ಶುಭ ಸಂಖ್ಯೆ-6



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ನೀವೊಂದು ಬಗೆದರೆ, ದೈವ ಮತ್ತೊಂದು ಬಗೆಯುತ್ತಲಿದೆ. ಪ್ರಯತ್ನಶೀಲರಾಗದೆ ಗುರಿ ಮುಟ್ಟಲು ಸಾಧ್ಯವಿಲ್ಲ. ಮಿತ್ರ ವೃಂದದವರಲ್ಲಿ ಸರಸ ಸಮಯವನ್ನು ಕಳೆಯುವಿರಿ. ವಾರ ಮಧ್ಯೆ ಹಣಕಾಸು ಸಂಬಂಧ ವಿಷಯಗಳು ನಿಮಗೆ ಲಾಭದಾಯಕವಾಗಿರುವುದು. ಜನ್ಮ ಶನಿಯ ಕಾರಣ ನಿಮ್ಮ ಕಾರ್ಯ ಕ್ಷೇತ್ರದಲ್ಲಿ ಹಿನ್ನಡೆಯನ್ನು ಅನುಭವಿಸುವಿರಿ. ಆರೋಗ್ಯದ ಕಡೆ ಅಸಡ್ಡೆ ಬೇಡ. ಜೂಜು ನಷ್ಟಕ್ಕೆ ಹೇತುವಾಗುವುದು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-8

ಸದಾಶಿವ ಆಯೋಗ ವರದಿ ಜಾರಿಗೆ ಆಗ್ರಹಿಸಿ ನಾಳೆ ಬೆಂಗಳೂರಲ್ಲಿ ಸಮಾವೇಶ

ಕೋಟೆ, ಸರಗೂರು ಮಾದಿಗ ಸಮುದಾಯ ಬೆಂಬಲ

ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟದಲ್ಲಿ ಪಾಲ್ಗೊಳ್ಳಲು ಮನವಿ



ಮಾದಿಗ ಸಂಘಟನೆಯ ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆಯ ಕೋಟೆ, ಸರಗೂರು, ತಾಲೂಕು ಅಧ್ಯಕ್ಷ ಸಿ.ತಿಮ್ಮಯ್ಯ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಹೆಚ್.ಡಿ.ಕೋಟೆ, ಜೂ.7– ನಮ್ಮ ನ್ಯಾಯಯುತ ಬೇಡಿಕೆಯಾದ ಸದಾಶಿವ ಆಯೋಗ ವರದಿಯನ್ನು ಜಾರಿ ಮಾಡಬೇಕು ಎಂದು ಒತ್ತಾಯಿಸಿ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಜೂ.9ರಂದು ನಡೆಯುವ ಹೋರಾಟಕ್ಕೆ ಕೋಟೆ ಮತ್ತು ಸರಗೂರು ತಾಲೂಕಿನ ಮಾದಿಗ ಸಮುದಾಯದ ಜನರು ಬೆಂಬಲ ನೀಡುತ್ತಿದ್ದು, ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮಾದಿಗ ಸಂಘಟನೆಯ ಡಾ.ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆಯ ಕೋಟೆ, ಸರಗೂರು, ತಾಲೂಕು ಅಧ್ಯಕ್ಷ ಸಿ.ತಿಮ್ಮಯ್ಯ ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸದಾಶಿವ ಆಯೋಗದ ವರದಿ ಜಾರಿ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಸುಮಾರು 101 ಜಾತಿಗಳಿದ್ದು ಈ ಜಾತಿಗಳಿಗೆ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನದಲ್ಲಿ ಮೀಸಲಾತಿಯನ್ನು ನೀಡಿದ್ದಾರೆ. 101 ಜಾತಿಗಳ ಪೈಕಿ ಅತ್ಯಂತ ಹಿಂದುಳಿದ ಜಾತಿ ಮಾದಿಗ ಜಾತಿ. ನಮ್ಮ ಜಾತಿಯ ಜನಸಂಖ್ಯೆಗೆ ತಕ್ಕಂತೆ ಒಳ ಮೀಸಲಾತಿಯನ್ನು ಜಾರಿಗೆ ತರುವಂತೆ ಸುಮಾರು 35 ವರ್ಷಗಳಿಂದ ರಾಜ್ಯಾದ್ಯಂತ ಆಡಳಿತ ಮಾಡಿದಂತಹ ಸರ್ಕಾರಗಳನ್ನು ಒತ್ತಾಯಿಸಿ ನಾವು ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಆದರೆ ಸರ್ಕಾರಗಳು ಉದಾಸೀನ ಮನೋಭಾವನೆಯಿಂದ ನಡೆದುಕೊಳ್ಳುತ್ತಿದೆ ಎಂದರು.

ಕಳೆದ ಬಾರಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಸವರಾಜ್ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಾಧುಸ್ವಾಮಿ ಸಮಿತಿ ನೇತೃತ್ವದಲ್ಲಿ ರಾಜ್ಯದಲ್ಲಿ ಆದಿ ಕರ್ನಾಟಕ ಪರಿಶಿಷ್ಟ ಜಾತಿಯಲ್ಲಿ ಯಾವ ಯಾವ ಸಮಾಜದವರು ಎಷ್ಟೆಷ್ಟು ಜನಸಂಖ್ಯೆ ಇದೆ ಎಂದು ವರದಿ ತಯಾರಿಸಿ ಮೀಸಲಾತಿಯನ್ನು ಹೆಚ್ಚಳ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿತ್ತು.

ಇದರ ವರದಿಯ ಬಗ್ಗೆ ನಮ್ಮ ಸಮಾಜದ ಹೆಸರಾಂತ ವಕೀಲರುಗಳು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ ಪ್ರಯುಕ್ತ ಸುಪ್ರೀಂಕೋರ್ಟ್ ಆಯಾಯ ರಾಜ್ಯ ಸರ್ಕಾರಗಳು ಒಳ ಮೀಸಲಾತಿ ಜಾರಿಗೆ ತರಬೇಕೆಂದು ಆದೇಶ ಮಾಡಿತ್ತು. ಆದರೆ ನಮ್ಮ ರಾಜ್ಯ ಸರ್ಕಾರವು ಒಳ ಮೀಸಲಾತಿಯನ್ನು ಜಾರಿ ಮಾಡುತ್ತೇವೆ ಎಂದು ಈ ತಿಂಗಳು ಮುಂದಿನ ತಿಂಗಳು ಎಂದು ಸಬೂಬು ಹೇಳಿಕೊಂಡು, ನ್ಯಾಯಮೂರ್ತಿಗಳಾದ ನಾಗ ಮೋಹನದಾಸ್ ನೇತೃತ್ವದಲ್ಲಿ ಜನಗಣತಿಯನ್ನು ಪುನರ್ ಆರಂಭಿಸಿದ್ದು ಕಳೆದ ಜೂನ್ ತಿಂಗಳ ಗಡುವು ನೀಡಿದೆ.

ಇದುವರೆಗೂ ಇದು ಪೂರ್ಣಗೊಂಡಿಲ್ಲ ಜೊತೆಗೆ ಒಳ ಮೀಸಲಾತಿ ಜಾರಿಯಾಗುವವರೆಗೂ ಬಡ್ತಿ ನೇಮಕಾತಿ ಮಾಡುವುದಿಲ್ಲ ಎಂದು ಹೇಳಿ ಸರ್ಕಾರ ಒಳಗೊಳಗೆ ಬಡ್ತಿ ನೀಡುತ್ತಿರುವುದು ನಮ್ಮ ಸಮುದಾಯಕ್ಕೆ ಮಾಡುತ್ತಿರುವ ಅನ್ಯಾಯ ಎಂದು ಬೇಸರ ವ್ಯಕ್ತಪಡಿಸಿದರು.

ಸಭೆಯಲ್ಲಿ ಸುಭಾಷ್, ಸೋಮು ಪಟೇಲ್, ಮಹೇಶ್, ಸಿದ್ದಪ್ಪ, ಮಾತಂಗ ಜನಜಾಗೃತಿ ವೇದಿಕೆ ಅಧ್ಯಕ್ಷ ರವೀಶ್, ನಾಗರಾಜ್, ಕೆ.ಟಿ.ಹರೀಶ್, ಶಿವರಾಜಯ್ಯ, ಶಿವಾಜಿ, ದಿನೇಶ್ ಸೇರಿದಂತೆ ಸಮುದಾಯದ ಮುಖಂಡರು ಹಾಜರಿದ್ದರು.

ಬಿಳಿಕೆರೆ ಆರೋಗ್ಯ ಕೇಂದ್ರ ಮೇಲ್ದರ್ಜೆಗೇರಿಸಲು ಸಚಿವರಿಗೆ ಜನಧ್ವನಿ ಫೌಂಡೇಷನ್ ಮನವಿ



ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸುತ್ತಿರುವುದು.

ಹುಣಸೂರು, ಜೂ.7– ತಾಲೂಕಿನ ಬಿಳಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವಂತೆ ಜಿಲ್ಲಾ ಉಸ್ತುವಾರಿ ಸಚವರಿಗೆ ಜನಧ್ವನಿ ಫೌಂಡೇಶನ್ ಮನವಿ ಮಾಡಿದೆ.

ತಾಲೂಕಿನ ಬಿಳಿಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿ ಕೊರತೆ, ನಿರ್ವಹಣೆ ಕೊರತೆಯಿಂದ ಕನಿಷ್ಟ ಪ್ರಥಮ ಚಿಕಿತ್ಸೆಯು ಸಿಗದೆ ಸಾರ್ವಜನಿಕರು ಪರದಾಡುವಂತಾಗಿದೆ. ಸರ್ಕಾರ 24x7 ಆಸ್ಪತ್ರೆ ಎಂದು ಘೋಷಣೆ ಮಾಡಿದರೂ ಇಲ್ಲಿ ಸಿಬ್ಬಂದಿ ಹಾಗೂ ನಿರ್ವಹಣೆ ಕೊರತೆಯಿದ್ದು ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಇಷ್ಟೆ ಅಲ್ಲದೆ ರಾಷ್ಟ್ರೀಯ ಹೆದ್ದಾರಿ 275 ಬಿಳಿಕೆರೆ ಮೂಲಕ ಹಾದು ಹೋಗುತ್ತದೆ. ಅಪಘಾತಗಳು ಸಂಭವಿಸಿದರೂ ಕೂಡ ಅಂತವರಿಗೆ ಕನಿಷ್ಟ ಚಿಕಿತ್ಸೆ ಸಿಗದೆ ಮರಣ ಹೊಂದಿರುವ ನಿದರ್ಶನಗಳು ಇವೆ ಅಷ್ಟೆ ಅಲ್ಲದೆ ಬಿಳಿಕೆರೆ ವೇಗವಾಗಿ ಬೆಳೆಯುತ್ತಿರುವ ನಗರವಾಗಿದ್ದು. ಹುಣಸೂರನ್ನು ಹೊರತು ಪಡಿಸಿದರೆ ತಾಲೋಕಿನಷ್ಟೆ ಪ್ರಾಮುಖ್ಯತೆ ಹೊಂದಿದೆ ಎಂದು ಜನಧ್ವನಿ ಫೌಂಡೇಶನ್ ಹೇಳಿದೆ. ಹೆರಿಗೆ ಸೌಲಭ್ಯವು ಕೂಡ ಇಲ್ಲಿ ಇಲ್ಲ. ಇದರಿಂದ ಈ ಭಾಗದ ಜನರು ಪರಿತಪಿಸುವಂ ತಾಗಿದೆ ಇದೆಲ್ಲವನ್ನು ಮನಗಂಡು ಜನಧ್ವನಿ ಫೌಂಡೇಶನ್ ವತಿಯಿಂದ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಇಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿ ಮಾಡಿ ಆಸ್ಪತ್ರೆ ಮೇಲ್ದರ್ಜೆಗೆ ಏರಿಸುವಂತೆ ಮನವಿ ಸಲ್ಲಿಸಲಾಗಿದ್ದು. ಸಚಿವರು ಕಾರ್ಯರೂಪಕ್ಕೆ ತರುವ ಭರವಸೆ ನೀಡಿದ್ದಾರೆ ಎಂದು ಫೌಂಡೇಶನ್ ತಿಳಿಸಿದೆ.

ಒಂದು ವೇಳೆ ಕಾರ್ಯ ರೂಪಕ್ಕೆ ಬಾರದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಜನಧ್ವನಿ ಫೌಂಡೇಶನ್ ಅಧ್ಯಕ್ಷ ವಕೀಲ ಆಯರಹಳ್ಳಿ ಪ್ರವೀಣ್ ಎಚ್ಚರಿಸಿದ್ದಾರೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳ ನೇಮಕ



ತಿ.ನರಸೀಪುರ ಜೂ.7–ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕರಾದ ಡಾ.ಆರ್.ಮೋಹನ್ ರಾಜ್ ಭೀಮವಾದ ಸಂಘಟನೆಯ ತಾಲೂಕು ಶಾಖೆಯನ್ನು ತಾಲೂಕಿನ ಅಂಬೇಡ್ಕರ್ ಭವನದಲ್ಲಿ ಡಾಕ್ಟರ್ ಅಲಗೂಡು ಚಂದ್ರಶೇಖರ್ ಅವರ ಅಧ್ಯಕ್ಷತೆಯಲ್ಲಿ ನೂತನವಾಗಿ ರಚಿಸಲಾಗಿದ್ದು. ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ

ತಾಲೂಕು ಸಂಚಾಲಕರಾಗಿ–ನೆರಗೇತನಹಳ್ಳಿ ಮನೋಜ್ ಕುಮಾರ್, ಸಂಘಟನಾ ಸಂಚಾಲಕರಾಗಿ ಗೋವಿಂದರಾಜು ಸೋಮನಾಥಪುರ, ತೊಟ್ಟವಾಡಿ ರಾಜಪ್ಪ, ನಿಲಸೋಗೆಕುಮಾರ್, ಖಜಾಂಚಿ ಕುಪ್ಯಾಗವಿಸಿದ್ದಯ್ಯ, ಸಾಂಸ್ಕೃತಿಕ ವಿಭಾಗ ಹೆಮ್ಮಿಗೆ ಮಲ್ಲೇಶ್ ಹಾಗೂ ಕಾರ್ಯಕಾರಿಣಿ ಸಮಿತಿಯ ತಾಲೂಕಿನ ಎಲ್ಲಾ ಹೋಬಳಿಗಳ ದಸಂಸ ಮುಖಂಡರುಗಳನ್ನು ಆಯ್ಕೆ ಮಾಡಲಾಗಿದೆ. ಮೈಸೂರು ವಿಭಾಗೀಯ ಸಂಚಾಲಕರಾಗಿ ಸೋಸಲೆ ಶಿವಕುಮಾರ್ ರವರನ್ನು ನೇಮಿಸಲಾಗಿದೆ.

ನಾಳೆ ಶ್ರೀ ಸದ್ಗುರು ಮಹದೇವ ತಾತಾ ಶಾಲೆ ಉದ್ಘಾಟನೆ

ಮಲ್ಕುಂಡಿ: ನಂಜನಗೂಡು ತಾಲೂಕಿನ ಸಂಗಮ ಕ್ಷೇತ್ರದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶ್ರೀ ಸದ್ಗುರು ಮಹದೇವ ತಾತಾ ಪ್ರಾಥಮಿಕ ಶಾಲೆಯ ಕಟ್ಟಡವನ್ನು ಜೂ.9 ರಂದು ಸುತ್ತೂರು ಕ್ಷೇತ್ರದ ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಜಿ ಉದ್ಘಾಟಿಸಲಿದ್ದಾರೆ.

ದೇವನೂರು ಶ್ರೀ ಗುರುಮಲ್ಲೇಶ್ವರ ಮಠದ ಮಹಾಂತಸ್ವಾಮಿಜೀ, ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಜಿ, ಮಲ್ಲನ ಮೂಲೆ ಮಠಧ್ಯಾಕ್ಷ ಚನ್ನಬಸವ ಸ್ವಾಮೀಜಿ, ಉಕ್ಕಿನಕಂತೆಮಠದ ಸಾಂಬ ಸದಾಶಿವಸ್ವಾಮೀಜಿ ದಿವ್ಯಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ.

ರಾಷ್ಟ್ರೀಯ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಶಾಸಕ ಡಾ.ಶ್ಯಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸುವವರು. ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೂತನ ಕಟ್ಟಡ ಉದ್ಘಾಟಿಸುವರು. ಬಿಜೆಪಿ ರಾಜಾಧ್ಯಕ್ಷ ಶಾಸಕ ಬಿ.ವೈ.ವಿಜಯೇಂದ್ರ ಮಹದೇವ ತಾತಾರವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡುವರು. ಸಚಿವ ಎಸ್.ಎಸ್.ಮಲ್ಲಿಕಾರ್ಜುನ, ಶಾಸಕರಾದ ಜಿ.ಟಿ.ದೇವೇಗೌಡ, ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ಗಣೇಶ್ ಪ್ರಸಾದ್, ಸಂಸದ ಸುನೀಲ್ ಬೋಸ್, ಮಾಜಿ ಶಾಸಕ ಬಿ ಹರ್ಷವರ್ಧನ್, ಕಳಲೆ ಕೇಶವಮೂರ್ತಿ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಶ್ರೀ ಸದ್ಗುರು ಮಹದೇವತಾತಾ ಭಕ್ತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ವರುಣದಲ್ಲಿ ವಿಶ್ವ ಪರಿಸರ ದಿನ ಆಚರಣೆ



ವರುಣ ಕೆರೆಯಲ್ಲಿ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್, ಕಾಂಗ್ರೆಸ್ ಮುಖಂಡರಾದ ಚಿಕ್ಕದೇವಯ್ಯ ಶಿವಣ್ಣ, ಚಿಕ್ಕಜವರಪ್ಪ, ಗ್ರಾಮ ಪಂಚಾಯಿತಿ ಸದಸ್ಯರಾದ ವೆಂಕಟೇಶ, ಸಿದ್ದಯ್ಯ, ದೇವರಾಜು, ನಾಗೇಂದ್ರ ಮತ್ತು ಅಧಿಕಾರಿಗಳು ಹಾಜರಿದ್ದರು.

ಸರಗೂರಲ್ಲಿ ಸಂಭ್ರಮದ ಬಕ್ರೀದ್ ಆಚರಣೆ



ಸರಗೂರಿನಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಸರಗೂರು: ಪಟ್ಟಣದಲ್ಲಿ ಮುಸ್ಲಿಂ ಬಾಂಧವರು ಸಂಭ್ರಮ ಸಡಗರದಿಂದ ಬಕ್ರೀದ್ ಆಚರಿಸಿದರು. ಈದ್ಗಾ ಮೈದಾನದಲ್ಲಿ ಜಮಾವಣೆಗೊಂಡ ಮುಸ್ಲಿಂ ಬಾಂಧವರು ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಆಚರಿಸಿದರು.

ಈ ವೇಳೆ ಮುಸ್ಲಿಂ ಬಾಂಧವರು ಪರಸ್ಪರ ಆಲಂಗಿಸಿಕೊಂಡು ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ತ್ಯಾಗದ ಸಂಕೇತವಾಗಿ ಬಡವರಿಗೆ ಸಿಹಿ ವಿತರಿಸಿ ದವಸ ಧಾನ್ಯಗಳನ್ನು ದಾನ ಮಾಡಿದರು. ಜನರು ಸರತಿ ಸಾಲಿನಲ್ಲಿ ನಿಂತು ದಾನವನ್ನು ಸ್ವೀಕರಿಸಿದ್ದು ಕಂಡುಬಂದಿತು.

ಜಾಮಿಯಾ ಮಸೀದಿ ಗುರುಗಳಾದ ಅಬ್ದುಲ್ ರಶೀದ್ ಅವರು ಮಾತನಾಡಿ, ಬಕ್ರೀದ್ ಹಬ್ಬವು ತ್ಯಾಗದ ಸಂದೇಶ ಸಾರುವ ಹಬ್ಬವಾಗಿದ್ದು, ಹಬ್ಬಗಳ ಆಚರಣೆಯಿಂದ ಎಲ್ಲರಲ್ಲಿ ಉತ್ತಮ ಬಾಂಧವ್ಯ ಬೆಸೆಯುತ್ತದೆ. ಇಂದು ಬಕ್ರೀದ್ ಹಬ್ಬದ ಪ್ರಯುಕ್ತ ಎಲ್ಲರೂ ಈದ್ಗಾ ಮೈದಾನಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ, ನಡೆಸಿ ನಾಡಿನ ಜನತೆಗೆ ಬಕ್ರೀದ್ ಹಬ್ಬದ ಶುಭ ಹಾರೈಕೆ ಕೋರಲಾಗಿದೆ ಎಂದು ತಿಳಿಸಿದರು,

ನೂರ್ ಮಸೀದಿ ಗುರುಗಳಾದ ಅಬ್ದುಲ್ ಜಲೀಲ್ ಮಾತನಾಡಿ, ಎಲ್ಲರೂ ಸಹ ಬಾಳ್ವೆಯಿಂದ ಬದುಕಬೇಕು ಹಬ್ಬಗಳ ಆಚರಣೆಯಿಂದ ವಿಶ್ವಾಸ ಹೆಚ್ಚಾಗಲಿದೆ. ಎಲ್ಲರಿಗೂ ಅಲ್ಲಾ ಒಳಿತು ಮಾಡಲಿ ದೇಶಕ್ಕೆ ಉತ್ತಮ ಮಳೆ ಬೆಳೆಯಾಗಲಿ ಎಂದು ತಿಳಿಸಿದರು.

ಪುಟ್ಟ ಮಕ್ಕಳು ಹೊಸಬಟ್ಟೆ ತೊಟ್ಟು ಸಿಹಿ ತಿಂದು ಸಂಭ್ರಮಿಸಿದರು, ಸಮಾಜದ ಯಜಮಾನರಾದ ಹಿದಾತುಲ್ಲಾ ಶರೀಫ್, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಅಮೀರ್ ಸುಹೇಲ್, ಮುಖಂಡರಾದ ಜಲೀಲ್, ಖಲೀಲ್, ಸುಭಾನ್, ಮಹಮದ್ ಪಾಷಾ, ನಾಸೀರ್, ಜಾವೀದ್, ಹಿಬ್ರಾಹಿಂ, ಹಿದಾಯತ್, ಮಹಮ್ಮದ್ ಸದಾನ್ ಸಾಫ್ವಾನ್, ಇಸಾಕ್ ಖಾನ್, ಸಿರಾಜ್ ಪಾಷ, ಮಫ್ಟಿರುಲ್ಲಾ, ಸಾಧಿಕ್ ಪಾಷಾ, ಮುಸ್ತಾಪ, ಅಕ್ಬರ್, ರಫಿ, ಎಂ.ಹಾದಿ, ರಾಹೀಲ್‌ಪಾಷ, ಶಾಹೀದ್, ಅಸೀಫ್, ಅಬ್ಬಸ್, ಸುಹೇಬ್, ಹಾಗೂ ಮುಸ್ಲಿಂ ಬಾಂಧವರು ಭಾಗವಹಿಸಿದ್ದರು.

ಎಲ್‌ಕೆಜಿ ಮಕ್ಕಳ ದಾಖಲಾತಿ ಪ್ರಕ್ರಿಯೆ, ಪೋಷಕರ ಸಭೆ

ಮೂಗೂರು, ಜೂ.7– ಇಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರಸಕ್ತ ಸಾಲಿನ ಎಲ್‌ಕೆಜಿ ಮಕ್ಕಳ ದಾಖಲಾತಿ ಪ್ರಕ್ರಿಯೆ ಹಾಗೂ ಪೋಷಕರ ಸಭೆ ಕೆಪಿಎಸ್ ಶಾಲೆ ಮುಖ್ಯಸ್ಥರು ಹಾಗೂ ಕಾಲೇಜು ಪ್ರಾಂಶುಪಾಲ ರಾಚಯ್ಯ ಅವರ ನೇತೃತ್ವದಲ್ಲಿ ಬಾಲಕಿಯರ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು.

ಸಭೆಯಲ್ಲಿ ಪ್ರಸಕ್ತ ಸಾಲಿಗೆ ಎಲ್‌ಕೆಜಿ ತರಗತಿಗೆ ದಾಖಲಾತಿ ಬಯಸಿ 38 ಅರ್ಜಿಗಳು ಸಲ್ಲಿಕೆಯಾಗಿದೆ. ಅದರಂತೆ ಸ್ಥಳೀಯರಿಗೆ ಮೊದಲು ಆದ್ಯತೆ ನೀಡಿ ನಂತರ ಮೂಗೂರು ಹೋಬಳಿ ವ್ಯಾಪ್ತಿವಾರು ಗ್ರಾಮದ ಅರ್ಜಿದಾರರಿಗೆ 30 ಮಕ್ಕಳಿಗೆ ದಾಖಲಾತಿ ಪಡೆಯಲು ಅವಕಾಶ ಕಲ್ಪಿಸುವಂತೆ ಸಭೆಯಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಲಾಯಿತು.

ಕರ್ನಾಟಕ ಪಬ್ಲಿಕ್ ಶಾಲೆ ಪ್ರೌಢಶಾಲಾ ವಿಭಾಗದ ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ ಮಾತನಾಡಿ, ಮುಂದಿನ ಶೈಕ್ಷಣಿಕ ಸಾಲಿಗೆ ಅಗತ್ಯ ಮೂಲ ಸೌಕರ್ಯ ಒದಗಿಸಿ ಕೊಡುವುದರ ಜೊತೆಗೆ ಎಲ್‌ಕೆಜಿಗೆ ಹೆಚ್ಚುವರಿಯಾಗಿ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳಲು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಬಾಲಕಿಯ ಚಿಕಿತ್ಸೆಗೆ ನೆರವಾದ ಸಂಸದ ಸುನಿಲ್ ಬೋಸ್



ಬಾಲಕಿ ಚಿಕಿತ್ಸೆಗೆ ಆರ್ಥಿಕ ನೆರವು ನೀಡುತ್ತಿರುವ ಸುನಿಲ್ ಬೋಸ್.

ನಂಜನಗೂಡು, ಜೂ.7– ನಗರದ ನೀಲಕಂಠ ನಗರ ಬಡಾವಣೆಯ ರಾಜೇಶ್ವರಿ ಮತ್ತು ಮಹದೇವಸ್ವಾಮಿ ಪುತ್ರಿ 9 ವರ್ಷದ ಆದ್ಯಾ ಥಲಸ್ಸೆಮಿಯಾ ಎಂಬ ವಿಚಿತ್ರ ಕಾಯಿಲೆಯಿಂದ ಬಳಲುತ್ತಿದ್ದು ಸಂಸದ ಸುನೀಲ್ ಬೋಸ್ ಗುರುವಾರ ರಾತ್ರಿ ಬಾಲಕಿಯ ಮನೆಗೆ ಭೇಟಿ ನೀಡಿ ಚಿಕಿತ್ಸೆ ವೆಚ್ಚಕ್ಕಾಗಿ ವೈಯಕ್ತಿಕವಾಗಿ ಆರ್ಥಿಕ ಧನ ಸಹಾಯ ಮಾಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ನಂತರ ಮಾತನಾಡಿದ ಅವರು ನನ್ನ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ನಂಜನಗೂಡು ಟೌನ್ ನೀಲಕಂಠ ನಗರ ಬಡಾವಣೆಯ ನಿವಾಸಿಗಳಾದ ರಾಜೇಶ್ವರಿ ಮತ್ತು ಮಹದೇವಸ್ವಾಮಿ ದಂಪತಿಗಳ ಪುತ್ರಿ ಒಂಬತ್ತು ವರ್ಷದ ಆದ್ಯಾ ಎಂಬ ಬದುಕಿ ಬಾಳಬೇಕಿದ್ದ ಬಾಲಕಿ ಥಲಸ್ಸೆಮಿಯಾ ಎಂಬ ವಿಚಿತ್ರ, ಅಪರೂಪದ ಕಾಯಿಲೆಗೆ ತುತ್ತಾಗಿದ್ದಾರೆ. ಇದರಿಂದ ಬಾಲಕಿಗೆ ದೇಹದಲ್ಲಿ ರಕ್ತ ಉತ್ಪತ್ತಿಯಾಗದೆ, ಹಿಮೋಗ್ಲೋಬಿನ್ ಕೊರತೆಯಿಂದ ಬಳಲುತ್ತಿದ್ದಾಳೆ, ಆಕೆಗೆ ಶಸ್ತ್ರ ಚಿಕಿತ್ಸೆ ಸುಮಾರು 40 ರಿಂದ 45 ಲಕ್ಷ ರೂಪಾಯಿ ವೆಚ್ಚವಾಗುತ್ತದೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ. ಈ ಸಂಬಂಧ ಬಾಲಕಿಯ ಪೋಷಕರು ಮೈಸೂರಿನ ಜಲದರ್ಶಿನಿಯಲ್ಲಿ ನನ್ನನ್ನು ಭೇಟಿ ಮಾಡಿ ಚಿಕಿತ್ಸಾ ವೆಚ್ಚ ಭರಿಸಲು ಧನ ಸಹಾಯ ಮಾಡುವಂತೆ ಮನವಿ ಮಾಡಿದ್ದರು, ಅದರಂತೆ, ಬಾಲಕಿಯ ಮನೆಗೆ ಭೇಟಿ ನೀಡಿ ವೈಯಕ್ತಿಕವಾಗಿ ಧನ ಸಹಾಯ ಮಾಡಿದ್ದೇನೆ ಎಂದರು.

ಜೊತೆಗೆ ಪ್ರಧಾನ ಮಂತ್ರಿ ಪರಿಹಾರ ನಿಧಿಯಿಂದ ಸುಮಾರು 2.5 ಲಕ್ಷ ಪರಿಹಾರವನ್ನು ಕೊಡಿಸಲಿದ್ದೇನೆ, ಇನ್ನೂ ಬದುಕಿ ಬಾಳಬೇಕಾದ ಬಾಲಕಿಗೆ ದಾನಿಗಳು ಹಾಗೂ ಸಾರ್ವಜನಿಕರು ಮಾನವೀಯತೆ ಹಿತದೃಷ್ಟಿಯಿಂದ ಹೆಚ್ಚಿನ ಹಣಕಾಸಿನ ನೆರವು ನೀಡುವ ಮೂಲಕ ಬಡ ಕುಟುಂಬದ ನೆರವಿಗೆ ಧಾವಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರಿಯಾನಬಾನು, ಮುಖಂಡರಾದ ಇಂಧನ ಬಾಬು, ಅಜ್ಗರ್, ಮುರುಗೇಶ್, ಹೆಜ್ಜಿಗೆ ಕೃಷ್ಣ, ಎನ್.ಟಿ.ಗಿರೀಶ್, ನಗರಸಭಾ ಸದಸ್ಯ ಸಿದ್ದಿಕ್, ಜಿಪಂ ಮಾಜಿ ಸದಸ್ಯ ಕೆ.ಬಿ.ಸ್ವಾಮಿ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಪರಿಸರ ರಕ್ಷಣೆಯಿಂದ ಜಾಗತಿಕ ತಾಪಮಾನ ನಿವಾರಣೆ



ಬನ್ನೂರು: ಮನುಷ್ಯನ ಅತಿಯಾದ ಆಸೆಯ ಪರಿಣಾಮ ಇಂದು ಜಾಗತಿಕ ತಾಪಮಾನ ಹೆಚ್ಚಾಗುತ್ತಿದ್ದು ಹಿಮಾಲಯ ಪರ್ವತವೇ ಕರಗಿ ನೀರಾಗುವ ಪರಿಸ್ಥಿತಿ ಒದಗಿ ಬಂದಿದೆ. ಇದು ಮುಂದಿನ ದಿನಗಳಲ್ಲಿ ಕಡಿಮೆಯಾಗಬೇಕಾದರೆ ಪರಿಸರ ರಕ್ಷಣೆ ಮಾಡುವ ಕಾರ್ಯ ಎಲ್ಲರಿಂದ ಆಗಬೇಕಿದೆ ಎಂದು ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವೈ.ಎನ್. ಶಂಕರೇಗೌಡ ತಿಳಿಸಿದರು.

ಪಟ್ಟಣದ ಯಾಚೇನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೈಸೂರಿನ ಕೃಷಿ ತಂತ್ರಜ್ಞರ ಸಂಸ್ಥೆ, ಮೈಸೂರಿನ ಕೃಷಿ ಇಲಾಖೆ ಹಾಗೂ ಮೈಸೂರಿನ ತೋಟಗಾರಿಕೆ ಮಹಾವಿದ್ಯಾಲಯದ ವತಿಯಿಂದ ಆಯೋಜಿಸಲಾಗಿದ್ದ ವಿಶ್ವಪರಿಸರ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಐಎಟಿ ಕಾರ್ಯದರ್ಶಿ ರವೀಂದ್ರ ರಾಮಕೃಷ್ಣ ಸೇವಾ ಕೇಂದ್ರದ ನಾದನಂದನಾಥ ಸ್ವಾಮೀಜಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ.ಎನ್.ಮಮತಾ ಲಕ್ಷ್ಮಿ, ಶಿವಮೂರ್ತಿ, ಸಿ. ಹರೀಶ್, ಕೃಷಿ ಅಧಿಕಾರಿ ವಿಶಾಲು, ವೈ.ಜಿ. ಮಹೇಂದ್ರ, ಕಾರ್ಯನಿರ್ವಹಣಾಧಿಕಾರಿ ವೈ.ಕೆ.ಕ್ಯಾತೇಗೌಡ, ಕನ್ನಡ ಸಾಹಿತ್ಯ ಪರಿಷತ್‌ನ ಹೋಬಳಿ ಅಧ್ಯಕ್ಷ ಪುಟ್ಟರಾಜು, ಎಚ್.ಆರ್.ಮಾನಸ, ಸುಭಾಷ್‌ಚಂದ್ರ ಬೋಸ್, ಶಾಲೆಯ ಮುಖ್ಯಶಿಕ್ಷಕಿ ಕಮಲ ಸೇರಿದಂತೆ ಇತರರು ಇದ್ದರು.

ಗಾಂಧಿ ಗ್ರಾಮ ಪುರಸ್ಕಾರ ಅನುದಾನದಿಂದ ಸೋಲಾರ್ ವಿದ್ಯುತ್ ದೀಪ ಅಳವಡಿಕೆ



ಇಂಟರ್ ಲಾಕ್ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುತ್ತಿರುವುದು.

ಕೆ.ಆರ್.ನಗರ: ಗಾಂಧಿ ಗ್ರಾಮ ಪುರಸ್ಕಾರದಿಂದ ಬಂದಂತಹ ಅನುದಾನದಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸೋಲಾರ್ ವಿದ್ಯುತ್ ದೀಪ ಅಳವಡಿಸಲಾಗಿದೆ ಎಂದು ಸಾಲಿಗ್ರಾಮ ತಾಲೂಕಿನ ಭೇರ್ಯ ಗ್ರಾಪಂ. ಅಧ್ಯಕ್ಷ ಬಿ.ಕೆ.ಮಂಜಪ್ಪ ತಿಳಿಸಿದರು.

ಭೇರ್ಯ ಗ್ರಾಮದಲ್ಲಿ ಗ್ರಾಮ ಪಂಚಾಯತಿ ವತಿಯಿಂದ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣ ಮಳಿಗೆಗಳ ಆವರಣದಲ್ಲಿ ನಾಲ್ಕು ಲಕ್ಷದ ಇಂಟರ್‌ಲಾಕ್ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

ಸರ್ಕಾರ ಗ್ರಾಮ ಪಂಚಾಯತಿಗೆ ನೀಡಿದ ಅನುದಾನ ಸಮರ್ಪಕವಾಗಿ ಬಳಕೆ ಮಾಡಲಾಗಿದ್ದು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಅನುದಾನವನ್ನು ಪಂಚಾಯತಿಯ ವರ್ಗ ಒಂದರಲ್ಲಿ ಬಳಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಗ್ರಾಮದ ಸಮರ್ಪಕ ಅಭಿವೃದ್ಧಿಗೆ ಸಾಕಷ್ಟು ಅನುದಾನ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ನರೇಗಾ ಯೋಜನೆ ಮೂಲಕ ಸಿಮೆಂಟ್ ಕಾಂಕ್ರೀಟ್ ಚರಂಡಿ ಕಾಮಗಾರಿ, ಕೆರೆಕಟ್ಟೆಗಳ ಹೂಳೆತ್ತುವುದು, ಕಾಂಕ್ರೀಟ್ ರಸ್ತೆ ಮಾಡಲಾಗಿದೆ ಎಂದರು.

ಗ್ರಾಮದಲ್ಲಿ ಕಸ ವಿಲೇವಾರಿ ಮಾಡಲು ಮತ್ತೊಂದು ಸ್ವಚ್ಛತಾ ವಾಹನ ಬೇಕಾಗಿದ್ದು ಈ ಸಂಬಂಧ ಜಿಲ್ಲಾ ಪಂಚಾಯತ್ ಇಲಾಖೆ ಅನುಮೋದನೆಗಾಗಿ ಪತ್ರ ಬರೆಯಲಾಗಿದೆ. ಸ್ವಚ್ಛತಾ ವಾಹನ ಖರೀದಿಸಲು ಗ್ರಾಮ ಪಂಚಾಯತಿಯ ವರ್ಗ ಒಂದರ ಅನುದಾನ ಬಳಸಿ ಕೊಳ್ಳಲು ಅನುಮತಿ ನೀಡಿ ಎಂದು ಮನವಿ ಮಾಡಿದರು. ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಆದ್ದರಿಂದ ಈ ಕೂಡಲೇ ವಾಹನ ಖರೀದಿಗೆ ಅನುಮತಿ ನೀಡಿ ಎಂದು ಜಿ.ಪಂ. ಸಿಇಓ ಅವರಲ್ಲಿ ಮನವಿ ಮಾಡಿದರು.

ಮಾಜಿ ಅಧ್ಯಕ್ಷ ಮುಶೀರ್, ಪಿಡಿಓ ಮಮತಾ, ಉಪಾಧ್ಯಕ್ಷೆ ರೂಪಹರೀಶ್, ಸದಸ್ಯರಾದ ಬಿ.ಕೆ.ಶಿವಕುಮಾರ್, ತಾಯಮ್ಮ, ಕೃಷ್ಣೇಗೌಡ, ಜಯಲಕ್ಷ್ಮಿ, ಮುಖಂಡರಾದ ರಾಜಯ್ಯ, ಗುತ್ತಿಗೆದಾರ ಕೃಷ್ಣ ಇದ್ದರು.

ನಂ.ಗೂಡಲ್ಲಿ ಬಕ್ರೀದ್ ಸಾಮೂಹಿಕ ಪ್ರಾರ್ಥನೆ



ನಂಜನಗೂಡಿನಲ್ಲಿ ಶನಿವಾರ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಮೂಲಕ ಬಕ್ರೀದ್ ಆಚರಿಸಿದರು.

ನಂಜನಗೂಡು: ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬದ ಅಂಗವಾಗಿ ನಗರದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು.

ಬೆಳಗ್ಗೆಯಿಂದಲೇ ನೂರಾರು ಸಂಖ್ಯೆಯಲ್ಲಿ ಪಟ್ಟಣದ ಈದ್ಗಾ ಮೈದಾನದಲ್ಲಿ ಜಮಾವಣೆಗೊಂಡ ಮುಸ್ಲಿಂ ಬಾಂಧವರು ಪರಸ್ಪರ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಮುಸ್ಲಿಂ ಧರ್ಮ ಗುರು ಅಬ್ದುಲ್ ಮುಸಾಫಿರ್ ಪ್ರಾರ್ಥನೆಯ ನೇತೃತ್ವವನ್ನು ವಹಿಸಿದ್ದರು. ಆಗಮಿಸಿದ್ದ ಎಲ್ಲರಿಗೂ ಶಾಂತಿ ಮತ್ತು ಸೌಹಾರ್ದತೆ ಸಂದೇಶವನ್ನು ಸಾರಿದರು.

ಬಳಿಕ ಅವರು ಮಾತನಾಡಿ ದೇಶ ಹಾಗೂ ರಾಜ್ಯದಲ್ಲಿಡೆ ಪವಿತ್ರ ಬಕ್ರೀದ್ ಹಬ್ಬವನ್ನು ಆಚರಿಸಲಾಗುತ್ತಿದೆ. ದೇಶಾದ್ಯಂತ ಹಿಂದೂ ಮತ್ತು ಮುಸ್ಲಿಮರು ಸೌಹಾರ್ದತೆಯಿಂದ ಸಹಬಾಳ್ವೆ ಮಾಡುವಂತಾಗಲಿ ಎಂದು ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ನಂಜನಗೂಡಿನ ಎಲ್ಲಾ ಮಸೀದಿಗಳು ಹಾಗೂ ಪ್ರಾರ್ಥನಾ ಮಂದಿರಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ತ್ಯಾಗ–ಬಲಿದಾನದ ಸಂಕೇತವಾದ ಬಕ್ರೀದ್‌ಗೆ ವಿಶೇಷ ಸ್ಥಾನ



ತಿ.ನರಸೀಪುರ, ಜೂ.7– ತ್ಯಾಗ–ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವು ದೇಶದಲ್ಲಿ ವಿಶೇಷ ಸ್ಥಾನಮಾನವನ್ನು ಪಡೆದಿದೆ ಎಂದು ಎನ್.ಕೆ.ಎಫ್. ಪಬ್ಲಿಕ್ ಶಾಲೆಯ ಶಾಲಾಧ್ಯಕ್ಷ ಎನ್.ಕೆ.ಫರೀದ್ ಹೇಳಿದರು.

ಶನಿವಾರ ಮುಸ್ಲಿಂ ಬಾಂಧವರೊಂದಿಗೆ ಬಕ್ರೀದ್ ಹಬ್ಬ ಆಚರಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಮಾತನಾಡಿದ ಅವರು, ತಾಲೂಕಿನ ಜನತೆಗೂ ಬಕ್ರೀದ್ ಶುಭಾಶಯ ತಿಳಿಸಿದರು.

ಇಬ್ರಾಹಿಂ ಖಲೀಮುಲ್ಲಾ ಅವರು ತಮ್ಮ ಮಗ ಇಸ್ಮಾಯಿಲ್ ಜಬೀವುಲ್ಲಾನನ್ನು ಅಲ್ಲಾನಿಗೆ (ದೇವರಿಗೆ) ತ್ಯಾಗ ಮಾಡಲು ನಿರ್ಧರಿಸಿ ತಮ್ಮ ತ್ಯಾಗ ಮತ್ತು ಬಲಿದಾನದ ಮೂಲಕ ದೇವರನ್ನು ಒಲಿಸಿಕೊಂಡ ದ್ಯೋತಕವಾಗಿ ಈ ಹಬ್ಬ ಆಚರಿಸಲಾಗುತ್ತದೆ.

ಈ ಹಬ್ಬದ ಸಂದರ್ಭದಲ್ಲಿ ಮುಸಲ್ಮಾನರು ತಮ್ಮ ಆಹಾರವನ್ನು ಮೂರು ಭಾಗ ಮಾಡಿ, ಒಂದು ಭಾಗವನ್ನು ಸಂಬಂಧಿಗಳಿಗೆ, ಇನ್ನೊಂದು ಭಾಗವನ್ನು ಬಡವರಿಗೆ ಹಾಗೂ ಉಳಿದ ಇನ್ನೊಂದು ಭಾಗವನ್ನು ಸ್ವಂತಕ್ಕೆ ಬಳಸುವ ಮೂಲಕ ಭಕ್ತಿ ಪ್ರದರ್ಶಿಸಲಾಗುತ್ತದೆ. ಇದು ಸಮಾನತೆಯ ಸಂಕೇತವೂ ಹೌದು ಎಂದರು.

ಬೇರೆ ಧರ್ಮದ ಹಬ್ಬಗಳಲ್ಲಿ ಮುಸ್ಲಿಂ ಬಾಂಧವರು ಪಾಲ್ಗೊಳ್ಳುವ ಜೊತೆಗೆ ನಮ್ಮ ಹಬ್ಬಗಳ ಸಂದರ್ಭದಲ್ಲಿಯೂ ಇತರೆ ಧರ್ಮದವರನ್ನು ಒಳಪಡಿಸಿಕೊಳ್ಳುವ ಮೂಲಕ ಬಾಂಧವ್ಯ ಮೆರೆಯಬೇಕಿದೆ ಎಂದರು.

ಮುಸಲ್ಮಾನ್ ಧರ್ಮದಲ್ಲಿ ರಂಜಾನ್ ಹಾಗೂ ಬಕ್ರೀದ್ ಎರಡು ಹಬ್ಬಗಳು ವಿಶೇಷತೆ ಪಡೆದುಕೊಂಡಿವೆ. ರಂಜಾನ್ ಹಬ್ಬದಲ್ಲಿ ನಾವು ಒಂದು ವರ್ಷದಲ್ಲಿ ಎಷ್ಟು ಹಣ ಸಂಪಾದನೆ ಮಾಡುತ್ತೇವೆ. ಹಾಗೂ ಮನೆಯಲ್ಲಿ ಇಟ್ಟಿರುವ ಚಿನ್ನಾಭರಣಗಳನ್ನು ಲೆಕ್ಕ ಹಾಕಿ ಅದರಲ್ಲಿ ಶೇ.2.5ರಷ್ಟನ್ನು ದಾನವಾಗಿ ನೀಡಬೇಕಿದೆ. ಅದೇ ರೀತಿ ಬಕ್ರೀದ್ ಹಬ್ಬದಲ್ಲಿ ತನ್ನ ಮಗನನ್ನೇ ತ್ಯಾಗ ಮಾಡಲೊರಟ ಪ್ರವಾದಿಯವರ ನೆನಪಿನಲ್ಲಿ ಕುರಿಗಳನ್ನು ಬಲಿದಾನ ಮಾಡಲಾಗುತ್ತದೆ. ಬಲಿ ನಂತರ ಕುರಿ ಮಾಂಸವನ್ನು ಮೂರು ಭಾಗ ಮಾಡಿ ಸಂಬಂಧಿಕರಿಗೆ, ಬಡವರಿಗೆ ಒಂದೊಂದು ಭಾಗ ದಾನ ಮಾಡಿ ಉಳಿದ ಒಂದು ಭಾಗವನ್ನು ನಾವು ಉಪಯೋಗಿಸುತ್ತೇವೆ ಎಂದು ಅವರು ಇದೇ ಸಂದರ್ಭದಲ್ಲಿ ವಿವರಿಸಿದರು.

ಹಬ್ಬದ ಆಚರಣೆ ವೇಳೆ ಮುಸ್ಲಿಂ ಸಮುದಾಯದ ಮುಖಂಡರು ಮತ್ತು ಅಕ್ಕ ಪಕ್ಕದ ನಿವಾಸಿಗಳ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಶಿವಮ್ಮ ನಿಧನ



ಹೆಚ್.ಡಿ.ಕೋಟೆ: ಪುರಸಭೆ ಸ್ಥಾಯಿಸಮಿತಿ ಅಧ್ಯಕ್ಷ ಮಧುಕುಮಾರ್ ಅವರ ತಾಯಿ ಶಿವಮ್ಮ(65) ಶನಿವಾರ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಭಾನುವಾರ ಪಟ್ಟಣದಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರು ಮಿತ್ರ

ತಂದೆ-ತಾಯಿ ಆರಾಧಿಸಿದರೆ ನಿಮ್ಮ ಇಷ್ಟಾರ್ಥ ಪೂರೈಕೆಯಾಗುತ್ತೆ...

• ವಿದ್ಯಾರ್ಥಿ ಸಮೂಹಕ್ಕೆ ಶಾಸಕ ಜಿ.ಟಿ.ದೇವೇಗೌಡರ ಕಿವಿಮಾತು • ಮಾಜಿ ಕಾರ್ಪೋರೇಟರ್ ಸವಿತಾ ಸುರೇಶ್ ದಂಪತಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭಕ್ಕೆ ಚಾಲನೆ



ನಗರಪಾಲಿಕೆ ವಾರ್ಡ್ ನಂ.44ರ ಮಾಜಿ ಸದಸ್ಯೆ ಸವಿತಾ ಸುರೇಶ್ ನೇತೃತ್ವದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಶಾಸಕ ಜಿ.ಟಿ.ದೇವೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ ಮತ್ತಿತರರಿದ್ದರು.

ಮೈಸೂರು, ಜೂ.7(ಎಂಕೆ)- ತಂದೆ-ತಾಯಿಯೇ ದೇವರೆಂದು ಹೃದಯದಲ್ಲಿ ಪೂಜಿಸಿ, ಅವರನ್ನು ಸಂತೋಷಪಡಿಸಿದರೆ ಗುರಿ ತಲುಪಲು ಸಾಧ್ಯ ಸಮಾಜದಲ್ಲಿ ಉತ್ತಮ ನಾಗರಿಕರಾಗಿ ದೇಶಕ್ಕೆ ಕೊಡುಗೆ ನೀಡಲು ಸಾಧ್ಯ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರಪಾಲಿಕೆ ವಾರ್ಡ್ ನಂ.44ರ ವ್ಯಾಪ್ತಿಯ ಬೋಗಾದಿ 2ನೇ ಹಂತದಲ್ಲಿ ನಗರಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್ ನೇತೃತ್ವದಲ್ಲಿ ಆಯೋಜಿಸಿದ್ದ 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆ ಯಲ್ಲಿ ತೇರ್ಗಡೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇವಾಲಯಗಳಿಗೆ ಹೋಗಿ ದೇವರಿಗೆ ಪೂಜೆ ಸಲ್ಲಿಸುವುದರ ಜೊತೆಗೆ ತಮ್ಮ ಕಣ್ಣೆದುರೇ ಕಾಣುವ ದೇವರುಗಳಾದ ತಂದೆ-ತಾಯಿಯನ್ನು ಹೃದಯದಲ್ಲಿ ಪೂಜಿಸಿ, ಅವರ ಕನಸನ್ನು ನನಸು ಮಾಡುವ ಮೂಲಕ ಅವರನ್ನು ಸಂತೋಷಪಡಿಸಿದರೆ ನೀವು ಅಂದುಕೊಂಡ ಕೆಲಸವೂ ಆಗುತ್ತದೆ. ತಲುಪಬೇಕಾದ ಗುರಿಯನ್ನೂ ತಲುಪುತ್ತೀರಿ ಎಂದು ಕಿವಿಮಾತು ಹೇಳಿದರು.

ಇವತ್ತಿನ ದಿನಮಾನಗಳಲ್ಲಿ ನಮ್ಮ ಮಕ್ಕಳು ವಿದ್ಯಾವಂತರಾಗಬೇಕು. ದೇಶದ ಆಸ್ತಿಯಾಗಬೇಕು ಎಂಬುದು ಎಲ್ಲಾ ತಂದೆ-ತಾಯಿಗಳ ಕನಸಾಗಿರುತ್ತದೆ. ಅವರ ಕನಸನ್ನು ಈಡೇರಿಸುವ ನಿಟ್ಟಿನಲ್ಲಿ ಸಂಸ್ಕಾರಯುತ ಶಿಕ್ಷಣ ಪಡೆಯುವ ಮೂಲಕ ಒಂದಲ್ಲಾ ಒಂದು ರೀತಿಯಲ್ಲಿ ದೇಶ ಸೇವೆ ಮಾಡುವ ಶಕ್ತಿ ಪಡೆದುಕೊಳ್ಳಬೇಕು. ಅದೇ ರೀತಿ ಪೋಷಕರು ಸಹ ತಮ್ಮ ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಬೆಳೆಸಬೇಕು. ಮಕ್ಕಳ ಎದುರು ತಂದೆ-ತಾಯಿ ಹೇಗೆ ನಡೆದುಕೊಳ್ಳುತ್ತಾರೆ ಎಂಬುದು ಮುಖ್ಯವಾಗುತ್ತದೆ. ನಾವು ಹಿರಿಯರನ್ನು ಕಂಡು ನಮಸ್ಕರಿಸಿದರೆ, ನಮ್ಮ ಮಕ್ಕಳು ಕೂಡ ನಮಸ್ಕರಿಸುತ್ತಾರೆ ಎಂದು ಸಲಹೆ ನೀಡಿದರು.

ಬ್ರಾಹ್ಮಿ ಮುಹೂರ್ತದಲ್ಲಿ ಎದ್ದೇಳಿ: ಮಕ್ಕಳು ಬೆಳಗ್ಗೆ 5 ಗಂಟೆಗೆ ಬ್ರಾಹ್ಮಿ ಮುಹೂರ್ತದಲ್ಲಿ ಎದ್ದು ಓದು ಮತ್ತು ಇನ್ನಿತರೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ, ಇಡೀ ದಿನ ನೆಮ್ಮದಿ, ಉತ್ಸಾಹದಿಂದ ಕೂಡಿರುತ್ತದೆ. ಹಾಗಾಗಿ ಸೋಮಾರಿಗಳಾಗದೇ ಬ್ರಾಹ್ಮಿ ಮುಹೂರ್ತದಲ್ಲೇ ಎದ್ದು, ಕೆಲಸ-ಕಾರ್ಯಗಳನ್ನು ಆರಂಭಿಸಿ. ಹಾಗೆಯೇ ಬರೀ ಶಿಕ್ಷಣ ಪಡೆಯುವುದಲ್ಲದೆ ಕ್ರೀಡೆ, ಕಲೆ, ಸಾಹಿತ್ಯದಲ್ಲಿಯೂ ತೊಡಗಿಸಿಕೊಂಡರೆ, ತಲ್ಲೀನತೆಯಿಂದ ಕಲಿತರೆ ಯಾವುದಾದರೂ ಒಂದು ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಜೊತೆಗೆ ಸ್ವಯಂ ಉದ್ಯೋಗ ಮಾಡುವ ಕೌಶಲ್ಯತೆಗಳನ್ನು ರೂಡಿಸಿಕೊಳ್ಳಬೇಕು. ಎಂದಿಗೂ ತಾಳ್ಮೆ ಕಳೆದುಕೊಳ್ಳಬಾರದು. ಯಾರನ್ನೂ ದ್ವೇಷ ಮಾಡದೇ ಎಲ್ಲರನ್ನೂ ಪ್ರೀತಿ, ಗೌರವದಿಂದ ಕಾಣಬೇಕು ಎಂದು ತಿಳಿಸಿದರು.

ಜನರ ಪ್ರೀತಿ-ವಿಶ್ವಾಸ ಪಡೆದಿದ್ದಾರೆ: ವಾರ್ಡ್ ನಂ.44ರ ನಗರಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್ ದಂಪತಿಗಳಿಬ್ಬರೂ ವಾರ್ಡ್ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ವಾರ್ಡ್‌ನ ಪ್ರತೀ ರಸ್ತೆಯೂ ಡಾಂಬರೀಕರಣವಾಗಿದೆ. ಅಭಿವೃದ್ಧಿ ಕೆಲಸಗಳ ಮೂಲಕವೇ ವಾರ್ಡ್ ಜನರ ಪ್ರೀತಿ-ವಿಶ್ವಾಸ ಗಳಿಸಿರುವ ಅವರ ಸೇವೆ ಮುಂದುವರೆಯಲಿ ಎಂದು ಹಾರೈಸಿದರು.

ಇಡೀ ವಾರ್ಡ್‌ಗೆ ಕುಡಿಯುವ ನೀರು: ಜೆಡಿಎಸ್ ಮುಖಂಡ ಸುರೇಶ್ ಮಾತನಾಡಿ, ನಗರಪಾಲಿಕೆ ಸದಸ್ಯರಾಗಿ ಆಯ್ಕೆಯಾಗಿ ಮನೆಯಲ್ಲಿ ಕೂರುವುದಲ್ಲ. ವಾರ್ಡ್‌ನ ಪ್ರತಿಯೊಂದು ಸಮಸ್ಯೆಯನ್ನು ಪಟ್ಟಿ ಮಾಡಿಕೊಂಡು ಬಗೆಹರಿಸಿ. ನನಗೆ ಯಾವುದೇ ದೂರು ಬರಬಾರದು ಎಂದು ಶಾಸಕರು ನೀಡಿದ್ದ ಸೂಚನೆಯಂತೆ ಕೆಲಸ ಮಾಡಿದ್ದೇವೆ. 4 ಕೋಟಿ ರೂ. ವೆಚ್ಚದಲ್ಲಿ ಇಡೀ ವಾರ್ಡ್‌ಗೆ ಪೈಪ್‌ಲೈನ್ ಮೂಲಕ ಕುಡಿಯುವ ನೀರಿನ ಪೂರೈಕೆ ಮಾಡಲಾಗಿದ್ದು, ಎಲ್ಲಾ ರಸ್ತೆಗಳು ಡಾಂಬರೀಕರಣಗೊಂಡಿವೆ. ಅಧಿಕಾರ ಇಲ್ಲದಿದ್ದರೂ ಜನರ ಸಮಸ್ಯೆಗಳಿಗೆ ನಿರಂತರವಾಗಿ ಸ್ಪಂದಿಸುತ್ತಿದ್ದೇವೆ ಎಂದು ತಿಳಿಸಿದರು.

ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನೆ: ನಂತರ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 60ಕ್ಕೂ ಹೆಚ್ಚು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ಹಾಗೆಯೇ ಶಾಸಕರಾಗಿ 2 ವರ್ಷ ಪೂರೈಸಿದ ಹಿನ್ನಲೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಸನ್ಮಾನಿಸಲಾಯಿತು. ಜೊತೆಗೆ ಮಾಜಿ ಮೇಯರ್ ಆರ್.ಲಿಂಗಪ್ಪ, ಟಿಎಪಿಎಂ ಎಸ್ ಸದಸ್ಯ ಚಂದ್ರಶೇಖರ್, ಕರಾಟೆ ತರಬೇತುದಾರ ಸುನಿಲ್ ಕುಮಾರ್, ಆಯಾಮ ನೃತ್ಯ ಅಕಾಡೆಮಿಯ ಶಾಂಭವಿಸ್ವಾಮಿ, ವಲಯ ಆಯುಕ್ತ ಸತ್ಯಮೂರ್ತಿ, ಉಮಾಶಂಕರ್ ಅವರನ್ನು ಅಭಿನಂದಿಸಲಾಯಿತು. ಜೆಡಿಎಸ್ ಮುಖಂಡರಾದ ವಕೀಲ ಸಿದ್ದರಾಜು, ಕೇಬಲ್ ರವಿ, ಆನಂದ್, ಪ್ರೆಸ್ ರಾಜು, ಕುಮಾರ್, ಮಂಜು, ಶಶಿಧರ್, ವಿಜಯನಗರ ಮಂಜು, ಪುಟ್ಟಸ್ವಾಮಿಗೌಡ, ಲಿಂಗೇಗೌಡ, ವಾಲ್ ಮಂಜು, ಸೊಸೈಟಿ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

> **ಇನ್ನೊಂದು ವರ್ಷದಲ್ಲಿ ಇಡೀ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಕುಡಿಯುವ ನೀರು...!**
>
> ವಿಶಾಲ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಶಕ್ತಿ ಮೀರಿ ಕೆಲಸ ಮಾಡಲಾಗುತ್ತಿದೆ. ಸುಮಾರು 545 ಕೋಟಿ ರೂ.ವೆಚ್ಚದ ಉಂಡುವಾಡಿ ಕುಡಿಯುವ ನೀರು ಪೂರೈಕೆ ಯೋಜನೆ ಹೆಚ್ಚೆಂದರೆ ಇನ್ನೊಂದು ವರ್ಷದಲ್ಲಿ ಪೂರ್ಣಗೊಳ್ಳಲಿದ್ದು, ಇಡೀ ಚಾಮುಂಡೇಶ್ವರಿ ಕ್ಷೇತ್ರದಲ್ಲಿರುವ ಕುಡಿಯುವ ನೀರಿನ ಸಮಸ್ಯೆ ಸಂಪೂರ್ಣವಾಗಿ ಬಗೆಹರಿಯಲಿದೆ. ನಾನು ಯಾವತ್ತೂ ಕ್ಷೇತ್ರದ ಮತದಾರರಿಗೆ ಅಪಕೀರ್ತಿ ತರುವ ಕೆಲಸ ಮಾಡಿಲ್ಲ. ಮಾಡುವುದೂ ಇಲ್ಲ. ಕಳೆದ 50 ವರ್ಷಗಳಿಂದಲೂ ಮಾಡಿಲ್ಲ. ದೊರೆತಿರುವ ಇಷ್ಟೆಲ್ಲಾ ಕೀರ್ತಿ ನನ್ನನ್ನು ಗೆಲ್ಲಿಸಿರುವ ನಿಮಗೆ ಸಲ್ಲಬೇಕು.
>
> - ಜಿ.ಟಿ.ದೇವೇಗೌಡ, ಶಾಸಕ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ



ಶನಿವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರಿನ 44ನೇ ವಾರ್ಡಿನ ಜೆಡಿಎಸ್ ಮುಖಂಡರಾದ ಸುರೇಶ್ ಅವರಿಗೆ ಹಿರಿಯ ಶಾಸಕ ಜಿ.ಟಿ.ದೇವೇಗೌಡರು. ಕೇಕ್ ತಿನ್ನಿಸುವ ಮೂಲಕ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯೆ ಸವಿತಾ ಸುರೇಶ್, ಮಾಜಿ ಮೇಯರ್ ಲಿಂಗಪ್ಪ, ಜೆಡಿಎಸ್ ಮುಖಂಡರಾದ ಶಶಿಧರ್, ನಾರಾಯಣ್, ಪುಟ್ಟಸ್ವಾಮಿಗೌಡ, ಸಿದ್ದು, ಮಂಜು ಹಾಗೂ ಅಭಿಮಾನಿಗಳು, ಹಿತೈಷಿಗಳು ಶುಭಾಶಯ ಕೋರಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೌಸ್‌ಫುಲ್-5 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಲೇಜ್ ಕಲಾವಿದ (ಕ) + ನೀತಿ (ಕ)	2+2 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಮದ್ರಾಸ್ ಮ್ಯಾಟಿನಿ (ತ)	4 ಪ್ರದರ್ಶನಗಳು
ಸಂಗಂ	
ಹೌಸ್‌ಫುಲ್-5 (ಹಿಂ)	4 ಪ್ರದರ್ಶನಗಳು
ಲಿಡೋ	
ಅಪ್ಪು (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
-	-
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಇಂದು ನೂತನ ಕಚೇರಿ ಉದ್ಘಾಟನೆ; ಪ್ರತಿಭಾ ಪುರಸ್ಕಾರ

ಮೈಸೂರು, ಜೂ.7- ಕರ್ನಾಟಕ ಅರಸು ಮಹಾಮಂಡಳಿ ಚಾರಿಟಬಲ್(ಕೆಯುಎಂಸಿ) ಟ್ರಸ್ಟ್‌ನ ನೂತನ ಕಚೇರಿ ಉದ್ಘಾಟನೆ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಭಾನುವಾರ(ಜೂ.8) ಬೆಳಗ್ಗೆ 11ಕ್ಕೆ ಏರ್ಪಡಿಸಲಾಗಿದೆ.

ಮೈಸೂರಿನ ಗೋಕುಲಂ 3ನೇ ಹಂತ, 2ನೇ ಮೇನ್, 4ನೇ ಕ್ರಾಸ್‌ನಲ್ಲಿರುವ ಟ್ರಸ್ಟ್‌ನ ನೂತನ ಕಚೇರಿಯನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಉದ್ಘಾಟಿಸಲಿದ್ದು, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ಅವರು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಿದ್ದಾರೆ. ಈ ವೇಳೆ ಮಂಗಳೂರು ಗಣೇಶ ಬೀಡಿ ವರ್ಕ್ಸ್ ಮ್ಯಾನೇಜಿಂಗ್ ಟ್ರಸ್ಟಿ ಡಾ.ಎಂ.ಜಗನ್ನಾಥ ಶೆಣೈ, ನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಕೆಯುಎಂಸಿ ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸ್, ಗೌರವಾಧ್ಯಕ್ಷ ಎಂ.ಎಲ್.ಬಸವರಾಜೇ ಅರಸ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿರಲಿದ್ದಾರೆ.

ಮೂರು ದಿನಗಳ ವರ್ಣಂ ಕಾರ್ಯಾಗಾರ ಸಂಪನ್ನ



ಮೈಸೂರು, ಜೂ.7(ಎಸ್‌ಪಿಎನ್)-ಮೈಸೂರು ವಿಜಯನಗರದ ತ್ರಿಪುರ ಪಾಠಶಾಲೆಯಲ್ಲಿ ಭೈರವಿ ನಾಟ್ಯಶಾಲೆ ವತಿಯಿಂದ ಏರ್ಪಡಿಸಿದ್ದ ಮೂರು ದಿನಗಳ ವರ್ಣಂ ಕಾರ್ಯಾಗಾರವು ಸಂಪನ್ನಗೊಂಡಿತು.

ಹಿರಿಯ ನೃತ್ಯಪಟು ವಿದುಷಿ ಶೀಲಾ ಶ್ರೀಧರ್, ಡಾ. ತುಳಸಿ ರಾಮಚಂದ್ರ, ವಿದ್ವಾನ್ ಬದರಿ ದಿವ್ಯ ಭೂಷಣ್ ಉಪಸ್ಥಿತಿಯಲ್ಲಿ ಬೆಂಗಳೂರಿನ ಸಂಸ್ಕೃತಿ -ಟೆಂಪಲ್ ಆಫ್ ಆರ್ಟ್ಸ್ ನೃತ್ಯ ಸಂಸ್ಥೆಯ ಹಿರಿಯ ನೃತ್ಯಪಟು ವಿದ್ವಾನ್ ಸತ್ಯನಾರಾಯಣ ರಾಜು ಅವರು, ಅಷ್ಟರಾಗಮಾಲಿಕ ವರ್ಣವನ್ನು ಶಿಬಿರಾರ್ಥಿಗಳಿಗೆ ಸೂಕ್ಷ್ಮವಾಗಿ ವಿವರಿಸಿದರಲ್ಲದೆ, ಅಷ್ಟರಾಗಮಾಲಿಕಾ ವರ್ಣವನ್ನು ಅಭಿನಯಿಸಿ ವಿದ್ಯಾರ್ಥಿಗಳಿಗೆ ವಿವರಿಸಿದರು.

ಕವಿ ಎಚ್‌ಎಸ್‌ವಿ ಸಂಸ್ಮರಣೆ: ನಂತರ ಇತ್ತೀಚೆಗೆ ನಿಧನರಾದ ಹಿರಿಯ ಕವಿ ಡಾ.ಹೆಚ್.ಎಸ್. ವೆಂಕಟೇಶಮೂರ್ತಿ ರಚಿತ ಕವಿತೆಗಳಾದ 'ಲೋಕದ ಕಣ್ಣಿಗೆ ರಾಧೆಯು ಕೂಡ ಎಲ್ಲರಂತೆ ಒಂದು ಹೆಣ್ಣು'.., 'ಇಷ್ಟು ಕಾಲ ಒಟ್ಟಿಗಿದ್ದು' ಎಂಬ ಕವಿತೆಗೆ ಹಿರಿಯ ನೃತ್ಯಪಟು ಸತ್ಯನಾರಾಯನ ರಾಜು ಅವರು ನೃತ್ಯ ಪ್ರದರ್ಶಿಸುವ ಮೂಲಕ ಎಚ್‌ಎಸ್‌ವಿ ಅವರಿಗೆ ನೃತ್ಯ ನಮನ ಸಲ್ಲಿಸಿದರು.

ಪದ್ಮಶ್ರೀ ಪುರಸ್ಕೃತ ವಿದುಷಿ ಚಿತ್ರಾ ವಿಶ್ವೇಶ್ವರನ್ ಗುರು ಪರಂಪರೆ ಕುರಿತು ಮಾತನಾಡಿದರು. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ನೇಪಥ್ಯದಲ್ಲಿ ವಿದುಷಿ ವಸುಧಾ ಬಾಲಕೃಷ್ಣ (ಹಾಡುಗಾರಿಕೆ), ಭರತ್ ನಾರಾಯಣ್ (ನಟುವಾಂಗ), ವಿದ್ವಾನ್ ವಿನಯ್ ನಾಗರಾಜ್ (ಮೃದಂಗ), ವಿದ್ವಾನ್. ಕಾರ್ತಿಕ್ ಸಾತವಳ್ಳಿ (ಕೊಳಲು) ಗಮನ ಸೆಳೆದರು. ತ್ರಿಪುರ ಪಾಠ ಶಾಲೆಯ ವಿದುಷಿ ಗೌರಿ ಸೇತುರಾಮ್ ಅವರನ್ನು ಗೌರವಿಸಲಾಯಿತು. ಅವರಿಗೆ ಕಾರ್ಯಕ್ರಮ ಆಯೋಜಕ ಭರತ್ ನಾರಾಯಣ ಗೌರವಿಸಿದರು.

ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೊಸ ಕ್ಯಾಂಪಸ್‌ಗೆ ಸ್ಥಳಾಂತರವಾಗುವ ಭಾಗ್ಯ ಬಂದಿಲ್ಲ

ರಾಜಕಾರಣಿಗಳು, ಅಧಿಕಾರಿಗಳ 'ಅಮೃತ' ಘಳಿಗೆ ಬರಬೇಕಿದೆ!



ಕುವೆಂಪುನಗರ ಪ್ರಥಮ ದರ್ಜೆ ಕಾಲೇಜಿನ ಮೈಸೂರು ಜೆ.ಪಿ.ನಗರದ ನೂತನ ಕ್ಯಾಂಪಸ್ ಕಟ್ಟಡ

ಮೈಸೂರು,ಜೂ.7(ಎಸ್‌ಪಿಎನ್)- 2025-26ನೇ ಸಾಲಿನ ಶೈಕ್ಷಣಿಕ ಚಟುವಟಿಕೆ ಆರಂಭವಾದರೂ ರಾಜಕಾರಣಿಗಳು, ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯಿಂದಾಗಿ ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಬಿ.ಕಾಂ ಮತ್ತು ಬಿಬಿಎ ವಿಭಾಗದ ನೂತನ (ಜೆ.ಪಿ.ನಗರ)ಕ್ಯಾಂಪಸ್ ಕಟ್ಟಡ ಲೋಕಾರ್ಪಣೆಗೆ ಕಾಲ ಕೂಡಿ ಬಂದಿಲ್ಲ.

1996ರಲ್ಲಿ ಆರಂಭವಾದ ಕುವೆಂಪುನಗರ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾರಂಭದಲ್ಲಿ ಕಡಿಮೆ ವಿದ್ಯಾರ್ಥಿಗಳಿದ್ದರು. ಪ್ರಸ್ತುತ 1,700 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈಗಿರುವ ಕ್ಯಾಂಪಸ್‌ನಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಸ್ಥಳಾವಕಾಶ ಕೊರತೆಯಿಂದಾಗಿ ವ್ಯಾಸಂಗಕ್ಕೆ ತೀವ್ರ ತೊಂದರೆಯಾಗುತ್ತಿದೆ.

2018ರಲ್ಲಿ ಈ ಅಂಶವನ್ನು ಮನಗಂಡ ಅಂದಿನ ಕೆ.ಆರ್.ಕ್ಷೇತ್ರದ ಶಾಸಕರಾಗಿದ್ದ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತಂದು ಕುವೆಂಪುನಗರ ಪ್ರಥಮ ದರ್ಜೆ ಕಾಲೇಜು ವಿಸ್ತರಿಸಲು 4.10ಕೋಟಿ ವೆಚ್ಚದಲ್ಲಿ ಮೈಸೂರು ಜೆ.ಪಿ.ನಗರದ (ಸಿದ್ದಲಿಂಗೇಶ್ವರ ಲೇ ಔಟ್ ಒಂದನೇ ಹಂತ) ನಿವೇಶನ ಸಂಖ್ಯೆ 233ರಲ್ಲಿ (10 ಗುಂಟೆ ಜಾಗ) 9 ಕೊಠಡಿ, ಕಾಲೇಜು ಕಚೇರಿ ಕೊಠಡಿ, ಯುವಕ-ಯುವತಿಯರಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿ, ಪ್ರಾಂಶುಪಾಲರ ಕೊಠಡಿ ನಿರ್ಮಿಸಲಾಗಿದೆ. ಅಲ್ಲದೆ, 2024-25ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ 10 ಕೊಠಡಿಗಳ ನಿರ್ಮಾಣಕ್ಕೆ 3 ಕೋಟಿ ಅನುದಾನ ಮೀಸಲಿಡಲಾಗಿದೆ. ಈಗಾಗಲೇ ಇದಕ್ಕೆ ಬೇಕಾದ ಶೇ.60ರಷ್ಟು ಡೆಸ್ಕ್‌ಗಳು ಬಂದಿದ್ದು, ಇದನ್ನು ಅಳವಡಿಸಲು ಸರ್ಕಾರದ ಅನುಮತಿಗಾಗಿ ಕಾಯುವ ಪರಿಸ್ಥಿತಿ ಬಂದಿದೆ ಎನ್ನುತ್ತಾರೆ ಕಾಲೇಜು ವಿದ್ಯಾರ್ಥಿಗಳು.

ಈ ಕಾಲೇಜಿಗೆ ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ, ಹಂಪಾಪುರ, ಸರಗೂರು ಹಾಗೂ ಹೆಚ್.ಡಿ.ಕೋಟೆ ಹ್ಯಾಂಡ್ ಪೋಸ್ಟ್ ಸೇರಿದಂತೆ ಇತರೆ ಗ್ರಾಮಗಳಿಂದ ಸುಮಾರು 500ಕ್ಕೂ ಅಧಿಕ ವಿದ್ಯಾರ್ಥಿಗಳು ಪ್ರತಿವರ್ಷ ಪ್ರವೇಶಾತಿ ಪಡೆಯುತ್ತಿದ್ದಾರೆ. ಈ ಕಾಲೇಜಿನ ಬಿಎ ವಿಭಾಗದಲ್ಲಿ ಇತಿಹಾಸ, ಸಮಾಜಶಾಸ್ತ್ರ, ಕನ್ನಡ, ಅರ್ಥಶಾಸ್ತ್ರ, ರಾಜಶಾಸ್ತ್ರ ವಿಷಯಗಳಿವೆ. ಬಿ.ಎಸ್ಸಿ ವಿಭಾಗದಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಕಂಪ್ಯೂಟರ್‌ಸೈನ್ಸ್, ಎಲೆಕ್ಟ್ರಾನಿಕ್ಸ್, ಗಣಿತ ವಿಷಯಗಳಿವೆ. ಬಿ.ಕಾಂ ಮತ್ತು ಬಿಬಿಎ ವಿಭಾಗದಲ್ಲಿ ವಾಣಿಜ್ಯ ವಿಷಯ ಹಾಗೂ ಎಇಡಿಪಿ ವಿಷಯವನ್ನು ಒಳಗೊಂಡಿದ್ದು ಎಲ್ಲಾ ವಿಭಾಗದಿಂದ ಸುಮಾರು 1,700 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.

ಇನ್ನುಳಿದಂತೆ ಪಿರಿಯಾಪಟ್ಟಣ, ಕೊಳ್ಳೇಗಾಲ ಹಾಗೂ ಉತ್ತರ ಕರ್ನಾಟಕ ಭಾಗದ ವಿದ್ಯಾರ್ಥಿಗಳು ಮೈಸೂರಿನ ವಿವಿಧ ಪಿಜಿ, ಹಾಸ್ಟೆಲ್‌ಗಳಲ್ಲಿ ಪ್ರವೇಶಾತಿ ಪಡೆದು ನಮ್ಮ ಕಾಲೇಜಿನಲ್ಲಿ ವ್ಯಾಸಂಗ ಮುಂದುವರೆಸುತ್ತಿದ್ದಾರೆ. ಅದರಲ್ಲೂ ಹಳ್ಳಿಯ ಶೇ.40ರಷ್ಟು ಹೆಣ್ಣು ಮಕ್ಕಳು ಪ್ರವೇಶಾತಿ ಪಡೆಯುತ್ತಿರುವುದು ವಿಶೇಷ. ನೂತನ ಕ್ಯಾಂಪಸ್‌ನಲ್ಲಿ ಹುಡುಗರಿಗೆ ಎಂಟು ಶೌಚಾಲಯ, ವಿದ್ಯಾರ್ಥಿನಿಯರಿಗೆ ಆರು ಶೌಚಾಲಯ ನಿರ್ಮಿಸಲಾಗಿದೆ. ಕಾಲೇಜಿನಲ್ಲಿ ನೀರಿಗೆ ಕೊರತೆ ಎದುರಾಗದಂತೆ ಕಾಲೇಜು ಆವರಣದಲ್ಲಿ ಬೋರ್‌ವೆಲ್ ಹಾಕಿಸಲಾಗಿದ್ದು, ಇದರಲ್ಲಿ ಒಂದೂವರೆ ಇಂಚು ನೀರು ದೊರಕಿದೆ. ಹಾಗಾಗಿ ವಿದ್ಯುತ್ ಸಂಪರ್ಕ ಸೇರಿದಂತೆ ಎಲ್ಲಾ ಸೌಕರ್ಯವನ್ನು ಕಲ್ಪಿಸಲಾಗಿದೆ. ನೂತನ ಕಟ್ಟಡದ ಬಣ್ಣ-ಸುಣ್ಣ ಮಾಸುವ ಮುನ್ನ ಇದರ ಉಪಯೋಗಕ್ಕೆ ಜಿಲ್ಲಾಡಳಿತ ಅನುಮತಿ ನೀಡಿದರೆ ಬಿ.ಕಾಂ, ಬಿಬಿಎ ವಿಭಾಗ ಸ್ಥಳಾಂತರಿಸುತ್ತೇವೆ ಎನ್ನುತ್ತಾರೆ ಕಾಲೇಜು ಅಧ್ಯಾಪಕರು.

> ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು(ಜೆ.ಪಿ.ನಗರ ಕ್ಯಾಂಪಸ್) ವಿಸ್ತರಣಾ ಕಟ್ಟಡದ ಮುಂಭಾಗದ ಮುಡಾ ಸುಬರ್ದಿಯಲ್ಲಿರುವ ವಿಶಾಲ ಸರ್ಕಾರಿ ಜಾಗವಿದ್ದು, ಈ ಜಾಗದಲ್ಲಿ ಎರಡು ಪ್ರಸ್ತಾವನೆಗಳಿಗೆ ಒತ್ತಡವಿದೆ. ಕಾಲೇಜು ವಿದ್ಯಾರ್ಥಿಗಳು ಕ್ರೀಡಾಂಗಣಕ್ಕೆ ಪಟ್ಟು ಹಿಡಿದಿದ್ದಾರೆ. ಸ್ವಲ್ಪ ಜಾಗದಲ್ಲಿ ಜೆ.ಪಿ.ನಗರ ಬಸ್ ನಿಲ್ದಾಣ ಸ್ಥಾಪನೆಗೆ ಒತ್ತಡವೂ ಇದೆ. ಈ ವಿಚಾರ ಕುರಿತು ಸರ್ಕಾರದ ಮಟ್ಟದಲ್ಲಿ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಮುಂದಿನ ನಿರ್ಧಾರಕ್ಕೆ ಬರಲಾಗುವುದು.
>
> - ಟಿ.ಎಸ್.ಶ್ರೀವತ್ಸ್, ಶಾಸಕ

ಎರಡು ಬಾರಿ ಮುಂದೂಡಿಕೆ: 2024ರ ಜು.31ರಂದು ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪರಿಂದ ನೂತನ ಕ್ಯಾಂಪಸ್ ಉದ್ಘಾಟನೆಗೆ ಅವರ ದಿನಾಂಕ ನಿಗದಿಯಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಯ ಸಿಗದ ಕಾರಣ ಕಟ್ಟಡ ಉದ್ಘಾಟನೆ ಮುಂದೂಡಿಕೆಯಾಗಿತ್ತು. ಮತ್ತೆ 2025ರ ಮೇ 28ರಂದು ಉದ್ಘಾಟನೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ ದಿನಾಂಕ ನಿಗದಿಗೆ ಮನವಿ ಮಾಡಲಾಗಿತ್ತು. ಆದರೆ, ಆಗಲೂ ಮುಖ್ಯಮಂತ್ರಿಗಳ ದಿನಾಂಕ ನಿಗದಿಯಾಗದ ಕಾರಣ ಕಟ್ಟಡ ಲೋಕಾರ್ಪಣೆ ದಿನಾಂಕ ಮುಂದೂಡಲಾಗಿತ್ತು. ಹೀಗೆ ರಾಜಕಾರಣಿಗಳು, ಅಧಿಕಾರಿಗಳು ಬೇರೆ ಬೇರೆ ಕಾರಣಗಳಿಗೆ ಕಟ್ಟಡ ಉದ್ಘಾಟನೆಗೆ ಸಮಯ ನೀಡುತ್ತಿಲ್ಲ ನೂತನ ಕಟ್ಟಡದಲ್ಲಿ ಪಾಠ ಕೇಳುವ ಅದೃಷ್ಟ ನಮಗೆ ಸಿಗುತ್ತಿಲ್ಲ ಎಂದು ವಿದ್ಯಾರ್ಥಿಗಳು ಬೇಸರ ವ್ಯಕ್ತಪಡಿಸಿದರು.

ಕ್ರೀಡಾಂಗಣಕ್ಕೆ ಜಾಗ ಮೀಸಲಿಡುವಂತೆ ಒತ್ತಾಯ: ಕುವೆಂಪುನಗರ ಹಳೆಯ ಕಾಲೇಜು ಕಟ್ಟಡ ಕ್ಯಾಂಪಸ್‌ನಲ್ಲೂ ಕ್ರೀಡೆಗೆ ಜಾಗವಿಲ್ಲ. ಹೊಸ ಕಟ್ಟಡದಲ್ಲೂ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಲು ಜಾಗದ ಸಮಸ್ಯೆ ಎದುರಾಗಿದೆ. ಹಾಗಾಗಿ ನೂತನ ಕ್ಯಾಂಪಸ್ ಮುಂಭಾಗ ಮುಡಾಗೆ ಸೇರಿದ ಆರು ಎಕರೆ ಸರ್ಕಾರಿ ಜಾಗವಿದ್ದು, ಇದರಲ್ಲಿ ಕ್ರೀಡಾಂಗಣಕ್ಕೆ ಜಾಗ ಕಲ್ಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಲ್ಲಿ ವಿದ್ಯಾರ್ಥಿನಿಯರು ಒತ್ತಾಯಿಸಿದ್ದಾರೆ.

ಆಡಳಿತ ಪಕ್ಷದ ನಡೆಗೆ ಶಾಸಕರ ಬೇಸರ: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಸಮಯ ಹೊಂದಾಣಿಕೆಯಾಗದೆ, ಐದಾರು ಬಾರಿ ಕಾಲೇಜು ಕಟ್ಟಡ ಉದ್ಘಾಟನಾ ದಿನಾಂಕ ಮುಂದೂಡಲಾಗಿದೆ. ಈ ಬುಧವಾರವೂ ಉನ್ನತ ಶಿಕ್ಷಣ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿ, ನೂತನ ಕಾಲೇಜು ಕ್ಯಾಂಪಸ್ ಉದ್ಘಾಟನೆಗೆ ಸಮಯ ನೀಡುವಂತೆ ಮನವಿ ಮಾಡುತ್ತೇನೆ. ಅದು ಸಾಧ್ಯವಾಗದಿದ್ದರೆ, ನೂತನ ಕಟ್ಟಡಕ್ಕೆ ಬಿ.ಕಾಂ ಮತ್ತು ಬಿಬಿಎ ವಿಭಾಗದ ವಿದ್ಯಾರ್ಥಿಗಳನ್ನು ಸ್ಥಳಾಂತರಿಸುವಂತೆ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಒತ್ತಡ ತರಲಾಗುವುದು ಎಂದು ಶಾಸಕ ಟಿ.ಎಸ್.ಶ್ರೀವತ್ಸ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ತಿಂಗಳಲ್ಲಿ ಒಳ ಮೀಸಲಾತಿ ಜಾರಿ

ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ವಿಶ್ವಾಸ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಶನಿವಾರ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜೂ.7(ಬಿಎಲ್‌ಯು)- ರಾಜ್ಯ ಕಾಂಗ್ರೆಸ್ ಸರ್ಕಾರ ಒಳ ಮೀಸಲಾತಿಯನ್ನು ಒಂದು ತಿಂಗಳಲ್ಲಿ ಜಾರಿಗೊಳಿಸಲಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ಸ್ಪಷ್ಟ ಅಂಕಿ ಅಂಶಗಳ ಕೊರತೆಯ ಕಾರಣ ಸರ್ಕಾರ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ರಚನೆ ಮಾಡಿ ವರದಿ ನೀಡುವಂತೆ ಹೇಳಿದೆ. ಆಯೋಗ ಶೀಘ್ರವೇ ವರದಿ ನೀಡಲಿದ್ದು, ತರುವಾಯ ಒಂದು ತಿಂಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒಳ ಮೀಸಲಾತಿ ಜಾರಿ ಮಾಡಲಿದ್ದಾರೆ ಎಂದರು.

ರಾಜ್ಯ ಸರ್ಕಾರ ಈ ಸಂಬಂಧ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ್ದು, ಬದ್ಧತೆ ತೋರಿಸಿದೆ. ಆದರೆ ಕೆಲವು ಸ್ವಯಂ ಘೋಷಿತ ಸಂಘ-ಸಂಸ್ಥೆಗಳು ಜನರಿಗೆ ತಪ್ಪು ಮಾಹಿತಿ ನೀಡಿ ಅಪಪ್ರಚಾರ ಮಾಡುತ್ತಿವೆ ಎಂದು ಡಾ.ತಿಮ್ಮಯ್ಯ ಆರೋಪಿಸಿದರು.

ಸಿದ್ದರಾಮಯ್ಯ ಅವರ ಬಗ್ಗೆ ಅಸಂಬದ್ಧ ಹೇಳಿಕೆ ನೀಡುತ್ತಿದ್ದು, ಇದಕ್ಕೆ ವಿರೋಧ ಪಕ್ಷಗಳ ಕುಮ್ಮಕ್ಕು ಇದೆ. ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಮುಂದಾಗಿದ್ದಾರೆ. ರಾಜಕೀಯ ಪ್ರೇರಿತವಾಗಿ ಜನರಿಗೆ ಸರ್ಕಾರದ ಬಗ್ಗೆ ತಪ್ಪು ಭಾವನೆ ಮೂಡಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜೂನ್ 9 ರಂದು ಬೆಂಗಳೂರಿನಲ್ಲಿ ಸಮಾವೇಶ ಆಯೋಜಿಸಿದ್ದು, ಯಾರೂ ಅದರಲ್ಲಿ ಪಾಲ್ಗೊಳ್ಳಬಾರದು ಎಂದು ಮನವಿ ಮಾಡಿದರು.

ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ನಡೆಸಿದ ಸಮೀಕ್ಷೆಯ ಆರಂಭದ ಹಂತದಲ್ಲಿ ಸ್ವಲ್ಪ ನಿಧಾನವಾಗಿರಬಹುದು. ತರುವಾಯ ತಾಂತ್ರಿಕ ಸಮಸ್ಯೆ ಪರಿಹಾರ ಮಾಡಿ ವೈಜ್ಞಾನಿಕವಾಗಿ ಸರ್ವೆ ಮಾಡಲಾಗಿದೆ. ಸಮೀಕ್ಷೆಯಲ್ಲಿ ಯಾವುದೇ ತಪ್ಪುಗಳಾಗದೆ ಪರಿಪೂರ್ಣವಾದ ಸಮೀಕ್ಷೆ ನಡೆಸಲಾಗಿದೆ ಎಂದು ಡಾ.ತಿಮ್ಮಯ್ಯ ವಿಶ್ವಾಸ ವ್ಯಕ್ತಪಡಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಮಾಜಿ ಮೇಯರ್ ನಾರಾಯಣ್ ಹಾಗೂ ಇತರರು ಉಪಸ್ಥಿತರಿದ್ದರು.

ಕೈಲಾಸ ಶಿವಗಣಾರಾಧನಾ ಆಹ್ವಾನ



ಶ್ರೀಮತಿ ಭವಾನಿ ರವರು
ಲಿಂಗೈಕ್ಯ : 30–05–2025

ಅದಾಗಿ ನನ್ನ ಧರ್ಮಪತ್ನಿಯವರಾದ ಶ್ರೀಮತಿ ಭವಾನಿ ಲಿಂಗೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ತತ್ಸಂಬಂಧವಾಗಿ ದಿನಾಂಕ : 09–06–2025 ನೇ ಸೋಮವಾರ ಬೆಳಗ್ಗೆ 8.30ಕ್ಕೆ ಮರಿಯಾಲ ಶ್ರೀಗಳ ಪಾದಪೂಜೆ ಹಾಗೂ ಮಧ್ಯಾಹ್ನ 12 ಗಂಟೆಗೆ ಕೈಲಾಸ ಶಿವಗಣಾರಾಧನೆಯನ್ನು ನಮ್ಮ ಸ್ವಗೃಹ ಹೆಗ್ಗೋಠಾರದಲ್ಲಿ ಏರ್ಪಡಿಸಲಾಗಿದೆ.
ಆಹ್ವಾನ ಪತ್ರಿಕೆ ತಲುಪದ ಬಂಧುಗಳು, ಸ್ನೇಹಿತರು ಇದನ್ನೇ ಆಹ್ವಾನವೆಂದು ಮನ್ನಿಸಿ ಸಕಾಲಕ್ಕೆ ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ,


ದುಃಖತಪ್ತರು: ಶ್ರೀ ಪಟೇಲ್ ಕುಮಾರ್ ಮತ್ತು ಮಕ್ಕಳು, ಪಟೇಲ್ ಕುಟುಂಬ ವರ್ಗದವರು, ಬಂಧುಮಿತ್ರರು ಹಾಗೂ ಗ್ರಾಮಸ್ಥರು.

46 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮಾನ್ ಎಂ.ಕೆ. ಗುರುಲಿಂಗೇಗೌಡ

ಅಧ್ಯಕ್ಷರು, ಶ್ರೀ ಅನ್ನಪೂರ್ಣೇಶ್ವರಿ ಎಜುಕೇಷನ್ ಟ್ರಸ್ಟ್ ರಿ. ಇವರು ದಿ: 29–05–2025ನೇ ಗುರುವಾರದಂದು ದೈವಾಧೀನರಾಗಿದ್ದು ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ: 08–06–2025ನೇ ಭಾನುವಾರ ಬೆಳಿಗ್ಗೆ 11–30 ಗಂಟೆಗೆ ಮಹದೇವಪುರ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೃತರ ಪತ್ನಿ ಶ್ರೀಮತಿ ಅಂಗಮ್ಮ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧುಗಳು

PUBLIC NOTICE

Our client intend to purchase the notice schedule property from its owners 1) Smt. Padmamma, W/o Late. Kempegowda, aged about 66 years, 2). Smt. Savitha K, D/o Late. Kempegowda, aged about 46 years, and Smt. Sujatha. K, D/o Late. Kempegowda, aged about 38 years, all are residing at Srinivasa Agrahara, K.Shettahalli Hobli, Srirangapattana Taluk, Mandya District.

The above mentioned Smt. Padmamma, Smt. Savitha. K and Smt. Sujatha. K, who are all the present absolute owners in possession of the Notice schedule property and are having valid and marketable title over the same and the same is free from encumbrance. In that view of the matter, hereby given this Notice to the Public that, If any person/s having any claim, right, title, Interest or any objection/s and/or opposing the sale transaction in whatsoever manner may lodge his/her/their objections/s with relevant documentary proof to the undersigned within 7 days from the date of this publication, failing which, it will be presumed that no other person/s has got any right over the schedule property and our client will proceed to complete the sale transaction thinking that it is free from encumbrances.

SCHEDULE

Land bearing Sy. No. 107/2, situated at Kallikoppalu Grama, K.Shettahalli, Srirangapattana Taluk, Mandya District, measuring 00 Acres 9.08 Guntas and bounded on: - East by: Land belongs to Ramegowda, West by: National Highway, North by: Land belongs to Papanna, South by: Land belongs to Raju .

For **VIJU ASSOCIATES,**
Sd/-P.T. Ponnappa, ADVOCATE
No.175/1, K22/1, Rama Vilas Road, 1st Floor, Opp. Central Bank of India, K.R. Mohalla, Mysuru-570024. Mob: 9880025685,
E-mail: vijuponnappa(@rediffmail.com
Place: Mysuru, Date: 07.06.2025

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,
ನೆಹರು ವೃತ್ತ ಅಶೋಕ ರಸ್ತೆ, ಮೈಸೂರು-570001
ದೂ: 2520836, 2436460, 2421047, ಫ್ಯಾಕ್ಸ್ ನಂ: 0821-252083

ನಂ:ಮುಕಾನಿ:ಚುನಾವಣೆ: 1632 :2025–26 ದಿ:05.06.2025

ಪ್ರಕಟಣೆ (ಚುನಾವಣಾ ಜರೂರು)

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.. ನೆಹರು ವೃತ್ತ. ಅಶೋಕ ರಸ್ತೆ, ಮೈಸೂರು, ಬ್ಯಾಂಕಿನ 2025 ರಿಂದ 2030ರ ವರೆಗಿನ ಐದು ವರ್ಷಗಳ ಆಡಳಿತ ಮಂಡಳಿ ಚುನಾವಣೆಯ ಸಂಬಂಧ ಈಗಾಗಲೇ ಸದಸ್ಯ ಸಹಕಾರ ಸಂಘಗಳು ಭರ್ತಿ ಮಾಡಿದ ಡೆಲಿಗೇಟ್ ಫಾರಂಗಳನ್ನು ಸಲ್ಲಿಸಿದ್ದು, ಸಹಕಾರ ಸಂಘಗಳ ಕಾಯ್ದೆ 1959 13(ಡಿ) 5(ಬಿ) ರೀತ್ಯಾ ದಿ :30.04.2025ರ ಅಂತ್ಯಕ್ಕೆ ಬ್ಯಾಂಕಿನ ಕ್ಷೇತ್ರ–1 ಕ್ಷೇತ್ರ–2 ಮತ್ತು ಕ್ಷೇತ್ರ–4 ರ ಡೆಲಿಗೇಟ್/ಪ್ರತಿನಿಧಿಗಳನ್ನೊಳಗೊಂಡ ಕರಡು ಅರ್ಹ ಮತ್ತು ಅನರ್ಹ ಸಹಕಾರ ಸಂಘಗಳ ಮತದಾರರ ಪಟ್ಟಿಯನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಡೆಲಿಗೇಟ್/ಪ್ರತಿನಿಧಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದರೆ ದಿನಾಂಕ:08.06.2025 ರ ಸಂಜೆ 6.00 ಘಂಟೆಯೊಳಗೆ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಸಲ್ಲಿಸಲು ಸೂಚಿಸಿದೆ.

ಸಹಿ/– ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿ.,
ಎನ್. ಮಾಧವರಾವ್ ವೃತ್ತ. ಮೈಸೂರು. ದೂ: 0821–2520894/4259665

ಪ್ರಕಟಣೆ

1. 2023–24 ನೇ ಸಾಲಿಗೆ ಶೇ10 ರಂತೆ ಡಿವಿಡೆಂಡ್ ವಿತರಿಸಲಾಗುತ್ತಿದೆ. ಮಾನ್ಯ ಸದಸ್ಯರುಗಳು ಪಾಸ್ ಪುಸ್ತಕ ಹಾಜರುಪಡಿಸಿ ಪಡೆಯುವುದು
2. ಚಿನ್ನಾಭರಣಗಳ ಮೇಲೆ ಶೇ9.0 ರಂತೆ ಗ್ರಾಂಗೆ ರೂ.6300/– ರಂತೆ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ.
3. ಮನೆ ಹಾಗೂ ನಿವೇಶನಗಳ ಮೇಲೆ. ಮನೆ/ನಿವೇಶನ ಕೊಳ್ಳುವ ಉದೇಶಕ್ಕೆ ಶೇ 12.5 ರಂತೆ ಗರಿಷ್ಟ 40 ಲಕ್ಷ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ. (ಸುಸ್ತಿ ಬಡ್ಡಿ ಪಾವತಿಸದೇ ಸರಿಯಾಗಿ ಕಂತುಗಳನ್ನು ಕಟ್ಟಿದವರಿಗೆ ಬಡ್ಡಿಯಲ್ಲಿ 1% ರಿಯಾಯಿತಿ ನೀಡಲಾಗುವುದು.)
4. ಠೇವಣಿಗಳ ಮೇಲೆ ಗರಿಷ್ಟ ಶೇ 8 ರಂತೆ ಹಾಗೂ ಹಿರಿಯ ನಾಗರೀಕರಿಗೆ ಶೇ 8.5 ರಂತೆ ಬಡ್ಡಿ ನೀಡಲಾಗುತ್ತಿದೆ.

ಡಿ. ಬಸವರಾಜು (ಬಸಪ್ಪ)	ಶ್ರೀಮತಿ ಹೆಚ್.ಎನ್. ಸರ್ವಮಂಗಳ	ಡಿ. ಅನಂತವೀರಪ್ಪ
ಅಧ್ಯಕ್ಷರು	ಉಪಾಧ್ಯಕ್ಷರು	ಪ್ರ.ವ್ಯವಸ್ಥಾಪಕರು

ನಿರ್ದೇಶಕರುಗಳಾದ: ನಂಪಿದ್ದಪ್ಪ, ಜಿ.ಎಂ.ಪಂಚಾಕ್ಷರಿ. ಹೆಚ್.ವಿ.ಭಾಸ್ಕರ್. ಎಂ.ಡಿ.ಪಾರ್ಥಸಾರಥಿ (ಪಾತಿ), ಪ್ರತಿಧ್ವನಿಪ್ರಸಾದ್ ಟಿ.ವಿ ಗಣೇಶ್ ಮೂರ್ತಿ, ಶ್ರೀಮತಿ ನಾಗಜ್ಯೋತಿ ಬಿ.. ನವೀನ್ ಕುಮಾರ್ ಎಂ.ಎನ್., ಎಂ.ಎಸ್. ಅರುಣ್ (ಅರುಣ್ ಸಿದ್ದಪ್ಪ). ಹೆಚ್.ವಾಸು, ಶಿವಪ್ರಕಾಶ್ ಎಂ.